ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟಂಬರ್, ೨೦೧೮ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೭ ಸಂಚಿಕೆ: ೮

ಚಂದಾ ರೂ. ೨೦೦/- (ಅಕ್ಟೋಬರ್, ೨೦೧೮ ರಿಂದ ಸೆಪ್ಟಂಬರ್, ೨೦೧೯ ರವರೆಗೆ) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಮ್ಮ ವಿಶೇಷ ಸಂಚಿಕೆಗೆ ನೀವು ನೀಡಿರುವ ಸ್ವಾಗತ ನಮ್ಮ ಮನದುಂಬಿದೆ. ಈ ಕಾಲದ ಒಂದು ದೊಡ್ಡ ದುರಾದೃಷ್ಟವೆಂದರೆ, ಬಹಳಷ್ಟು ಜನ ಬರವಣಿಗೆಯ ಆನಂದವನ್ನೇ ಕಳೆದುಕೊಂಡಿರುವುದು ಮತ್ತು ಅವರಿಗೆ ತಮ್ಮ ಸಂತೋಷ ಅಥವಾ ಅಸಮಾಧಾನ-ಭಿನ್ನಾಭಿಪ್ರಾಯಗಳನ್ನು ಸಮೂಹದೊಂದಿಗೆ ಹಂಚಿಕೊಳ್ಳುವ ಆಸೆಯೇ ಇಲ್ಲವಾಗಿರುವುದು! ಇದೆಲ್ಲ ಅವರಿಗೆ ಸಮಯ ವ್ಯರ್ಥವೆನಿಸಿರಬಹುದು. ಹೀಗಾಗಿ ನಮ್ಮ ವಿಶೇಷ ಸಂಚಿಕೆಯ ಬಗ್ಗೆ ನನ್ನೊಂದಿಗೆ ಮುಖತಃ ಅಥವಾ ದೂರವಾಣಿಯಲ್ಲಿ ಮಾತಾಡಿದವರಲ್ಲಿ ಒಂದು ಭಾಗ ಮಾತ್ರ (ಇದರಲ್ಲಿ ಕೆಲವರು ನನ್ನ ಒತ್ತಾಯದ ಮೇರೆಗೆ) ಪತ್ರ ಬರೆದು ತಮ್ಮ ಅಭಿಪ್ರಾಯಗಳನ್ನು ಇತರ ಓದುಗರೊಂದಿಗೆ ಹಂಚಿಕೊಂಡಿದ್ದಾರೆ. 'ಹೊಸ ಮನುಷ್ಯ'ದಂತಹ ಸಣ್ಣ ಪತ್ರಿಕೆಯ ಸೊಗಸಿರುವುದೇ ಅದರ ಓದುಗ ಸಮೂಹದ ನಡುವೆ ಪರಸ್ಪರ ನಡೆಸಬಹುದಾದ ಒಂದು ಸಂವಾದದಲ್ಲಿ. ಆದರೆ ನಮ್ಮ ಜನ ಎಡವೋ, ಬಲವೋ ಒಂದು ಬದ್ಧ ರಾಜಕೀಯ ಸಂಘಟನೆಯ, ಜಾತಿ-ಮತಗಳ ಅಥವಾ ಲೌಕಿಕ ಲಾಭೋದ್ದೇಶಗಳ ವಿಷಯದ ಹೊರತಾಗಿ ಮತ್ತಾವ ವಿಷಯದಲ್ಲೂ ಸಮೂಹ ಸಂವಾದದ ಆಸಕ್ತಿಯೇ ಇಲ್ಲದ ದ್ವೀಪಗಳಾಗಿ ಹೋಗಿದ್ದಾರೆನಿಸುತ್ತದೆ. ಇದರ ಪರಿಣಾಮಗಳನ್ನು ಜನ ತಮ್ಮ ಕುಟುಂಬ ಮತ್ತು ಸಮಾಜಗಳಲ್ಲಿ ಎದುರಿಸುತ್ತಿದ್ದಾರಾದರೂ, ಇದು ಏಕೆ ಆಗುತ್ತಿದೆ ಎಂದು ಯೋಚಿಸಲಾಗುತ್ತಿಲ್ಲ. ಏಕೆಂದರೆ ಈಗ ಯೋಚಿಸಲು ಅವರಿಗೆ ಪುರುಸೊತ್ತಿಲ್ಲ! ಬದುಕೆಂದರೆ ದುಡಿಯುವುದು, ಸಂಪಾದಿಸುವುದು. ಉಣ್ಣುವುದು ಎಂದಷ್ಟೇ ಆಗಿ ಹೋಗಿದೆ ಈಗ. ಈ ಸಂದರ್ಭದಲ್ಲಿ ನನಗೆ ಮತ್ತೆ ಫುಕುವೋಕಾನ ಈ ಬೆರಗು ನೆನಪಿಗೆ ಬರುತ್ತಿದೆ : 'ಇಡೀ ಸೃಷ್ಟಿಯಲ್ಲಿ ಮನುಷ್ಯನೊಬ್ಬನೇ ಬದುಕಲು ದುಡಿಯುತ್ತಿರುವುದು!'

ಇರಲಿ. ಬರೆಯದಿದ್ದರೂ ಮಾತಾಡಲಾದರೂ ಪುರುಸೊತ್ತು ನಮ್ಮ ಕೆಲ ಓದುಗರಾಗಾದರೂ ಇದೆಯಲ್ಲ ಅದು ಪತ್ರಿಕೆ ನಡೆಯಲು ಸ್ಫೂರ್ತಿಯಾಗಿದೆ. ಮಾತಾಡಿದ ಮತ್ತು ಪತ್ರ ಬರೆದಿರುವ ಕೆಲ ಓದುಗರು ಪತ್ರಿಕೆಯ ಬಗ್ಗೆ ಮಾಡಿರುವ ದೊಡ್ಡ ದೂರೆಂದರೆ, ಪತ್ರಿಕೆಯಲ್ಲಿ ಮುದ್ರಣದೋಷಗಳು ಹೇರಳವಾಗಿವೆ ಮತ್ತು ಪುಟ ವಿನ್ಯಾಸ ಕೆಟ್ಟದಾಗಿದೆ ಎಂಬುದು. ಅದು ವಾಸ್ತವವಾಗಿ ಮುದ್ರಕರ ದೋಷವಲ್ಲ. ಅವು ನಮ್ಮ ಕಡೆಯಿಂದ ಆಗಿರುವ ದೋಷಗಳು. ಅದು ಬಹು ಹಿಂದೆಯೇ ನಮ್ಮ ಗಮನಕ್ಕೆ ಬಂದು ಅದಕ್ಕೆ ಕಾರಣವಾಗಿದ್ದ ನಮ್ಮ ಗಣಕದಲ್ಲ 'ಸಾಫ್ಟ್‌ವೇರ್' ದೋಷವನ್ನು ಸರಿಪಡಿಸಿಕೊಳ್ಳಲು (ಕರಡು ತಿದ್ದುಪಡಿಗಳು) ಮಾಡಿದ ಪ್ರಯತ್ನಗಳೆಲ್ಲ ನಮಗೇ ಗೊತ್ತಿಲ್ಲದಂತೆ ವಿಫಲವಾಗುತ್ತಿದ್ದವು. ಈಗ ಅದನ್ನು ಸರಿಪಡಿಸಿದ್ದೇವೆ ಎಂದುಕೊಂಡಿದ್ದೇವೆ. ಹಾಗಾಗಿ ಮುಂದೆ ತಪ್ಪಾಗಲಾರವು ಎಂದು ನಂಬಿದ್ದೇವೆ. ಇನ್ನು ಪುಟ ವಿನ್ಯಾಸದ ವಿಷಯ. ಅದು ಏಕೆ ಕೆಟ್ಟದಾಗಿದೆ, ಹೇಗೆ ಅದನ್ನು ಸುಧಾರಿಸಬಹುದು ಎಂಬುದನ್ನು ಓದುಗರು ಹೇಳಿಲ್ಲ. ಹೇಳಿದ್ದರೆ ಸುಧಾರಿಸಿಕೊಳ್ಳಬಹುದಿತ್ತು. ಬದಲಿಗೆ ಅವರು ಲೇಖಕರಿಗೆ ಸಂಭಾವನೆ ಕೊಡುವುದನ್ನು ಬಿಟ್ಟು ಆ ಹಣವನ್ನು ವೃತ್ತಿಪರರೊಬ್ಬರಿಗೆ ಕೊಟ್ಟು ಉತ್ತಮ ಪುಟ ವಿನ್ಯಾಸ ಮಾಡಿಸಿರಿ ಎಂದು ಸೂಚಿಸಿದ್ದಾರೆ. ವರ್ಷಕ್ಕೊಮ್ಮೆ ನಮ್ಮ ಲೇಖಕರಿಗೆ ಸಾಂಕೇತಿಕವಾಗಿಯಾದರೂ (ಅಂದರೆ ತನ್ನ ಕೈಲಾದಷ್ಟು) ಸಂಭಾವನೆ ನೀಡುವುದು ಪತ್ರಿಕೆಗೊಂದು ಹೆಮ್ಮೆಯ ವಿಷಯವಾಗಿದೆ. ಈ ವರ್ಷವೂ ಸುಮಾರು ಮುವ್ವತ್ತೈದು ಸಾವಿರ ರೂಪಾಯಿಗಳ ಮೌಲ್ಯದ ಸಂಭಾವನೆ ನೀಡಿದ್ದೇವೆ. ಇದರಲ್ಲಿ ಸಂಭಾವನೆ ಬೇಡವೇ ಬೇಡವೆಂದವರಿಗೆ, ಬರುವ ವರ್ಷದ ಉಚಿತ ಚಂದಾದ ಜೊತೆಗೆ ಅವರು ಸೂಚಿಸಿದ ಇಬ್ಬರಿಗೆ ಎರಡು/ಮೂರು ಉಚಿತ ಚಂದಾ ಅಥವಾ ಶುಭಾಶಯ ಜಾಹೀರಾತಿನ ಆಯ್ಕೆ ನೀಡಿದ್ದೂ ಇದರಲ್ಲಿ ಸೇರಿದೆ. ಆದರೆ ಒಂದು ವಿಷಯ : 'ಹೊಸ ಮನುಷ್ಯ' ಯಾವುದೇ ನೆಲೆಯಲ್ಲಿಯೂ ವೃತ್ತಿಪರವಾಗಲು ಇಚ್ಛಿಸುವುದಿಲ್ಲ ಎಂಬುದು. ಇದು ಒಂದು ರೀತಿಯ ಕುಟೀರ 'ಕೈ'-ಗಾರಿಕೆಯೇ ಆಗಿ ಉಳಿಯಬಯಸುತ್ತದೆ. ಏಕೆಂದರೆ ಮೊದಲಾಗಿ ಈ ಪತ್ರಿಕೆ ಒಂದು ಗ್ರಾಹಕ ವಸ್ತುವಲ್ಲ. ಎರಡನೆಯದಾಗಿ ಇದೊಂದು ಇನ್ನೊಬ್ಬರಿಗೆ ಹೇಳಿ ಮಾಡಿಸುವಂತಹ ಮಾದರಿ ಅಚ್ಚಿಗೆ ಒದಗುವ ಕೆಲಸವೂ ಅಲ್ಲ. ಜೊತೆಗೆ ಹಣ ಕೊಟ್ಟು ಈ ಕೆಲಸ ಮಾಡಿಸುವ ಕೆಲಸಗಳ ಸಮಸ್ಯೆಗಳು ಹಲವು ತೆರನವು. ಹಾಗಾಗಿ ಈ ನನ್ನ ಕೆಲಸವನ್ನು ನಾನೇ ಆನಂದದಿಂದ ಮಾಡಿ ಮೆಚ್ಚುಗೆ ಅಥವಾ ದೂಷಣೆಯನ್ನು ಪಡೆಯುವುದು ನನ್ನ ಹಕ್ಕು ಮತ್ತು ಸಂತೋಷ ಎಂದು ನಾನು ಭಾವಿಸಿದ್ದೇನೆ.

ಇನ್ನೊಂದಿಬ್ಬರು ಓದುಗರು ಜಾಹೀರಾತುಗಳ ಬಗ್ಗೆ ಬರೆದಿದ್ದಾರೆ. ವಾಸ್ತವವಾಗಿ ನಾವು ಪ್ರಕಟಿಸುತ್ತಿರುವುದು ನಿಜಾರ್ಥದಲ್ಲಿ ಜಾಹೀರಾತುಗಳೇ ಅಲ್ಲ. ಪತ್ರಿಕೆಗೆ ನೆರವಾಗುತ್ತಿರುವ ಸ್ನೇಹಿತರ ಸಣ್ಣ ಪುಟ್ಟ ಕೊಡುಗೆಗಳಿಗೆ ನಾವು ದಾಖಲಿಸುತ್ತಿರುವ ಕೃತಜ್ಞತೆ ಮಾತ್ರ. ವ್ಯಾಪಾರಿ ಜಾಹೀರಾತು ಎನಿಸಿಕೊಳ್ಳುವವು ವರ್ಷದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಇದ್ದು ಅವು ಹೆಚ್ಚಾಗಿ ವಾರ್ಷಿಕ ವಿಶೇಷಾಂಕಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಇಂತಹ ಜಾಹೀರಾತುಗಳು ಬೇಡವೇ ಬೇಡ ಎನ್ನುವವರು ವಾರ್ಷಿಕ ವಿಶೇಷಾಂಕವನ್ನೂ ಬೇಡ ಎನ್ನಬೇಕಾಗುತ್ತದೆ. ತೀರ್ಮಾನ ಓದುಗರದ್ದು. ಹೀಗೆ ಕೊಡುಗೆ ಕೊಟ್ಟ ಹಲವರು ಯಾವ ಜಾಹೀರಾತೂ ಬೇಡ; ಜಾಹೀರಾತು ಹಾಕಲೇಬೇಕೆಂದಿದ್ದರೆ ತಮ್ಮ ಹೆಸರು ಬೇಡವೆನ್ನುತ್ತಾರೆ. ಆದರೆ ನಮ್ಮ ಕೃತಜ್ಞತೆ ಮತ್ತು ಒಂದು ಹಣಕಾಸಿನ ಜವಾಬ್ದಾರಿಯಾಗಿ ನಾವು ಅದನ್ನು ಆಗ್ರಹಿಸುತ್ತೇವೆ. ಈ ಬಗ್ಗೆ ಓದುಗರ ಪ್ರತಿಕ್ರಿಯೆಯಯನ್ನು ಸ್ವಾಗತಿಸುತ್ತೇವೆ.

****

ತೇಜಸ್ವಿಯವರ 'ಮಾಯಾಲೋಕ'ದ ಒಂದು ಪಾತ್ರ ಊರಿನ ತರಲೆ ತಾಪತ್ರಯಗಳನ್ನು ನೋಡಿ ಹೀಗೆ ಹೇಳುತ್ತದೆ :'ಒಮ್ಮೆ ಒಳ್ಳೆ ಮಳೆ ಬರಲಿ. ಆಗ ನೋಡಿ, ಈ ತರಲೆ-ತಾಪತ್ರಯಗಳೆಲ್ಲ ಹೇಗೆ ಕಾಣೆಯಾಗುತ್ತವೆ ಎಂದು!' ಈ ಬಾರಿಯ ಮಳೆ ದೇಶವನ್ನೇ, ವಿಶೇಷವಾಗಿ ಕೇರಳ-ಕರ್ನಾಟಕಗಳನ್ನು ಈ ಸ್ಥಿತಿಗೆ ತಳ್ಳಿದಂತಿದೆ. ನಿಜ, ಇದು ಒಳ್ಳೆಯ ಮಳೆಯಲ್ಲ. ದೆವ್ವ ಮಳೆ. ನಮ್ಮ ಕೊಡಗಿನ ಪಾಲಿಗಂತೂ. ಅದರ ಕಥೆಯನ್ನು ಈ ಸಂಚಿಕೆಯ &ನೇ ಪುಟದಲ್ಲಿ ನಿರೂಪಿಸಲಾಗಿದೆ. ದಯವಿಟ್ಟು ಓದಿ. ಈ ದುರಂತ ಕಥೆಯ ಅತಿ ದುರಂತ ಭಾಗವೆಂದರೆ ಈಗಲೂ ಅಲ್ಲಿನ ರಾಜಕಾರಣಿಗಳು ಅಭಿವೃದ್ಧಿಗೂ ಪರಿಸರಕ್ಕೂ ಸಂಬಂಧವಿಲ್ಲ ಎಂದು ಅರಚುತ್ತಿರುವುದು ಮತ್ತು ಸರ್ಕಾರಗಳು ಇದಕ್ಕೆ ಕುಮ್ಮಕ್ಕು ನೀಡುತ್ತಿರುವಂತಿರುವುದು.


ಇನ್ನು ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿಯವರು ತಮ್ಮ ಅಧಿಕಾರಾವಧಿಯ ಬಗ್ಗೆ ತಮಗೇ ನಂಬಿಕೆ ಇಲ್ಲದಂತೆ ಸಾಲ ಮನ್ನಾ, ಋಣ ಪರಿಹಾರ ಕಾಯ್ದೆ ಇತ್ಯಾದಿ ಅಭೂತಪೂರ್ವ 'ಜನಪರ' ಕಾರ್ಯಕ್ರಮಗಳನ್ನು ಘೋಷಿಸಿ ಹತ್ತಿರದಲ್ಲೇ ಮತ್ತೊಂದು ರಾಜ್ಯ ವಿಧಾನಸಭೆ ಚುನಾವಣೆಗಳ ಮುನ್ಸೂಚನೆ ಸಿಕ್ಕವರಂತೆ ತಮ್ಮ ಪರವಾದ ಜನಪ್ರಿಯತೆಯ ಅಲೆಯೊಂದನ್ನು ಸೃಷ್ಟಿಕೊಳ್ಳುವ ಸುಲಭ ರಾಜಕಾರಣ ಮಾಡಹೊರಟಂತಿದೆ. ಅದಕ್ಕೆ ತಕ್ಕಂತೆ ಸಿದ್ದರಾಮಯ್ಯನವರೂ ತೆರೆಮರೆಯ 'ವೈಯಕ್ತಿಕ' ರಾಜಕಾರಣ ಮುಂದುವರೆಸಿದಂತಿದೆ. ಜೆಡಿಎಸ್-ಕಾಂಗ್ರೆಸ್ ಮೈತ್ರಿ ಜನರ ಹಿತಕ್ಕಾಗಿ ಸೃಷ್ಟಿಯಾದ ಮೈತ್ರಿಯಲ್ಲ ಎಂಬುದು ದಿನೇ ದಿನೇ ಸಾಬೀತಾಗುತ್ತಿದೆ.

(೯ನೇ ಪುಟಕ್ಕೆ

ಶ್ರದ್ಧಾಂಜಲಿ

ಅಗಲಿದ ಇಬ್ಬರು ಜನ ನಾಯಕರು

ವಾಕ್ಚತುರ ವಾಜಪೇಯಿ



ನಮ್ಮ ಜನಪ್ರಿಯ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಇನ್ನಿಲ್ಲ. ಕಳೆದ ಹತ್ತು ಹನ್ನೆರಡು ವರ್ಷಗಳಿಂದಲೇ ಅವರು ಅಸ್ವಸ್ಥರಾಗಿದ್ದು ಸಾರ್ವಜನಿಕ ಜೀವನದಲ್ಲಿ ಸಂಪೂರ್ಣ ನಿಷ್ಕ್ರಿಯರೇ ಆಗಿದ್ದು ಈಗ ಕೊನೆಯುಸಿರೆಳೆದು ಸುದ್ದಿಗೆ ವಸ್ತುವಾಗಿದ್ದಾರೆ. ಅವರಿಗೆ ಪತ್ರಿಕೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಬಯಸುತ್ತದೆ.


ವಾಜಪೇಯಿಯವರ ಸಾರ್ವಜನಿಕ ವ್ಯಕ್ತಿತ್ವ ಮತ್ತು ರಾಜಕೀಯ ವರ್ತನೆಗಳನ್ನು ಕಂಡ ರಾಜಕೀಯ ವಿಶ್ಲೇಷಕರು ಅವರನ್ನು ಅವರ ರಾಜಕೀಯ ಜೀವನದ ಸಮಕಾಲೀನರೇ ಆಗಿದ್ದ ಪಿ.ವಿ. ನರಸಿಂಹರಾವ್ ಅವರಿಗೆ ಹೋಲಿಸಿ, 'ನರಸಿಂಹರಾವ್ ಕಾಂಗ್ರೆಸ್ಸಿನೊಳಗಿನ ಅತ್ಯುತ್ತಮ ಬಿಜೆಪಿ ಮನುಷ್ಯರಾದರೆ ವಾಜಪೇಯಿ ಬಿಜೆಪಿಯೊಳಗಿನ ಅತ್ಯುತ್ತಮ ಕಾಂಗ್ರೆಸ್ಸಿಗ' ಎಂದು ನಗೆಚಾಟಿ ಹಾರಿಸುತ್ತಿದ್ದುದುಂಟು.. ಈ ವಾರೆ ನೋಟದ ಚಿತ್ರದ ಪ್ರಕಾರ ವಾಜಪೇಯಿ ಅವರನ್ನು 'ಕಳಚಿಕೊಂಡ ನೆಹ್ರೂ ಪರಂಪರೆಯ ಕೊನೆಯ ಕೊಂಡಿ' ಎಂದೂ ಕರೆಯಬಹುದು. ಆದರೆ ಈ ವರ್ಣನೆ ರಾಷ್ಟ್ರ ಇಂದು ಎದುರಿಸುತ್ತಿರುವ ಎಲ್ಲ ಸಂಕಷ್ಟಗಳಿಗೆ ನೆಹರೂ ರಾಜಕಾರಣವೇ ಹೊಣೆಯೆಂದು ಪ್ರತಿಪಾದಿಸುತ್ತಿರುವ ಪ್ರಸ್ತುತ ಬಿಜೆಪಿ ನಾಯಕರಿಗೆ ಅಷ್ಟು ರುಚಿಸಲಾರದು. ಇದು ನಮ್ಮ ರಾಜಕಾರಣದ ದಿಕ್ಕುದೆಸೆಗಳು ಕಳೆದ ಒಂದು ದಶಕದಲ್ಲಿ ನಿರ್ಣಾಯಕವಾಗಿ ಬದಲಾಗಿರುವುದರ ಸೂಚನೆಯೇ ಆಗಿದೆ. ನೆಹ್ರೂ ನಿಧನರಾದಾಗ ತಮಗಾದ ದುಃಖವನ್ನು ವಾಜಪೇಯಿಯವರು ಎಷ್ಟು ತೀವ್ರ ಕಾವ್ಯ ಸಂವೇದನೆಯೊಂದಿಗೆ – ವ್ಯಕ್ತಪಡಿಸಿದ್ದರೆಂದರೆ ಅದು ಈಗಾಗಲೇ ಹಲವೆಡೆ ಉಲ್ಲೇಖಗೊಂಡಿದೆ–ಅಂತಹುದನ್ನು ಈಗ ಯಾವ ಸಾರ್ವಜನಿಕ ವ್ಯಕ್ತಿಯ ವಿಯೋಗದಲ್ಲೂ ನಾವು ನಿರೀಕ್ಷಿಸಲಾಗದು. ಬಹುತೇಕ ರಾಜಕಾರಣಿಗಳು ಈಗ ಕಟ್ಟಿಗೆ–ಕಬ್ಬಿಣವಾಗಿ ಹೋಗಿದ್ದಾರೆ. ಏಕೆಂದರೆ ರಾಜಕಾರಣವೆಂದರೆ ಇಂದು ಗೆದ್ದವರು ಎಲ್ಲವನ್ನೂ ದೋಚುವ, ಮೆರೆಯುವ ಸ್ಪರ್ಧಾತ್ಮಕ ಆಟವಾಗಿ ಹೋಗಿದೆ. ಚುನಾವಣೆಯ ಗೆಲುವೇ ರಾಜಕಾರಣದ ಸರ್ವಸ್ವವಾಗಿದೆ. ಹಾಗಾಗಿ ಇಂದು ರಾಜಕಾರಣದಲ್ಲಿ ಗೆಲ್ಲಲು ಹೃದಯವಂತಿಕೆ ಅಡ್ಡಿಯಾಗಿ ಮನುಷ್ಯ ಹೆಚ್ಚು ಕಟ್ಟಿಗೆ–ಕಬ್ಬಿಣವಾಗುವುದು ಅವಶ್ಯವಾಗಿದೆ.

ಅಂದ ಮಾತ್ರಕ್ಕೆ ಜಪೇಯಿಯವರು ಸ್ಪರ್ಧಾತ್ಮಕ ರಾಜಕಾರಣದಲ್ಲಿ ಇರಲಿಲ್ಲ ಎಂದಲ್ಲ. ಅವರು ಹನ್ನೆರಡು ಬಾರಿ ಸಂಸತ್ ಸದಸ್ಯರಾಗಿದ್ದರು, ಹತ್ತು ಬಾರಿ ಜನರಿಂದ ನೇರವಾಗಿ ಲೋಕಸಭೆಗೆ ಆಯ್ಕೆಯಾಗಿದ್ದರು. ಒಮ್ಮೆ ಮಾತ್ರ ಸೋಲನ್ನು ಕಂಡಿದ್ದರು. ಚತುರ ಮಾತುಗಾರರಾಗಿದ್ದ ಅವರು–ಈ ಮಾತಿನ ಬೆಡಗೇ ಅವರ ಕೆಲವು ಅಭಿಮಾನಿಗಳು ಅವರನ್ನು ಕವಿ ಎಂದು ನಂಬುವಂತೆ ಮಾಡಿದ್ದುದೂ ಸಹ–ಹಲವು ಬಾರಿ ಈ ಮಾತಿನ ಚಾತುರ್ಯವನ್ನೇ ತಮ್ಮ ದ್ವಂದ್ವ ರಾಜಕೀಯ ನಿಲುವುಗಳನ್ನು ಮರೆಮಾಚಿಕೊಳ್ಳಲು ಬಳಸುತ್ತಿದ್ದುದುಂಟು. ಉದಾಹರಣೆಗೆ, ತೊಂಬತ್ತರ ದಶಕದ ಹಿಂದುತ್ವದ ಜ್ವರ ಏರಿಕೆ ಮತ್ತು ರಥಯಾತ್ರೆಗಳ ದಾರಿಗುಂಟ ಆ ಬಗ್ಗೆ ಒಂದೂ ಪ್ರತಿಕೂಲ ಮಾತಾಡದ ಅವರು ಅದರ ತಾರ್ಕಿಕ ಅಂತ್ಯವಾದ ಬಾಬ್ರಿ ಮಸೀದಿ ನಾಶ ಪ್ರಕರಣದಿಂದ ತಮ್ಮನ್ನು ದೂರವಿರಿಸಿಕೊಳ್ಳಲು ಪ್ರಯತ್ನಿಸಿದ್ದು ಮತ್ತು ೨೦೦೨ರ ಗುಜರಾತ್ ಹತ್ಯಾಕಾಂಡದಿಂದ ನೊಂದುಹೋದವರಂತೆ 'ರಾಜಧರ್ಮ'ದ ಪಾಲನೆಯ ಮಾತಾಡಿ ಆಗಿನ ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರಮೋದಿಯವರನ್ನು ಪದಚ್ಯುತಗೊಳಿಸುವ ಖಚಿತ ಸೂಚನೆ ನೀಡಿ ಅನಂತರದ ಒಂದೆರಡು ದಿನಗಳಲ್ಲೇ ಉಲ್ಟಾ ಹೊಡೆದದ್ದು.

ಆಗೆಲ್ಲ ವಾಜಪೇಯಿ ತಮ್ಮ ಈ ಉಲ್ಟಾ ರಾಜಕಾರಣಕ್ಕೆ ಬಲಿಪಶು ಮಾಡಿಕೊಂಡಿದ್ದು ನೇರ ನಡೆ ನುಡಿಗಳ ಗೆಳೆಯ ಅಡ್ವಾಣಿಯವರನ್ನು. ಹಾಗೆಂದೇ ಬಿಜೆಪಿಯ ಆಗಿನ ಹಿರಿಯ ಬೌದ್ಧಿಕ ನಾಯಕ ಗೋವಿಂದಾಚಾರ್ಯರು ವಾಜಪೇಯಿಯವರನ್ನು ಬಿಜೆಪಿಯ 'ಮುಖವಾಡ 'ಎಂದು ಕರೆದದ್ದು. ಅದೇನೇ ಇರಲಿ, ಇದನ್ನೆಲ್ಲ ತಮ್ಮ ಗೆಳೆಯನಿಗಾಗಿ ಸಹಿಸಿದ ಅಡ್ವಾಣಿಯವರು ಆಗ ವಹಿಸಿದ ಮೌನಕ್ಕೆ ಈಗ ಬೆಲೆ ತೆರುತ್ತಿರುವಂತಿದೆ.

ಈಗ ಜನಪ್ರಿಯ ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತಿರುವಂತೆ, ವಾಜಪೇಯಿ ಪ್ರಧಾನ ಮಂತ್ರಿ ಆಗಿದ್ದ ಕಾಲಾವಧಿಯಲ್ಲೇನೂ ದೇಶದಲ್ಲಿ ಹಾಲು–ಜೇನು ಹರಿಯಲಿಲ್ಲ. ಆಗಲೇ ಕಂದಹಾರ್ ವಿಮಾನ ಅಪಹರಣ ನಡೆದು ಅದನ್ನು ಅವರ ಸರ್ಕಾರ ಸಮರ್ಥವಾಗಿ ನಿರ್ವಹಿಸಲಾಗದೆ ಪಾಕಿಸ್ತಾನದ ಇಬ್ಬರು ಕುಪ್ರಸಿದ್ಧ ಭಯೋತ್ಪಾದಕ ನಾಯಕರನ್ನು ಬಿಡುಗಡೆಗೊಳಿಸಬೇಕಾದ ಮುಜುಗರದ ಸಂದರ್ಭ ಉಂಟಾಯಿತು. ಬಿಡುಗಡೆಯಾದ ಈ ನಾಯಕರೇ ಇಂದು ಪ್ರಧಾನವಾಗಿ ನಮ್ಮ ದೇಶದ ವಿರುದ್ಧದ ಭಯೋತ್ಪಾದನೆಯನ್ನು ಈಗಲೂ ಸಂಘಟಿಸುತ್ತಿರುವುದು. ಕಾರ್ಗಿಲ್ ಯುದ್ಧದ ಬಗ್ಗೆ ಮುನ್ನೆಚ್ಚರ ವಹಿಸದಿದ್ದುದು, ತಮ್ಮ ಸಾಕುಮಗಳ ಕುಟುಂಬ ಮತ್ತು ಸರ್ಕಾರದ ರಕ್ಷಣಾ ಮತ್ತು ಟೆಲಿಕಾಂ ಖಾತೆಗಳ ಹಗರಣಗಳ ಬಗ್ಗೆ ಬರೆದ ಪತ್ರಿಕೆಗಳ ಮಾಲಿಕರ ವಿರುದ್ಧ ಬೆದರಿಕೆಯ ಕಾರ್ಯಾಚರಣೆಗಳು ನಡೆಸಿದ್ದು ಇತ್ಯಾದಿಗಳು ಈಗ ಮರೆತುಹೋಗಿವೆಯಷ್ಟೆ. ಇವೆಲ್ಲ ಸೇರಿಯೇ ಅವರ 'ಭಾರತವೀಗ ಹೊಳೆಯುತ್ತಿದೆ' ಎಂಬ ಪ್ರಚಾರಾಂದೋಲನದ ಹೊರತಾಗಿಯೂ ೨೦೦೪ರ ಚುನಾವಣೆಗಳಲ್ಲಿ ಅವರ ಸರ್ಕಾರ ಸೋತುಹೋದದ್ದು. ಆದರೂ ಅವರನ್ನು ನಾವೀಗ ಹಿತವಾಗಿ ನೆನಪಿಸಿಕೊಳ್ಳಲು ಮುಖ್ಯವಾಗಿ ಎರಡು ಕಾರಣಗಳಿವೆ ಎನಿಸುತ್ತದೆ. ಒಂದು, ಅವರು ಎಲ್ಲ ಸಾಮಾನ್ಯ ಮನುಷ್ಯರಂತೆ ಜೀವನದ ಎಲ್ಲ ಲಭ್ಯ ಆನಂದಗಳನ್ನೂ ಸವಿಯಬಲ್ಲ ರಸಿಕರಾಗಿ ಮಾನವ ಮಾರ್ದವತೆಯನ್ನು ಉಳಿಸಿಕೊಂಡಿದ್ದರು. ಹಾಗಾಗಿಯೇ ಅವರು 'ಅಜಾತಶತ್ರು' ಎಂದು ಹೆಸರಾದರು. ಅವರ ಈ ಗುಣವೇ ಅವರು ದಾಖಲೆಯ ಇಪ್ಪತ್ನಾಲ್ಕು ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ಐದು ವರ್ಷಗಳ ಕಾಲ ಸುಗಮವಾಗಿ ನಡೆಸಿಕೊಂಡು ಹೋಗಲು ನೆರವಾದದ್ದು.ಇನ್ನೊಂದು ಕಾರಣ, ರಸಿಕತೆ ಇರಲಿ, ರಾಜಕಾರಣದ ಹೊರತಾಗಿ ಮನುಷ್ಯ ಬದುಕಿನ ಇನ್ನಾವ ಚಟುವಟಿಕೆಗಳಲ್ಲೂ ಆಸಕ್ತಿ ತೋರದ ಇಂದಿನ ಪ್ರಭುಗಳ ಭಯಾನಕ ಮರದ ದಿಮ್ಮಿಯಂತಹ ವ್ಯಕ್ತಿತ್ವ. ಹಾಗಾಗಿ ವಾಜಪಾಯಿ ಇಂತಹ ಪ್ರಭುಗಳ ನಿರ್ಗಮನದವರೆಗಾದರೂ ನಮ್ಮ ಮನಸ್ಸಿನಲ್ಲಿ ಜೀವಂತವಾಗಿರುತ್ತಾರೆ. ವಿಶೇಷವಾಗಿ ಅವರ ರಸಿಕತೆಯ ದ್ಯೋತಕವಾದ ಈ ಮಾತು : 'ನಾನು ಅವಿವಾಹಿತನೇ ಹೊರತು ಬ್ರಹ್ಮಚಾರಿಯಲ್ಲ!'

ಕಪ್ಪು ಕನ್ನಡಕದ ಕರುಣಾನಿಧಿ



ಇತ್ತೀಚೆಗೆ ನಮ್ಮನ್ನಗಲಿದ ಇನ್ನೊರ್ವ ಸಾರ್ವಜನಿಕ ನಾಯಕರೆಂದರೆ ಮುತ್ತುವೇಲು ಕರುಣಾನಿಧಿ. ಕಳೆದ ಅರವತ್ತು ವರ್ಷಗಳ ಕಾಲ ನೆರೆಯ ತಮಿಳ್ನಾಡಿನ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದು ಅದರ ಸ್ವರೂಪ ಮತ್ತು ಖದರನ್ನೇ ಬದಲಿಸಿದ ಮೂರ್ನಾಲ್ಕು ಜನ ನಾಯಕರಲ್ಲಿ ಇವರು ಪ್ರಮುಖರು. ಇತರರೆಂದರೆ ಪೆರಿಯಾರ್ ರಾಮಸ್ವಾಮಿ ನಾಯಕರ್, ಸಿ.ಎನ್ ಅಣ್ಣಾದುರೈ, ಎಂಜಿ. ರಾಮಚಂದ್ರನ್ ಮತ್ತು ಜೆ. ಜಯಲಲಿತಾ. ಉತ್ತರ ಭಾರತದ ಸಾಂಸ್ಕೃತಿಕ ಮತ್ತು ರಾಜಕೀಯ ಯಜಮಾನಿಕೆಯ ವಿರುದ್ಧ ಬಂಡೆದ್ದು ಹುಟ್ಟಿದ ದ್ರಾವಿಡ ಚಳುವಳಿಯ ಉತ್ಪನ್ನಗಳಲ್ಲಿ ಬಹುಕಾಲ ಬಾಳಿದ ಈ ನಾಯಕನ ಸಾವು ರಾಜ್ಯದ ರಾಜಕಾರಣವನ್ನು ಮತ್ತೆ ನಿರ್ಣಾಯಕವಾಗಿ ಬದಲಿಸುವ ಎಲ್ಲ ಸೂಚನೆಗಳು ಅವರ ಅಂತ್ಯಕಾಲದ ಸ್ವಲ್ಪ ಮೊದಲಲ್ಲೇ ಕಾಣತೊಡಗಿವೆ. ಶಿವಾಜಿ ಗಣೇಶನ್‌ರ ವಿಫಲ ಪ್ರಯತ್ನದ ನಂತರ ಕಮಲ ಹಾಸನ್ ಮತ್ತು ರಜನೀಕಾಂತ್ ಅವರ ರಾಜಕೀಯ ಪ್ರವೇಶವೇ ಈ ಸೂಚನೆಗಳು. ಈ ಅರ್ಥದಲ್ಲಿ ಕರುಣಾನಿಧಿ ರಾಜ್ಯ ರಾಜಕಾರಣದ ಮಟ್ಟಿಗಾದರೂ ಒಂದು ಯುಗದ ನಾಯಕನೆಂದು ಹೇಳಬಹುದು.

ಈ ಮೇಲೆ ರಾಜ್ಯ ರಾಜಕಾರಣದ ಮಟ್ಟಿಗಾದರೂ ಎಂದು ಹೇಳಲು ಕಾರಣವಿದೆ. ಅದೆಂದರೆ ಅವರು ವ್ಯಾವಹಾರಿಕ ರಾಜಕಾರಣದಲ್ಲಿ ಮಾಡಿದ ಸಾಧನೆಯನ್ನು ಅವರ ಸಾರ್ವಜನಿಕ ಜೀವನ ಪ್ರವೇಶದ ಮೂಲ ಉದ್ದೇಶವಾದ ಜನಸಮೂಹದಲ್ಲಿ ಯಜಮಾನ ಸಂಸ್ಕೃತಿಯ ವಿರುದ್ಧ ವೈಚಾರಿಕತೆ ಜಾಗೃತಿ ಮೂಡಿಸುವ ಮತ್ತು

(೮ನೇ ಪುಟಕ್ಕೆ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಕನ್ನಡಕ್ಕೆ'ಹೊಸ ಮನುಷ್ಯ'ದಂತಹ ಘನಗಂಭೀರ ಮತ್ತು ಪ್ರಸ್ತುತವಾದ ಒಂದು ಶ್ರೇಷ್ಠ ಮಟ್ಟದ ಪತ್ರಿಕೆಯನ್ನು ನೀಡುತ್ತಿರುವುದಕ್ಕಾಗಿ ನಿಮಗೆ ಧನ್ಯವಾದಗಳು

-ಕೆ. ಸತ್ಯನಾರಾಯಣ, ಬೆಂಗಳೂರು

ವಿಶೇಷ ಸಂಚಿಕೆಯನ್ನು ಪೂರ್ತಿ ಓದಿ ಮುಗಿಸಿದೆ. ನಾಗಭೂಷಣರ ಸಂಪಾದಕೀಯದಿಂದ ಹಿಡಿದು ಕೆ ವಿ ಅಕ್ಷರ ಅವರ ಅಂತರ್ಯಾಮಿಯ ಆವಿಷ್ಕಾರದ ಕಥನದವರೆಗೆ (ರಾಜರಾಮ ತೋಳ್ಪಾಡಿಯವರ ಪ್ರತಿಕ್ರಿಯೆಯೂ ಸೇರಿದಂತೆ) ಎಲ್ಲಾ ಲೇಖನಗಳೂ ಒಂದಲ್ಲ ಒಂದು ಕಾರಣಕ್ಕೆ ಮುಖ್ಯ ಅಂತ್ಲ ವಿಶೇಷವಾಗಿ ಲಕ್ಷ್ಮೀಶ ತೋಳ್ಪಾಡಿ, ಸಂಜಯ ಪಲ್ಶೀಕರ್ ಮತ್ತು ಶಿವಪ್ರಕಾಶ ಅವರ ಲೇಖಗಳು ಬಹು ಇಷ್ಟ ಆಯಿತು. ಅಲ್ಲಿ ಇಲ್ಲಿ ಕಾಣಿಸಿಕೊಳ್ಳುವ ಮುದ್ರಣದೋಷಗಳು ಓದುವುದಕ್ಕೆ ಸ್ವಲ್ಪ ಕಿರಿಕಿರಿ ಮಾಡಿತಾದರೂ, ಇಡೀ ಸಂಚಿಕೆ ಓದಿಸಿಕೊಂಡು ಹೋಯಿತು.

ಕೆ ವಿ ಅಕ್ಷರ ಅವರ "ಇವತ್ತು ನಾವಿರುವ ಮಾರುಕಟ್ಟೆಯ ಕಾಲದಲ್ಲಿ 'ನಮ್ಮ ಮನಸ್ಸು' ಎಂದು ನಾವು ತಿಳಿದುಕೊಂಡಿರುವ ಸಂಗತಿಯು ನಿಜವಾಗಿ ಬಹುಪಾಲು ನಮ್ಮದಲ್ಲ; ಅದು ಜಾಹೀರಾತು ಮತ್ತು ಐಡಿಯಾಲಜಿ ಮೊದಲಾದವುಗಳಿಂದ ರೂಪಿತವಾದದ್ದು.... .ಸಿದ್ಧ ಅಲೋಚನೆಗಳ ಬಳಕೆಯನ್ನು ಮಾತ್ರ ಮಾಡಬಲ್ಲೆವಾಗಿ ಸ್ವತಃ ಆಲೋಚಿಸುವುದನ್ನು ಮರೆತಿರುವ ವಿಚಿತ್ರ ವಿಪರ್ಯಾಸವೊಂದು ಇವತ್ತು ಉದ್ಭವವಾಗಿದೆ" ಎಂಬ ತಿಳುವಳಿಕೆ ನಿಜ ಅನ್ನಿಸಿ ಆತಂಕವಾಯಿತು.

-ಟಿ ಎಸ್ ವೇಣುಗೋಪಾಲ್, ಮೈಸೂರೆ

'ಹೊಸ ಮನುಷ್ಯ'ದ ಈ ಬಾರಿಯ ವಿಶೇಷ ಸಂಚಿಕೆ ಎಷ್ಟು ಮೌಲಿಕವಾಗಿದೆ ಎಂದರೆ ಅದು ನನಗೆ ಹಳೆಯ ಕಾಲದ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯ ವಿಶೇಷ ಸಂಚಿಕೆಗಳನ್ನು ನೆನಪಿಸಿತು.

-ಪ್ರೊ. ರವೀಂದ್ರ ರೇಷ್ಮೆ, ಬೆಂಗಳೂರು

ವಿಶೇಷ ಸಂಚಿಕೆ ಓದಿ ಪ್ರಬುದ್ಧ ವೈಚಾರಿಕ ಧಾರೆಯ ಮಹಾನ್ ಶಾಂತ ಸಾಗರದಲ್ಲಿ ಮಿಂದೆದ್ದ ಆನಂದ, ಧನ್ಯತೆ ನನ್ನದಾಗಿದೆ. ಸಮಕಾಲೀನ ಕನ್ನಡ ನಾಡಿನ ಮಾಗಿದ ಮನಗಳ ವಿಶಿಷ್ಟ ಸಂವೇದನೆಗಳು, ಕಾಮನಬಿಲ್ಲಿನಂತೆ ಇಲ್ಲಿ ಮೂಡಿಬಂದಿವೆ. ಅಂತೆಯೇ ಅನುವಾದಗಳು ಕೂಡ. ಗಾಂಧೀಜಿ ಅವರ ಚಿಂತನಾಲೋಕದ ವಿಭಿನ್ನ ಆಯಾಮಗಳ ಚಿತ್ರಣ, ಪದೇಪದೆ ಧ್ಯಾನಿಸುವಂತಹದ್ದು. ಶಿವಪ್ರಕಾಶರ ಒಳನೋಟ ನಮ್ಮ ಮುಂದುವರಿದ ಚಿಂತನೆಗೆ ಖಂಡಿತ ಸಹಕಾರಿಯಾಗಿದೆ. ಆದರೆಲಕ್ಷ್ಮೀಶ ತೋಳ್ಪಾಡಿ ಅವರ ಎಂದಿನ ಸುಲಲಿತ ಚಿಂತನೆ ಈ ಲೇಖನದಲ್ಲಿ ಕಾಣದೇ ನಿರಾಶನಾದೆ. ಜ್ಞಾನ ವ್ಯವಸ್ಥೆ ರೂಪಿಸುವ ಮೂಲಗಳು ಬದಲಾಗುತ್ತಿರುವ ಬಗ್ಗೆ ಸತ್ಯನಾರಾಯಣ ಅವರ ಎಚ್ಚರಿಕೆ ಸಕಾಲಿಕ ವಾಗಿದ್ದು, ಕನ್ನಡ ಶಾಲೆಗಳ ಸರ್ವನಾಶಕ್ಕೆ ಕನ್ನಡಿ ಹಿಡಿದಂತಿದೆ. ಇದೇ ಭೀಕರ ವಾಸ್ತವ ಸ್ಥಿತಿಯ ಹಲವು ಆಯಾಮಗಳನ್ನು ಗಣೇಶ್ ದೇವಿಯವರು ಸಮರ್ಥವಾಗಿ ವಿವರಿಸಿದ್ದಾರೆ. ಕನ್ನಡ ಚಿತ್ರರಂಗ ಕುರಿತ ಲೇಖನ ಕೆಲವು ಪ್ರಮುಖ ವಿಷಯಗಳ ಬಗ್ಗೆ ಗಮನ ಹರಿಸಬೇಕಿತ್ತು. ಉದಾ :ಸ್ಟಾರ್ ವಾಘಿಂಯಾದ ಡಬ್ಬಿಂಗ್ ವಿರೋಧಿ ನಿಲುವು... ಕಿರುತೆರೆಯ ಕೊನೆಯಿಲ್ಲದ ಅಭಿರುಚಿ ಹೀನ ಗೋಳುಗಳ ನಿರಂತರ ಹಿಂಸೆ...

ಮಾನವೀಯ ಮೌಲ್ಯಗಳನ್ನು, ಸಮಕಾಲೀನ ಸಂದಿಗ್ಧಗಳನ್ನು ಭಿನ್ನವಿಭಿನ್ನ ರೀತಿಗಳಲ್ಲಿ ಗ್ರಹಿಸಿ, ಆಂತರಿಕ ಕ್ಷುದ್ರತೆ ನಿವಾರಿಸಿ, ನಮ್ಮೊಳಗಿನ ಮನುಷ್ಯ ಹೊಸಬನಾಗಲು ಬೇಕಾದ ಎಲ್ಲ ಔಷಧಿಗಳು, ಪೋಷಕಾಂಶಗಳ ಸರಬರಾಜನ್ನು ಪತ್ರಿಕೆ ನಿರಂತರವಾಗಿ ಮಾಡುತ್ತಲೇ ಬಂದಿದೆ. ಏಕಾಗ್ರತೆಯ ಗಂಭೀರ ಓದನ್ನು ಅಪೇಕ್ಷಿಸುವ ಈ ವಿಶೇಷ ಸಂಚಿಕೆ, ಘನವಾದ ದಟ್ಟ ಬೌದ್ಧಿಕ ಸಾಂದ್ರತೆಯಿಂದ ಶ್ರೀಮಂತವಾಗಿದೆ.'ಪರಮಾಶ್ಚರ್ಯ ಈ ಸಂಚಿಕೆಯಲ್ಲಿ ಲೋಹಿಯಾ ಕಾಣುತ್ತಿಲ್ಲ. ಕೇವಲ ತಾತ್ವಿಕ ಹಿನ್ನೆಲೆಯಾಗಿ ಮಾತ್ರ ಉಳಿದುಬಿಟ್ಟಿದ್ದಾರೆ. ವರ್ಣ ವೈಭವದ ತೀಕ್ಷ್ಣತೆಯಲ್ಲಿ ಮಹಾತ್ಮನನ್ನು ಕೆನೆಗಟ್ಟಿಸಿದ ನಭಾ ಹಾಗೂ ಕಾವ್ಯಾತ್ಮಕವಾಗಿ ವಿನ್ಯಾಸಗೊಳಿಸಿದ ಚರಿತಾ ಬಹಳ ಕಾಲ ನನ್ನ ನೆನಪಿನಲ್ಲಿ ಉಳಿಯುತ್ತಾರೆ.

-ಬಿ.ಎಸ್. ದಿವಾಕರ, ಆಲ್ಮೋರಾ (ಉತ್ತರಾಖಂಡ)

'ಹೊಸಮನುಷ್ಯ'ದ ವಾರ್ಷಿಕ ವಿಶೇಷ ಸಂಚಿಕೆ ಓದಿದೆ. ಇದನ್ನು ಕನ್ನಡದ ವಿದ್ವತ್ ಪತ್ರಿಕೆ ಎಂದು ಕರೆದರೂ ತಪ್ಪಲ್ಲ. ನನ್ನನ್ನು ಹೆಚ್ಚು ಯೋಚಿಸುವಂತೆ ಮಾಡಿದ ಅನೇಕ ಲೇಖನಗಳು ಈ ಬಾರಿಯ ಪತ್ರಿಕೆಯಲ್ಲಿದ್ದವು. ವಿಶೇಷಾಂಕದ ಕೊನೆಯಪುಟದ ಲೇಖನ ಅಂತರ್ಯಾಮಿಯ ಆವಿಷ್ಕಾರ: *ಗಾಂಧಿ ಆತ್ಮಕಥನದ ಹೊಸ ಆವೃತ್ತಿ* ಎಂಬ ಕೆ ವಿ ಅಕ್ಷರ ಅವರ ಪುಸ್ತಕಾವಲೋಕನವಂತೂ ಒಂದು ಪುಸ್ತಕವನ್ನು ಹೇಗೆ ಓದಬೇಕು ಮತ್ತು ಅದನ್ನು ಹೇಗೆ ಪರಿಚಯಿಸಬೇಕು ಎನ್ನುವುದಕ್ಕೆ ಮಾದರಿಯಾಗಿತ್ತು. "ಸಿದ್ಧ ಆಲೋಚನೆಗಳ ಬಳಕೆಯನ್ನು ಮಾತ್ರ ಮಾಡಬಲ್ಲ, ಸ್ವತಃ ಆಲೋಚಿಸುವುದನ್ನು ಮರೆತಿರುವ ವಿಚಿತ್ರ ವಿಪರ್ಯಾಸ" ಎಂಬ ಅವರ ಮಾತು ನಮ್ಮ ರಾಜಕಾರಣ, ನಮ್ಮ ಧರ್ಮ-ಸಂಸ್ಕೃತಿ, ನಮ್ಮ ಸಂಶೋಧನೆ-ಸಾಹಿತ್ಯ ಒಟ್ಟಿನಲ್ಲಿ ಎಲ್ಲ ಮಾನವಿಕ ಮತ್ತು ಎಲ್ಲ ಸಮಾಜವಿಜ್ಞಾನಗಳಿಗೆ ಸಂಬಂಧಿಸಿದ್ದು ಆಗಿದೆ.

ನಮ್ಮ ಕಾಲದ ಧರ್ಮಸಂಕಟಗಳು ಎಂಬ ಲಕ್ಷ್ಮೀಶ ತೋಳ್ಪಾಡಿಯವರ ಲೇಖನ ಮೊದಲ ಎರಡು ಭಾಗಗಳಲ್ಲಿ ಅದ್ಭುತವಾಗಿತ್ತು. ಆದರೆ ತನ್ನ ಮೂರನೇ ಭಾಗದಲ್ಲಿ ಅದು ಸಮಕಾಲೀನ ಪಕ್ಷ ರಾಜಕೀಯದ ಕುರಿತು ಬರೆಯುವ ಸಂದರ್ಭದಲ್ಲಿ ತೀರ ಸಡಿಲವಾಯಿತು. ಇಂತಹ ವಿಷಯಗಳ ಕುರಿತೂ ಬರೆಯಿರಿ ಎಂದು ಅವರ ಮೇಲೆ ಒತ್ತಡವಿತ್ತೋ ಏನೋ ಗೊತ್ತಿಲ್ಲ. ಆದರೆ ನಾಲ್ಕನೇ ಭಾಗದಲ್ಲಿನ ಅವರ "ವ್ಯಕ್ತಿತ್ವವನ್ನು ಬೆಳೆಸುವುದು ಧರ್ಮದ ದಾರಿ. ವರ್ಚಸ್ಸನ್ನು ಬೆಳೆಸುವುದು ಸದ್ಯದ ರಾಜಕಾರಣದ ದಾರಿ. ವರ್ಚಸ್ಸನ್ನು ಹೇರುವುದೂ ಜನರ ಮೇಲೆ ನಡೆಸುವ ಹಿಂಸೆಯೇ" ಎಂಬ ಮಾತು ನಮ್ಮ ರಾಜಕಾರಣವನ್ನು ಇರಿದು ವಿಮರ್ಶಿಸುವಂತಹ ಮಾತುಗಳು.

ಈ ಸಂಚಿಕೆಯ ಮಹೋನ್ನತ ಲೇಖನ ***ಗಾಂಧಿ ಮತ್ತು ಭಗವದ್ಗೀತೆಯ ರಾಜಕಾರಣ***. ಗಾಂಧಿ ಜೊತೆಗೆ ನಾವು ನಡೆಸಬೇಕಾದ ಬೌದ್ಧಿಕ ಒಡನಾಟದ ಆಳ-ಅಗಲಗಳನ್ನು ಹಿರಿದುಗೊಳಿಸುವಂತಹ. ಈ ಲೇಖನವನ್ನು ಬರೆದ ಸಂಜಯ ಪಲ್ಶೀಕರ್ ಅವರಿಗೂ, ಅನುವಾದಕರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ವಿಶ್ವವಿದ್ಯಾನಿಲಯಗಳ ರಾಜಕೀಯಶಾಸ್ತ್ರದ, ತತ್ತ್ವಜ್ಞಾನದ, ಮಾನವಿಕ ವಿಭಾಗದ ವಿದ್ಯಾರ್ಥಿಗಳಿಗೆ ಪಠ್ಯರೂಪದಲ್ಲಿ ಬರಬೇಕಾದ, ಕ್ಯಾಂಪಸ್ ತುಂಬ ಚರ್ಚೆಗೊಳಬೇಕಾದ ಲೇಖನ ಇದು. ಅಂತಹ ಒಂದು ಬೌದ್ಧಿಕ ವಾತಾವರಣ ಕರ್ನಾಟಕದಲ್ಲಿ ಬಿಡಿ; ಹೊರಗಡೆಯಾದರೂ ಇದೆಯೇ?

ಇಲ್ಲಿಯ ಪ್ರತಿಯೊಂದು ಲೇಖನ, ಕಥೆ-ಕವನಗಳ ಕುರಿತು ಒಳ್ಳೆಯ ಮಾತುಗಳನ್ನೇ ಬರೆಯಬಹುದು ಎನ್ನುವಷ್ಟು ಈ ಸಲದ ಸಂಚಿಕೆ ಸಮೃದ್ಧವಾಗಿದೆ. ನೀವು ಲೇಖಕರಿಗೆ ಸಂಭಾವನೆ ಕೊಡದಿದ್ದರೂ ಪರವಾಗಿಲ್ಲ. ಅದನ್ನು ಪತ್ರಿಕೆಯ ಉತ್ತಮ ವಿನ್ಯಾಸ ಮತ್ತು ಕಾಗದದಕ್ಕಾಗಿ ಬಳಸಿ. ಕೆಲವು ಕಡೆ, ಲೇಖನಗಳನ್ನು ಸರಾಗವಾಗಿ ಓದಲೇ ಸಾಧ್ಯವಿಲ್ಲವೇನೋ ಎನ್ನುವಷ್ಟು ಲೇಔಟ್ ಕೆಟ್ಟದಾಗಿದೆ. ವೃತ್ತಿನಿರತರಿಗೆ ಕೊಟ್ಟು ನಿಮ್ಮ ಶ್ರಮವನ್ನೂ ಕಡಿಮೆ ಮಾಡಿ. ಪತ್ರಿಕೆ ಅಂದವಾಗಿ ಬರುವಂತೆಯೂ ನೋಡಿಕೊಳ್ಳಿ.

-ಡಾ. ನಿತ್ಯಾನಂದ ಬಿ. ಶೆಟ್ಟಿ, ತುಮಕೂರು

ಹೊಸ ಮನುಷ್ಯ'ದ ವಾರ್ಷಿಕ ವಿಶೇಷಾಂಕ ಸಂಗ್ರಾಹ್ಯ ಸಂಚಿಕೆಯಾಗಿದೆ. ಎಲ್ಲ ಲೇಖನ, ಬರಹ, ಸಂಪಾದಕೀಯ, ಸಂದರ್ಶನಗಳೂ ಉತ್ತಮವಾಗಷ್ಟೇ ಅಲ್ಲದೆ ಚಿಂತನೆಗೆ ಹಚ್ಚುತ್ತವೆ. ಗಣೇಶ್ ದೇವಿಯವರ ಸಂದರ್ಶನ, ಕನ್ನಡ ಚಿತ್ರರಂಗದ ಸಂದಿಗ್ಧಗಳನ್ನು ಕುರಿತ ಉತ್ತಮ ಒಳನೋಟಗಳುಳ್ಳ ಹೊನ್ನಾಳಿ ಚಂದ್ರಶೇಖರ್ ಅವರ ಲೇಖನಗಳು ಮೆಚ್ಚುಗೆಯಾದವು.

ಅಂಗೈ ದೂರವಾಣಿ, ಅದರೊಡನೆ ಅಪೇಕ್ಷಿತವೋ/ಅನಪೇಕ್ಷಿತವೋ, ಯಾಚಿತವೋ/ಅಯಾಚಿತವೋ ಆಗಿ ದೊರೆಯುವ "ಸಂಕ್ಷಿಪ್ತ ರೂಪ"ದ ಮಾಹಿತಿಯ ವಿಶ್ವಕೋಶ ಓದುಗನಲ್ಲಿ, ಸಾಹಿತ್ಯ-ಸಮಾಜದ ರೂಪು ರೇಷೆಗಳನ್ನೇ ಬದಲಾಯಿಸುವ ಹವಣಿಕೆಯಲ್ಲಿದೆ.. ಸಾವಧಾನ ಮತ್ತು ಗಂಭೀರ ಓದು ಅಸಾಧ್ಯ ಎನ್ನುವಂಥ ಆದರೆ ಅಗತ್ಯವಾಗಿ ಬೇಕಾಗಿರುವ ಇಂದಿನ ದಿನದಲ್ಲಿ 'ಹೊಸಮನುಷ್ಯದ'ಂಥ ಪತ್ರಿಕೆ ಹಾಗೂ ಅದರ ಓದುಗರು ಭರವಸೆಯಾಗಿ ಕಾಣುತ್ತಾರೆ.

ಹಿರಿಯ ಮತ್ತು ಯುವ ಬರಹಗಾರರ ಲೇಖನಗಳು ಪತ್ರಿಕೆಯ ಆಶಯವನ್ನು ಪ್ರತಿನಿಧಿಸುವಂತೆಯೇ ಸಮಾಜವಾದಿ ವಿಚಾರವನ್ನೂ ಪಸರಿಸುತ್ತಿವೆ. ಜತೆಗೆ ಕಥೆ, ಪ್ರವಾಸ ಕಥನ, ಪುಸ್ತಕ ವಿಮರ್ಶೆ ಇವು ಓದುಗನನ್ನು ಚಿಂತನೆಗೆ ಹಚ್ಚುತ್ತವೆ.

ಆದರೆ ಒಂದು ಸಲಹೆ : ಜಾಹಿರಾತುಗಳನ್ನು ಕಡಿತಗೊಳಿಸಬಹುದೇನೋ.

.-ಅಶ್ವತ್ಥ ಶಿಕಾರಿಪುರ, ಬೆಂಗಳೂರು

' ನನ್ನ ಪ್ರಕಾರ ನಿಮ್ಮ ವಿಶೇಷ ಸಂಚಿಕೆಯ ವಿಶೇಷವೆಂದರೆ ವಿಜಯೇಂದ್ರ ಪಾಟೀಲರ 'ಮೊಸರಿನಲ್ಲಿ ಕಲ್ಲು' ಎಂಬ ಲಲಿತ ಪ್ರಬಂಧ. ಇದು ನಿಜವಾಗಿ ಲಲಿತವಾಗಿದ್ದು ಮನಸ್ಸನ್ನು ಹಗುರಗೊಳಿಸುವಷ್ಟು ಆಹ್ಲಾದ ನೀಡುತ್ತದೆ.

– ಗಾಯತ್ರಿ ನಾಗರಾಜ್, ಬೆಂಗಳೂರು

ವಿಶೇಷ ಸಂಚಿಕೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಗಂಭೀರ ಚಿಂತನೆಗೆ ಅರ್ಹವಾಗಿದ್ದು ಅದರಲ್ಲಿ ಕನ್ನಡ ಶಾಲೆಗಳಿಗೆ ಒದಗಿರುವ ದುರ್ಗತಿಯನ್ನು ಕುರಿತು ಬರೆದ ಸಾಲುಗಳು ನನ್ನನ್ನು ಚಿಂತೆಗೀಡುಮಾಡಿದವು. ಆದರೆ ಎರಡು-ಮೂರು ವರ್ಷಗಳ ಹಿಂದೆ ಕುಪ್ಪಳ್ಳಿ ಶಿಬಿರದಲ್ಲಿ ನಿಮಗೆ ನೀಡಿದ ಮಾತಿನಂತೆ ನಾನು ನನ್ನ ಮಗಳನ್ನು ಸರ್ಕಾರಿ ಕನ್ನಡ ಶಾಲೆಗೇ ಕಳಿಸುತ್ತಿರುವೆ, ಇದು ನನಗೊಂದು ಹೆಮ್ಮೆಯ ಸಂಗತಿಯೂ ಹೌದು.

-ಪ್ರತಿಭಾ ಪುಟ್ಟರಾಜು, ದಾವಣಗೆರೆ

ಕನ್ನಡದ ಮುಖ್ಯ ವಾಹಿನಿ ಪತ್ರಿಕೆಗಳಲ್ಲಿ ಎಲ್ಲಾ ರೀತಿಯ ಬೌದ್ಧಿಕ ಚರ್ಚೆಗಳು ಮರೆಯಾಗಿ ಸೃಷ್ಟಿಯಾಗಿರುವ ಈ ಕಾಲದ ದೊಡ್ಡ ಕೊರತೆಯನ್ನು ನೀಗಿಸುವ ಕೆಲಸವನ್ನು "ಹೊಸ ಮನುಷ್ಯ" ಪತ್ರಿಕೆ ಸದ್ದಿಲ್ಲದೇ ನಡೆಸುತ್ತಿದೆ. ವಿಶೇಷ ಸಂಚಿಕೆಯಂತೂ ಈ ನಿಟ್ಟಿನಲ್ಲಿ ಹೊರಬಂದ ಬಹುಮುಖ್ಯ ಪ್ರಕಟಣೆ. ಸಂಚಿಕೆಯ ಎಲ್ಲಾ ಲೇಖನಗಳೂ ಸಂಗ್ರಹ ಯೋಗ್ಯ ಮತ್ತು ಕನ್ನಡ ಓದುಗರ ಯೋಚನೆಯ ಮಟ್ಟವನ್ನು ಎತ್ತರಿಬಲ್ಲಂಥವು. ಜತೆಗೆ ವಿವಿಧ ಲೇಖಕರು ತಾವು ಓದಿದ ಮಹತ್ವ ಪೂರ್ಣ ಕೃತಿಗಳನ್ನು ಪರಿಚಯಿಸಿದ್ದು ಈ ಎಲ್ಲಾ ಕೃತಿಗಳನ್ನು ಸಂಗ್ರಹಿಸಿ ಓದಲು "ಹೊಸ ಮನುಷ್ಯ"ದಿಂದ ನಾನು ಪ್ರೇರೇಪಿತನಾಗಿದ್ದೇನೆ

-ಎ. ನಾರಾಯಣ, ಬೆಂಗಳೂರು

ಸಮಾಜವಾದಿಯೆಂದು ಬಹುವಾಗಿ ಪ್ರೀತಿಯಿಂದ, ಕೆಲ ಸಾರಿ ವ್ಯಂಗ್ಯವಾಗಿ ಕರೆಸಿಕೊಳ್ಳುವ ನಮ್ಮ ಈ ಪತ್ರಿಕೆಯ ವಿಶೇಷಾಂಕದಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಷಯಗಳು ಆದ್ಯತೆಯಲ್ಲಿರುವುದು ವಿಶೇಷ. ಧರ್ಮ ಗ್ರಂಥಗಳನ್ನು ಅರ್ಥಮಾಡಿಕೊಳ್ಳಬುವುದೇ ನಮಗೆ ಗೊತ್ತಿಲ್ಲ ಎಂದು ವಿಷಾದಿಸುವ ಲಕ್ಷ್ಮೀಶ ತೋಳ್ಪಾಡಿಯವರ ಮಹತ್ವದ ಲೇಖನವಿದೆ. ಭಗವದ್ಗೀತೆ ಪಡೆಯುತ್ತ ಬಂದ ರೂಪಾಂತರ, ಕಾರಣ, ಉದ್ದೇಶ ಕುರಿತಂತೆ; ಅವುಗಳ ದಿಕ್ಕು ತಪ್ಪಿಸಿದ,ಅರ್ಥ ಬದಲಿಸಿದ ರೀತಿಯ ಬಗೆಗೆ ಸಂಜಯ ಪಲ್ಶೀಕರರ ಅದ್ಭುತ ಬರೆಹವಿದೆ. ಧಾರ್ಮಿಕ ಬಹುತ್ವದ ಬಗೆಗೆ ಶಿವಪ್ರಕಾಶ ಬರೆದಿದ್ದಾರೆ. ಆಧುನಿಕತೆ ಅಥವಾ ಇಂಗ್ಲೀಷ್ ಸಂದರ್ಭಗಳು ನಮಗೆ ನಮ್ಮ ಧರ್ಮದ ವಿಷಯವಾಗಿ ಬೇರೆ ಆಲೋಚನೆ ಹೇರಿದಂತೆ ಈ ಲೇಖನಗಳು ಸೂಚಿಸುತ್ತವೆ. ಇದಲ್ಲದೆ, ವೈದೇಹಿ, ತಾರಿಣಿ, ಸಬಿತಾ, ಗೀತಾ, ಜಯಂತ. ಕಮಲ, ಬಸವರಾಜು, ಸತೀಶರ ವೈವಿಧ್ಯಮಯ ಕತೆ, ಕವನಗಳು! ಮಾಚಕನೂರರ ಚೇನಾದ ಬಗೆಗಿನ ಲೇಖನ ಅದರ ಅಭಿವೃದ್ಧಿಗೆ ಅವರು ಕೊನೆಗೆ ನೀಡುವ ಕಾರಣದಿಂದ ಚರ್ಚೆಗೆ ಕಾರಣವೂ ಆಗಬಹುದು. ದೇವಿಯವರ ಭಾಷೆ,ಸಮುದಾಯದ;ಸತ್ಯನಾರಾಯಣರ ಸಾಹಿತ್ಯಕ ಬರೆಹ; ಸಿನಿಮಾ,ಪುಸ್ತಕದ ಓದು- ವಿಮರ್ಶೆಗಳು ಸಂಚಿಕೆಯನ್ನು ಸಮಗ್ರವಾಗಿಸಿವೆ.ಹೇಳಲು ಇನ್ನೂ ಇದೆ.ಆದರೆ ಮಿತಿ. ನಿಮ್ಮ ಶ್ರಮ ಸಾರ್ಥಕವಾಗಿದೆ..ಅಭಿನಂದನೆಗಳು.

-ವಿಜಯೇಂದ್ರ ಪಾಟೀಲ್, ಪೀಚ್ ಟ್ರೀ ಸಿಟಿ, ಅಟ್ಲಾಂಟಾ (ಅಮೆರಿಕಾ)

ಓದುಗರಲ್ಲಿ ಒಂದು ಕಳಕಳಿಯ ಮನವಿ

ದಯವಿಟ್ಟು ನಮ್ಮ ಪತ್ರಿಕೆಯ ಪ್ರತಿಚಂದಾದಾರರೂ ಕನಿಷ್ಟ ಇನ್ನೊಬ್ಬರನ್ನು ಚಂದಾದಾರನ್ನಾಗಿ ಮಾಡಬೇಕೆಂದು.ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ ಇಲ್ಲದಿದ್ದರೆ ಪತ್ರಿಕೆ ನಡೆಯುವುದು ಕಷ್ಟ. ಈ ಕಷ್ಟ ಈಗೇಕೆಂದರೆ-

ನಮ್ಮ ಪತ್ರಿಕೆಯ ಒಟ್ಟು ಪ್ರಸಾರದಲ್ಲಿ ಕಾಲು ಭಾಗ ಸಾರ್ವಜನಿಕ ಗ್ರಂಥಾಲಯಗಳದ್ದು. ಆದರೆ ಇದು ಸರ್ಕಾರಿ ಇಲಾಖೆಯಾದ್ದರಿಂದ ಬಜೆಟ್ ಕೊರತೆ, ಅನುದಾನದಲ್ಲಿ ವಿಳಂಬ, ಸಿಬ್ಬಂದಿ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಪ್ರತಿವರ್ಷ ಬಹಳಷ್ಟು ಗ್ರಂಥಾಲಯಗಳಿಂದ ವಾರ್ಷಿಕ ಬಿಲ್ ಹಣ ಪಡೆಯುವುದು ಮತ್ತು ಚಂದಾ ನವೀಕರಿಸಿಕೊಳ್ಳುವುದು ಒಂದು ರೇಜಿಗೆಯ ಕೆಲಸವೇ ಆಗಿದೆ. ಹಾಗಾಗಿ ಪತ್ರಿಕೆಯು ಗ್ರಂಥಾಲಯಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕಿದೆ.. ಈ ನಷ್ಟವನ್ನು ಪತ್ರಿಕೆಯ ಮೇಲೆ ಪ್ರೀತಿ-ಅಭಿಮಾನವಿಟ್ಟಿರುವ ಓದುಗರು ಕನಿಷ್ಟ ಇನ್ನೊಂದು ಚಂದಾ ಮಾಡಿಸಿ ತುಂಬಿಕೊಡಬೇಕೆಂದು ಕೋರುತ್ತೇವೆ. ತುಂಬಿ ಕೊಡಬಲ್ಲರು ಎಂಬ ನಂಬಿಕೆಯೂ ನಮಗಿದೆ. -ಸಂಪಾದಕ

೨ನೇ ಪುಟದಿಂದ)

ಕಾರ್ಯಚರಣೆಗಳನ್ನು ನಡೆಸುವ ವಿಷಯದಲ್ಲಿ ಅವರು ಅಷ್ಟೇನೂ ಯಶಸ್ವಿಯಾದಂತೆ ಕಾಣುವುದಿಲ್ಲ ಎಂಬುದು. ಇದ್ದ ರಾಜಕೀಯ ಚೌಕಟ್ಟಿನಲ್ಲೇ ತಮಿಳು ಜನರ ಹಿತಾಸಕ್ತಿಗಳನ್ನು ಕಾಪಾಡುವಂತಹ ರಾಜಕಾರಣವನ್ನು ಅವರು ಕಟ್ಟಿದರಾದರೂ, ಅವರು ಸಾಂಸ್ಕೃತಿಕವಾಗಿ ಎಲ್ಲ ಹಂತಗಳಲ್ಲಿ ತಮಿಳು ಸಮಾಜದ ಶ್ರೇಣೀಕರಣದ ಬಂಧನಗಳನ್ನು ಸಡಿಲಗೊಳಿಸಿದರೆಂದು ಹೇಳಲಾಗುವುದಿಲ್ಲ. ಹಾಗೇ ಅದರಲ್ಲಿ ಅಂತರ್ಗತವಾಗಿದ್ದ ಹಿಂಸೆಯಿಂದ ತಮಿಳು ಜನರನ್ನು ಬಿಡುಗಡೆಗೊಳಿಸಿದರೆಂದು ಹೇಳಲಾಗುವುದಿಲ್ಲ. ಉತ್ತರ ಭಾರತವೆಂದರೆ ಬ್ರಾಹ್ಮಣ ಸಂಸ್ಕೃತಿ ಎಂದು ತಪ್ಪಾಗಿ ಬಗೆದ ಇವರ 'ಬ್ರಾಹ್ಮಣೇತರ ಚಳುವಳಿ' ನಂತರ ಒಂದು ರಾಜಕಿಯ ಸಿದ್ಧಾಂತವೂ ಆದಾಗ ಅದರ ಕಾಟ ತಡೆಯಲಾರದೆ ತಮಿಳ್ನಾಡಿನ ಬ್ರಾಹ್ಮಣರು ದೆಹಲಿಗೆ ದೌಡಾಯಿಸಿ ಅಖಿಲ ಭಾರತ ಮಟ್ಟದಲ್ಲಿ ಭದ್ರವಾಗಿ ಪುನರ್ವಸಿತರಾದರೆ, ಬ್ರಾಹ್ಮೇಣತರ ಜಾತಿಗಳ ಜನ ಖಾಲಿಯಾದ ಆ ಸಾಂಸ್ಕೃತಿಕ ಯಜಮಾನಿಕೆಯ ಸ್ಥಾನವನ್ನು ಆಕ್ರಮಿಸಿಕೊಂಡರು. ಕರುಣಾನಿಧಿಯವರು ನಿರ್ಲಜ್ಜವಾಗಿ ಬೆಳೆಸಿದ ಕುಟುಂಬ ರಾಜಕಾರಣ ಮತ್ತು ಅದರ ಸಂಪತ್ತು-ಸಮೃದ್ಧಿಗಳ ಬೇರುಗಳನ್ನೂ ನಾವು ಇಲ್ಲಿಯೇ ಗುರುತಿಸಬಹುದು. ಇದೇ ಅವರ ರಾಜಕಾರಣಕ್ಕೆ ದ್ರಾವಿಡ ಚಳುವಳಿಯೊಳಗಿಂದಲೇ ಪ್ರಬಲ ಸವಾಲುಗಳು ಹುಟ್ಟಿ ಅವರ ಹಲವು ದೀರ್ಘಾವಧಿ ರಾಜಕೀಯ ವನವಾಸಗಳಿಗೆ ಮತ್ತು ರಾಜ್ಯದಲ್ಲಿ ಜಾತಿಗೊಂದು ರಾಜಕೀಯ ಪಕ್ಷ ಉದಿಸಲು ಕಾರಣವಾದದ್ದು. ಹಾಗಾದರೆ ದ್ರಾವಿಡ ಚಳುವಳಿ ಏನು ಮಾಡಲು ಹೊರಟು ಏನು ಮಾಡಿತು? ಅದೂ ಕರುಣಾನಿಧಿಯವರಂತಹ ನಾಯಕರಿಗೆ ಒದಗಿಬಂದಿದ್ದ ಅದ್ಭುತ ಮಾತುಗಾರಿಕೆ, ಸಿನಿಮಾದಂತಹ ಜನಪ್ರಿಯಯ ಮಾಧ್ಯಮದ ನಿಕಟ ಸಂಪರ್ಕ, ಸಾಹಿತ್ಯ ಕೌಶಲ್ಯಗಳಂತಹ ಸಂಪನ್ಮೂಲಗಳ ಸೌಲಭ್ಯಗಳ ಹೊರತಾಗಿಯೂ?ಯೋಚಿಸಬೇಕಾದ ವಿಚಾರವಲ್ಲವೆ?

ಭಾರತದಲ್ಲಿ ವಂಚಿತ ಜನವರ್ಗಗಳ ಜನರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಗೊಳಿಸುವುದರ ಜೊತೆಗೇ ಅವರ ಮನಸ್ಸಿನಲ್ಲಿರುವ ಹಳೆಯ ಪಾರಂಪರಿಕ ನಂಬಿಕೆಗಳ ಕಿಲುಬನ್ನೂ ತೆಗೆಯುವ ಕೆಲಸವಾಗದಿದ್ದರೆ ನಾವು ಕಾಣಲು ಸಾಧ್ಯವಾಗುವುದು ಒಂದು ಸಬಲ ಕ್ರೂರ ಸಮಾಜವನ್ನೇ ಹೊರತು ಹೊಸದೊಂದು ಘನತೆಯ ನಾಗರಿಕ ಸಮಾಜವಲ್ಲ. ಇಂದು ದ.ಭಾರತದಲ್ಲೇ ತಮಿಳ್ನಾಡಿನ ದಲಿತರ ಸ್ಥಿತಿ ದಾರುಣವಾಗಿರುವುದಕ್ಕೆ ಇದೇ ಕಾರಣ. ಶೂದ್ರ ಜಾತಿಗಳು ತಮ್ಮ ಸಬಲೀಕರಣದೊಂದಿಗೆ ತಮ್ಮೊಳಗಿನ ಊಳಿಗಮಾನ್ಯಶಾಹಿ ಗುಣವನ್ನು ಮತ್ತೆ ಕಂಡುಕೊಂಡಿರುವುದು. ಹಾಗೆ ನೋಡಿದರೆ ಈ 'ಬ್ರಾಹ್ಮಣೇತರ ಚಳುವಳಿ'ಯೇ ಸ್ಫೂರ್ತಿಯಾಗಿ ಭಾರತದಾದ್ಯಂತ ರೂಪುಗೊಂಡ 'ಸಾಮಾಜಿಕ ನ್ಯಾಯ' ಚಳುವಳಿಯ ಒಂದು ಉಪಪರಿಣಾಮವೂ ಇದೇ ಆಗಿದೆ. ರಾಷ್ಟ್ರ ರಾಜಕಾರಣದಲ್ಲಿ ನೆಹರೂ ಕುಟುಂಬದ ರಾಜ್ಯಭಾರಕ್ಕೆ ಸಮಾನಾಂತರವಾಗಿ ವಿವಿಧ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಉದ್ದೇಶವನ್ನೇ ಭಂಗಗೊಳಿಸುತ್ತಾ ಬೇರೂರಿರುವ ಕುಟುಂಬ ರಾಜಕಾರಣದ ಶಾಖೆಗಳೇ ಇದಕ್ಕೆ ಸಾಕ್ಷಿ. ಒಮ್ಮೆ ಕರುಣಾನಿಧಿಯವರು ಯಾವುದೋ ಪ್ರತಿಭಟನೆಗಾಗಿ ಅಣ್ಣಾ ಸಮಾಧಿಯ ಬಳಿ ಏರ್ ಕೂಲರ್‌ಗಳೊಂದಿಗೆ ಸಜ್ಜಾದ ಆವರಣದಲ್ಲಿ ತಮ್ಮ ಇಬ್ಬರು ಹೆಂಡಿರನ್ನೂ ತಮ್ಮ ಶಯನಾಸನದ ಎರಡೂ ಬದಿಗಳಲ್ಲಿರಿಸಿಕೊಂಡು ಒಂದು ದಿನದ ಉಪವಾಸ ನಡೆಸಿದ ಚಿತ್ರವೇ ಇಂತಹ ರಾಜಕಾರಣದ ಎಲ್ಲ ಮತ್ತು ಎಲ್ಲರ ಕಥೆಯನ್ನೂ ಹೇಳುವಂತಿತ್ತು.

ಕರುಣಾನಿಧಿಯವರ ಸಾವಿನ ಸಂದರ್ಭದಲ್ಲಿ ಮನಸ್ಸಿನಲ್ಲೇಳುವ ಇನ್ನೊಂದು ದೊಡ್ಡ ನಿರಾಸೆ ಎಂದರೆ ರಾಷ್ಟ್ರಾಡಳಿತದಲ್ಲಿ ದೆಹಲಿ ದರ್ಬಾರಿಗೆ ಇರುವ ಪ್ರಾಮುಖ್ಯತೆಯನ್ನು ಪ್ರಶ್ನಿಸುತ್ತಾ ರಾಜ್ಯ ಸ್ವಾಯತ್ತೆಯನ್ನು ಪ್ರಬಲವಾಗಿ ಪ್ರತಿಪಾದಿಸುವ ರಾಜಕೀಯ ವಾರಸುದಾರಿಕೆಯನ್ನು ಇವರು ನಿಧಾನವಾಗಿ ಕೈಬಿಟ್ಟದ್ದು. ತಮ್ಮ ರಾಜಕೀಯ ಉಳಿವಿಗಾಗಿ ದೆಹಲಿ ಪ್ರಭುಗಳೊಂದಿಗೆ ಮಾಡಿಕೊಂಡ ಹಲವು ರಾಜಿಗಳೇ ಇದಕ್ಕೆ ಕಾರಣವೆಂಬುದು ಸ್ಪಷ್ಟ. ದೊಡ್ಡ ಆದರ್ಶಗಳನ್ನು ಸಾಧಿಸಲು ತುಂಬ ದೊಡ್ಡ ಶೀಲದ ಅಗತ್ಯವೂ ಇರುತ್ತದೆ. ಇಲ್ಲಿ ಶೀಲ ಎಂದರೆ ವ್ಯಕ್ತಿತ್ವದ ಸಮಗ್ರತೆ. ಆ ಸಮಗ್ರತೆಯಲ್ಲೇ ಬದುಕಿನ ಆನಂದ ಮತ್ತು ಸಾರ್ಥಕತೆಯನ್ನು ಕಂಡುಕೊಳ್ಳುವ ಗುಣ. ಕರುಣಾನಿಧಿ ಅವರು ತಮ್ಮ ವ್ಯಕ್ತಿತ್ವದ ಮಿತಿಗಳಲ್ಲೇ ಏನನ್ನು ಸಾಧಿಸಬಹುದೋ ಅದನ್ನು ಸಾಧಿಸಿದರು. ಅದರಿಂದಾಗಿ ಒಂದು ಘನವಾದದ್ದಲ್ಲದಿದ್ದರೂ ಒಂದು ಸಣ್ಣ ಜಾಗೃತಿ ತಮಿಳ್ನಾಡಿನ ಜನಮನದಲ್ಲಿ ಆಗಿದೆ. ಅದರ ಪ್ರಯೋಜನಗಳನ್ನು ಆ ಜನ ಉಣ್ಣುತ್ತಿರುವವರೆಗೂ ಕರುಣಾನಿಧಿ ಅವರ ಮನಸ್ಸಿನಲ್ಲಿ ಉಳಿಯುತ್ತಾರೆ. ಕರುಣಾನಿಧಿಯವರಿಗೆ ಪತ್ರಿಕೆಯ ಶ್ರದ್ಧಾಂಜಲಿಗಳು.

-ಡಿ.ಎಸ್. ನಾಗಭೂಷಣ

ಸ್ಮರಣೆ

ಶಿವರಾಮು ಕಾಡನಕುಪ್ಪೆ ಎಂಬ ನನ್ನ ಅಪ್ಪ

–ಡಾ. ಸುಶಿ ಕಾಡನಕುಪ್ಪೆ



ಇತ್ತೀಚೆಗೆ ನಮ್ಮನ್ನಗಲಿ ಹೋದ ಗೆಳೆಯ ಶಿವರಾಮು ಕಾಡನಕುಪ್ಪೆ ನಮ್ಮ ಪತ್ರಿಕೆಯ ಅಭಿಮಾನಿ ಓದುಗರಲ್ಲೊಬ್ಬರಾಗಿದ್ದರು.. ಪ್ರತಿ ಸಂಚಿಕೆ ತಲುಪಿದ ನಂತರದಲ್ಲೇ ಸಂಚಿಕೆಯ ಲೇಖನಗಳ ಬಗ್ಗೆ ತಮ್ಮ ಬಿಚ್ಚು ಮನಸ್ಸಿನ ಅಭಿಪ್ರಾಯವನ್ನು ನನ್ನೊಂದಿಗೆ ಹಂಚಿಕೊಳ್ಳುವುದು ಅವರ ತಿಂಗಳ ಸಂಪ್ರದಾಯವಾಗೇ ಹೋಗಿತ್ತು. ತೀವ್ರವಾಗಿ ಅನಿಸಿದ್ದನ್ನು ಅವರು ಪತ್ರ ರೂಪದಲ್ಲಿ ಬರೆದದ್ದೂ ಉಂಟು. .ಎಪ್ಪತ್ತು–ಎಂಬತ್ತರ ದಶಕದಲ್ಲಿನ ಸಮಾಜವಾದಿ ಯುವಜನ ಸಭಾ, ದಲಿತ ಸಂಘರ್ಷ ಸಮಿತಿ ಮತ್ತು ವಿಚಾರವಾದಿ ಒಕ್ಕೂಟದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಅವರು ಸಾಹಿತ್ಯ ಪ್ರಿಯರೂ ಆಗಿದ್ದು ಕವಿತೆಗಳು ಮತ್ತು ಹಲವು ಸಾಹಿತ್ಯ ಚಿಂತನೆಯ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿದ್ದ ಅವರು ಮೈಸೂರಿನ ಖಾಸಗಿ ಕಾಲೇಜೊಂದರ ಪ್ರಾಂಶುಪಾಲರಾಗಿದ್ದ ಕಾಲದ ಆಸುಪಾಸಿನಲ್ಲೇ ಅವರನ್ನು ಬಾಧಿಸತೊಡಗಿದ ಕ್ಯಾನ್ಸರ್ ಮತ್ತು ಸಂಬಂಧಿಸಿದ ಇತರೆ ತೊಂದರೆಗಳನ್ನು ಸುಮಾರು ಇಪ್ಪತ್ತು ವರ್ಷಗಳ ಕಾಲ ಧೈರ್ಯಗುಂದದೆ ಎದುರಿಸಿದ ಧೀರರವರು. ಇದರಲ್ಲಿ ಅವರ ಕುಟುಂಬದ ಪಾತ್ರ ಕಡಿಮೆ ಏನಲ್ಲ. ಇಲ್ಲಿ ಅವರ ಮಗಳು ತಮ್ಮ ತಂದೆಯನ್ನು ನೆನಪಿಸಿಕೊಂಡಿದ್ದಾರೆ. ಸಂ.

ನನಗೆ ಅಪ್ಪ ಎಂದರೆ ತೆರೆದ ವಿಶ್ವಕೋಶವಿದ್ದಂತೆ. ನನಗೆ ನೆನಪಿರುವಂತೆ ನಾನು ಚಿಕ್ಕ ಹುಡುಗಿಯಾಗಿದ್ದಾಗಿಂದಲೂ ಅಪ್ಪನಲ್ಲಿ ನನ್ನ ಎಲ್ಲಾ ಕುತೂಹಲಗಳನ್ನು ಕೇಳುತ್ತಾ, ಅವರಲ್ಲಿ ಉತ್ತರವನ್ನು ಕಂಡುಕೊಳ್ಳುತ್ತಾ ಸಾಗಿದ್ದೆ ನನ್ನ ಜೀವನವಾಗಿತ್ತು. ಅಪ್ಪನ ಜೊತೆ ಬಸ್ಸಿನಲ್ಲಿ ಕೂತು ಊರಿಗೆ ಹೋಗುತ್ತಿದ್ದ ಸಂದರ್ಭದಲ್ಲಿ ಕಿಟಕಿಯಿಂದಾಚೆ ಕಾಣುವ ವಿವಿಧ ಮರ–ಗಿಡಗಳ ಬಗ್ಗೆ ನನ್ನ ಪ್ರಶ್ನೆಗಳಿರುತ್ತಿದ್ದವು. ನಾನು ದೊಡ್ಡವಳಾಗುತ್ತಿದ್ದಂತೆ ನನ್ನ ಚರ್ಚೆಯ ವಿಷಯಗಳು ವಯಸ್ಸಿಗನುಗುಣವಾಗಿ ಬದಲಾಗುತ್ತಿದ್ದವು. ಪ್ರತಿಯೊಂದಕ್ಕೂ ಅಪ್ಪ ವಿವರಣೆ ಕೊಡುತಿದ್ದದ್ದು ನನಗೆ ಅಚ್ಚರಿ ಮೂಡಿಸುತಿತ್ತು. ಜೊತೆಗೆ ನನ್ನ ಕುತೂಹಲ ತಣಿದ ಸಂತೋಷ.

ನನ್ನಲ್ಲಿ ಜೀವನದ ಬಗ್ಗೆ ಸರಳವಾದ ಪ್ರೀತಿ ಮತ್ತು ವಿಶ್ವದ ಬಗ್ಗೆ ಅಪಾರವಾದ ಕುತೂಹಲ ಬೆಳೆಸಿದ್ದು ಮತ್ತು ಅದನ್ನು ಕೊನೆಯವರೆಗೂ ಕಾಪಿಡಬೇಕು ಎಂದು ಕಲಿಸಿದ್ದು ಅಪ್ಪ. ಅಪ್ಪನ ಜೊತೆ ಯಾವುದೇ ಸಂದರ್ಭವಾಗಲಿ, ಅದು ದೂರವಾಣಿಯ ಕರೆಗಳಾಗಿದ್ದರೂ, ಸಮಾಜದ ಅಥವಾ ಬದುಕಿನ ಬಗೆಗಿನ ನನ್ನ ಪ್ರಶ್ನೆಗಳು, ಅಪ್ಪನ ವಿವರಣೆ ಮತ್ತು ಅವರ ಜೊತೆಗಿನ ಚರ್ಚೆ ನನ್ನ ದಿನನಿತ್ಯದ ಭಾಗವಾಗಿತ್ತು; ಅಪ್ಪನ ಕೊನೆ ದಿನಗಳವರೆಗೂ. ಅಪ್ಪ ನನ್ನ ಜೀವದ ಗೆಳೆಯರಾಗಿದ್ದರು. ನನ್ನನ್ನು ಈಗ ಬಹುವಾಗಿ ಕಾಡುವುದು ಅಪ್ಪನ ಈ ತುಂಬು ನೆನಪೇ..

ಆಗ ಅಪ್ಪ ಸಾಮಾಜಿಕ ಚಳುವಳಿಗಳಲ್ಲಿ ತುಂಬ ತೊಡಗಿಕೊಂಡಿರುತ್ತಿದ್ದರು. ಸಮಾಜವಾದಿ ಚಳುವಳಿ, ದಲಿತ–ಬಂಡಾಯ ಚಳುವಳಿ, ಜಾತಿ ವಿನಾಶ ಚಳುವಳಿ,ಗೋಕಾಕ್ ಚಳುವಳಿ ಮಾನವ ಮಂಟಪದ ಚಟುವಟಿಕೆಗಳೆಲ್ಲ ನಡೆಯುತ್ತಿದ್ದ ಆ ಕಾಲದಲ್ಲಿ ಮಕ್ಕಳನ್ನು ಚರ್ಚೆಗಳಿಗೆ ಕರೆದೊಯ್ಯುತ್ತಿದ್ದರು. ಕೆಲವು ಚರ್ಚೆ–ಸಭೆಗಳು ನಮ್ಮ ಮನೆಯಲ್ಲೇ ನಡೆಯುತ್ತಿದ್ದವು. ಒಮ್ಮೆ ಇಂತಹ ಚಳುವಳಿಯ ಸಂಬಂಧವಾಗಿ ಪೋಲೀಸರು ನಮ್ಮ ಮನೆಯನ್ನೆಲ್ಲ ತಪಾಸಣೆ ಮಾಡಿದ್ದುಂಟು. ಮಾನವ ಮಂಟಪದ ವತಿಯಿಂದ ಅಂತರ–ಜಾತಿ ವಿವಾಹಗಳನ್ನು ಮಾಡಿಸುತ್ತಿದ್ದರು. ಹಾಗೆ ವಿವಾಹವಾದವರು ಜೀವನಕ್ಕೆ ಅನುಕೂಲಗಳನ್ನು ಸೃಷ್ಟಿಸಿಕೊಳ್ಳುವ ತನಕ ಕೆಲವು ನಮ್ಮ ಮನೆಯಲ್ಲೇ ಹಲವು ದಿನಗಳು ಆಶ್ರಯ ಪಡೆಯುತ್ತಿದ್ದರು.

ನಾನು ಕಾಲೇಜು ಓದುವಾಗ ಒಂದು ಕಪ್ಪು–ಬಿಳಿ ಬಣ್ಣದ ಬೆಕ್ಕಿನ ಮರಿಯನ್ನು ಮನೆಗೆ ತಂದೆ. ಅಮ್ಮನಿಂದ ವಿರೋಧವಿದ್ದರೂ ಅಪ್ಪನ ಅನುಮತಿ ಸಿಕ್ಕಿತು. ಆ ಬೆಕ್ಕಿನ ಸೌಂದರ್ಯ ನೋಡಿ ನಾವೆಲ್ಲ ಮನಸೋತಿದ್ದೆವು. ಅಪ್ಪ ಅದಕ್ಕೆ 'ಕಾಬಿ' ಎಂದು ಹೆಸರಿಟ್ಟರು. . ಕಾಬಿ ಎಂದರೆ 'ಕರಿಯ' 'ಬಿಳಿಯ' ಪದಗಳ ಸಮ್ಮಿಲನ. ಕಾಬಿ ಹಾಲು, ಮೊಸರು, ಮೂಳೆ ತಿಂದು ದಪ್ಪ ಪುಷ್ಟವಾಗಿ ಬೆಳೆಯಿತು. ನಾವು ಸಂಜೆ ವಾಯು ವಿಹಾರಕ್ಕೆ ಹೊರಟಾಗ ಕಾಬಿ ನಮ್ಮ ಜೊತೆ ಬರುತಿತ್ತು. ನಮ್ಮ ಮನೆ ಸುತ್ತ ಮುತ್ತ ಬಯಲು ಹೆಚ್ಚು; ಜನವಸತಿ ಕಡಿಮೆ ಇತ್ತು. ಹಾಗಾಗಿ ಮೊಲಗಳು ಮತ್ತು ಹಲವು ಬಗೆಯ ಪಕ್ಷಿಗಳು ಹೇರಳವಾಗಿದ್ದವು. ಕಾಬಿ ಇವನೆಲ್ಲಾ ಬೇಟೆಯಾಡಿ ಮನೆಗೆ ತರುತಿತ್ತು. ಅಪ್ಪ ಕಾಬಿಯ ಚಲನವಲನ ಮತ್ತು ಅದರ ಜೀವನಕ್ರಮದ ಬಗ್ಗೆಯೂ ನಮ್ಮಲ್ಲಿ ಚರ್ಚಿಸುತ್ತಿದ್ದರು. ಕಾಬಿ ಕೆಲವೊಮ್ಮೆ ಬೇಟೆಯನ್ನು ಸ್ವಲ್ಪ ತಿಂದು ಮಿಕ್ಕಿದ್ದನ್ನು ನಮ್ಮ ಮನೆಯೊಳಗೆ ತಂದು ಇಡುತಿತ್ತು. ಆಗ ಅದನ್ನು ಸ್ವಚ್ಛಗೊಳಿಸುವ ಕೆಲಸವನ್ನು ಅಪ್ಪ ನಮಗೆ ಹೇಳುತಿದ್ದರು. 'ಕಾಬಿಯನ್ನು ನೀವು ಪ್ರೀತಿಸುವುದು ಎಂದರೆ ಅದು ಮಾಡುವ ಎಲ್ಲಾ ಉಪಟಳಗಳನ್ನೂ ಸಹಿಸುವುದು ಎಂದರ್ಥ' ಎಂದು ನಮಗೆ ತಿಳಿಹೇಳುತಿದ್ದರು. ಕಾಬಿ ಒಮ್ಮೆ ಕಣ್ಮರೆಯಾಗಿಬಿಟ್ಟಿತು. ಅಪ್ಪ ತುಂಬಾ ಕಷ್ಟ ಪಟ್ಟು ಎಷ್ಟೋ ದಿನಗಳವರೆಗೆ ನಮ್ಮ ಜೊತೆ ಹುಡುಕಿದರು. ಆದರೆ ಸಿಗಲಿಲ್ಲ. ಅಪ್ಪ ಅನುಭವಿಸಿದ ಸಂಕಟ ನನ್ನ ಕಣ್ಣ ಮುಂದೆ ಈಗಲೂ ಇದೆ. ಕಾಬಿಯ ಬಗ್ಗೆ ಒಂದು ಕವನವನ್ನೇ ಬರೆದರು. ಕಾಬಿ ಅಷ್ಟೇ ಅಲ್ಲ . ಮನುಷ್ಯನಾಗಿರಲಿ, ಪ್ರಾಣಿಯಾಗಿರಲಿ ಅಥವಾ ಪ್ರಕೃತಿಯಾಗಿರಲಿ ಸಹಜೀವಿಗಳ ಸುಖ ಮತ್ತು ದುಃಖಕ್ಕೆ ಮಿಡಿಯುತ್ತಿದ್ದ ಮನಸ್ಸು ಅಪ್ಪನದ್ದು. ಹೀಗೆ ಅಪ್ಪನ ನುಡಿದಂತೆ ನಡೆದ ಹಾದಿಯನ್ನು ನೋಡಿ ಕಲಿತದ್ದೆ ನಮ್ಮ ಜೀವನವಾಗಿದೆ.

ಇಪ್ಪತ್ತು ವರ್ಷಗಳ ಸುದೀರ್ಘ ಅನಾರೋಗ್ಯದ ಅವಧಿಯಲ್ಲೂ ಅಪ್ಪ ನಮಗೆ ಜೀವನವನ್ನು ನಡೆಸುವ ಕಲೆ ಕಲಿಸಿದರು. ಒಂದಾದ ಮೇಲೊಂದರಂತೆ ಅಪ್ಪಳಿಸುತ್ತಿದ್ದ ಕ್ಯಾನ್ಸರ್ ಖಾಯಿಲೆಯ ಪರಿಣಾಮಗಳು ಅವರನ್ನು ಆತಂಕದಲ್ಲೇ ಇರಿಸಿದ್ದವು. ಅನಾರೋಗ್ಯದ ಜೊತೆಗಿನ ಹೋರಾಟ ಅವರ ಮಿಕ್ಕೆಲ್ಲ ಹೋರಾಟಗಳಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ತೀವ್ರತೆ–ಏಕಾಗ್ರತೆಗಳನ್ನು ಒತ್ತಾಯಿಸಿತ್ತು. ಅನಾರೋಗ್ಯದ ನೋವು, ಸಮಸ್ಯೆಗಳ ನಡುವೆ ಸಂತೋಷದಿಂದ ಬದುಕನ್ನು ಕಂಡುಕೊಂಡ ಕುಟುಂಬ ನಮ್ಮದು. ಕಾರಣ: ಅಪ್ಪನ ಜೀವನೋತ್ಸಾಹ, ಹಾಸ್ಯ ಪ್ರವೃತ್ತಿ, ಸರಳತೆ, ಪ್ರಾಮಾಣಿಕತೆ ಮತ್ತು ಅವರಲ್ಲಿದ್ದ ಅಪಾರವಾದ ಸಹನೆ.

ಅಪ್ಪನದು ಶಿಸ್ತಿನ ಬದುಕು. ಅಪ್ಪನ ಆಲೋಚನೆಗಳಲ್ಲೂ ಶಿಸ್ತು ಕಾಣಿಸುತಿತ್ತು. ಸಾವಿನ ದವಡೆಯಲ್ಲಿ ಸುದೀರ್ಘ ಅವಧಿ ದೂಡಿದ್ದ ಅಪ್ಪ ಸಾವಿಗೂ ಶಿಸ್ತಿನ ಆಹ್ವಾನ ನೀಡಿದರು. ೨೦೧೮ ಜುಲೈನಲ್ಲಿ ತೀವ್ರನಿಗಾ ಘಟಕದಲ್ಲಿ ನಮ್ಮ ಜೊತೆ ಅಪ್ಪ ಸಾವಿನ ಘಳಿಗೆಯನ್ನು ತಾವೇ ನಿರ್ಧರಿಸಿದರು:

"ಕಾಕತಾಳಿಯ ನೋಡಿ. ನನ್ನ ಕೊನೆಯ ಬರಹ ಸಾಕ್ರಟಿಸ್‌ನ ಬಗ್ಗೆ. ಅವನೂ ಇಚ್ಛಾಮರಣಿ. ನಾನು ಇನ್ನು ಇದನ್ನು ಅಂತ್ಯಗೊಳಿಸಬೇಕಿದೆ. ಪ್ರೀತಿ, ತಾಳ್ಮೆ ಮತ್ತು ಸಹನೆ ನಿಮ್ಮೊಂದಿಗಿರಲಿ".



(ಡಾ.ಸುಶಿ ಕಾಡನಕುಪ್ಪೆಯವರು ಬೆಂಗಳೂರಿನ ಖಾಸಗಿ ದಂತಮಹಾವಿದ್ಯಾಲಯವೊಂದರ ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದಾರೆ)

ಚಂದಾ ನವೀಕರಣಕ್ಕಾಗಿ ಮಾಹಿತಿ


ಈ ಸಂಚಿಕೆಯೊಂದಿಗೆ ನಮ್ಮ ಬಹಳಷ್ಟು ಓದುಗರ ಚಂದಾ ಮುಗಿದಿದೆ. ಹಾಗೆ ಮುಗಿದಿರುವವರಿಗೆ ಈ ಸಂಚಿಕೆಯ ಮೊದಲ ಪುಟಕ್ಕೆ ಅಂಟಿಸಿರುವ ಚಿಕ್ಕ ಚೀಟಿಯಲ್ಲಿ ಸೂಚನೆ ನೀಡಲಾಗಿದೆ. ಅಂತವರು ಪತ್ರಿಕೆ ಬೇಕಿದ್ದರೆ ದಯವಿಟ್ಟು ಈ ತಿಂಗಳ 15ರೊಳಗೆ ಚಂದಾ ನವೀಕರಿಸಿ ಎಂದು ಕೋರುತ್ತೇವೆ, ಒಂದು ವರ್ಷದ ಚಂದಾ 200 ರೂ. ಗಳನ್ನು ಚೆಕ್/ಡಿಡಿ/ಎಂ.ಓ ಮೂಲಕ ಪತ್ರಿಕೆಯ ಮುಖಪುಟದಲ್ಲಿರುವ ವಿಳಾಸಕ್ಕೆ ಕಳಿಸಬಹುದು. ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಿವಮೊಗ್ಗದ ಗೀತಾಕೃಪಾ ಶಾಖೆಯಲ್ಲಿ (ifsc code : sbin 040444) ಸಂಪಾದಕರು, ಹೊಸ ಮನುಷ್ಯ ಎಂಬ ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ಚಂದಾ ಹಣ ಕಳಿಸಬಹುದು ಯಾವುದೇ ಕಾರಣಕ್ಕಾಗಿ ದಯವಿಟ್ಟು ಬ್ಯಾಂಕಿಗೆ ನಗದು ಕಟ್ಟುವ ಮೂಲಕ ಹಣ ವರ್ಗಾಯಿಸಬೇಡಿ. ನಗದು ವ್ಯವಹಾರವೆಂದು ಅದಕ್ಕೆ ಬ್ಯಾಂಕ್ ನಮಗೆ ರೂ. 59/– ರಷ್ಟು ಶುಲ್ಕ ವಿಧಿಸುತ್ತದೆ. ನೀವು ಚಂದಾ ಕಳಿಸಿದ ಕೂಡಲೇ ಈ ಬಗ್ಗೆ 9449242284 : ಈ ಸಂಖ್ಯೆಗೆ ಒಂದು ಕರೆ ಅಥವಾ ವಾಟ್ಸಾಪ್/ಎಸ್.ಎಂ.ಎಸ್. ಕಳಿಸಿರಿ–ಸಂಪಾದಕ

ಕುಮಾರಣ್ಣನ ಹೊಸ ಶೈಲಿಯ ಆಡಳಿತ!

ರಾಜ್ಯ ರಾಜಕಾರಣ

ಕ್ಯಾಪ್ಟನ್ ಇದ್ದಾರೆ, ಆದರೆ ಕ್ಯಾಬಿನೆಟ್ ಎಲ್ಲಿ ??

–ರವೀಂದ್ರ ರೇಷ್ಮೆ



ಮೂರು ತಿಂಗಳ ನಂತರವೂ ಈ ಸರಕಾರದ ಪ್ರಭಾವ ಅಷ್ಟಾಗಿ ಮೂಡದಿರುವುದರ ಕಾರಣ ಸ್ವತ: ಕುಮಾರಸ್ವಾಮಿಯವರ ಧೋರಣೆಯೇ. ಇದುವರೆಗೂ ಅವರ ಬಾಯಿಂದ "ಇದು ನಾನೇ ಮಾಡಿದ್ದು, ಇದು ನನ್ನದೇ ಆದ ಚಿಂತನೆ, ನಾನೇ ಇದನ್ನೆಲ್ಲಾ ನೋಡಿಕೊಳ್ಳೇನೆ" ಎಂಬ ಪ್ರಥಮ ವಿಭಕ್ತಿ ಏಕವಚನ ಪ್ರಯೋಗವೇ ಕೇಳಿಬರುತ್ತಿದೆ. "ನಾವು ನಮ್ಮದು, ನಮ್ಮ ಸರಕಾರ" ಎಂಬ ಬಹುವಚನದ ಸಾಮೂಹಿಕ ಕ್ರಿಯೆ, ಸಹಭಾಗಿತ್ವದ ಮಾತುಗಳೇ ಹೊರಡುತ್ತಿಲ್ಲ. ಎಲ್ಲೆಲ್ಲಿಯೂ ಕೇವಲ ಮುಖ್ಯಮಂತ್ರಿಯದ್ದೇ ಏಕಪಾತ್ರಾಭಿನಯ, ಏಕಮುಖಿ ನಿರೂಪಣೆ ಹಾಗೂ ಏಕಾಂಗಿ ಅಭಿಪ್ರಾಯ ಪ್ರಕಟಣೆಗಳೇ!...

ಇವತ್ತು ಶುಕ್ರವಾರ ಆಗಸ್ಟ್ ೨೪ಕ್ಕೆ ಸರಿಯಾಗಿ ಮೂರು ತಿಂಗಳಾಯ್ತು ಕುಮಾರಸ್ವಾಮಿ ನೇತೃತ್ವದ ಸರಕಾರ ಅಸ್ತಿತ್ವಕ್ಕೆ ಬಂದು. ಆದರೆ ತೊಂಭತ್ತು ದಿನಗಳ ನಂತರವೂ ಸಚಿವ ಸಂಪುಟದ ರಚನೆ ಪೂರ್ಣಗೊಳ್ಳದಿರುವುದು; ಬಹುನಿರೀಕ್ಷಿತ ನಿಗಮ–ಮಂಡಳಿ ಅಧ್ಯಕ್ಷರುಗಳ ನೇಮಕಾತಿ ನಡೆಯದಿರೋದು, ಎರಡು ಪರಸ್ಪರ ಶತ್ರುಭಾವದ ಪಾರ್ಟಿಗಳ ಈ ಮೈತ್ರಿ ಸರಕಾರಕ್ಕೆ ದಿಕ್ಸೂಚಿಯಾಗಬೇಕಿದ್ದ ಕನಿಷ್ಠ ಸಾಮಾನ್ಯ ಕಾರ್ಯಕ್ರಮವೆಂಬ ಆಡಳಿತ ಪ್ರಣಾಳಿಕೆಯ ಕರಡು ಪ್ರತಿ ಕೂಡ ತಯಾರಾಗದಿರುವುದು ವಿಚಿತ್ರವಾಗಿದೆ.

ತಮಾಷೆಯೆಂದರೆ ಇಂತಹ ಎಲ್ಲ ಮಹತ್ವದ ಪ್ರಕ್ರಿಯೆಗಳ ವಿಳಂಬಕ್ಕೆ ಉಭಯ ಪಕ್ಷಗಳು ನೀಡುವ ಸಮಜಾಯಿಷಿ ಎಂದರೆ ಮೊದಲು ಆಷಾಢ ಮಾಸ, ತದನಂತರ ಲೋಕಲ್ ಬಾಡಿ ಚುನಾವಣೆ ಘೋಷಣೆ, ಕಡೆಯಲ್ಲೀಗ ಕೊಡಗಿನಲ್ಲಿ ಸಂಭವಿಸಿರುವ ಭೀಕರ ಅತಿವೃಷ್ಟಿ ದುರಂತ – ಹೀಗೆ ಸಮಯ, ಸಂದರ್ಭಕ್ಕೆ ತಕ್ಕಂತೆ ಒಂದೊಂದೇ ನೆಪ, ಸಬೂಬು, ಸಮರ್ಥನೆಗಳು ಹರಿದು ಬರುತ್ತಲೇ ಇವೆ ...

ಹೀಗೆಂದ ಮಾತ್ರಕ್ಕೆ ಈ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ ಹಾಗೂ ಇನ್ನಿತರೆ ಮಂತ್ರಿಗಳು ಏನೇನೂ ಕೆಲಸ ಮಾಡ್ತಾಯಿಲ್ಲ ಎಂದೂ ಹೇಳಲಿಕ್ಕಾಗದು. ಅದರಲ್ಲೂ ವಿಶೇಷವಾಗಿ ಸಿ.ಎಂ. ಸಾಹೇಬ್ರೇ ಪ್ರತಿ ನಿತ್ಯ, ಪ್ರತಿ ಗಂಟೆ, ಪ್ರತಿ ನಿಮಿಷಕ್ಕೊಂದು ಸುದ್ದಿ ಮಾಡುವಂತಹ ಚಟುವಟಿಕೆಯಲ್ಲಿ ತೊಡಗಿಸಿಕೊಂಡೇ ಇರುತ್ತಾರೆ. ಇಂದು ನಾವು ನೋಡುತ್ತಿರುವ ೨೦೧೮ರ ಮಾಡೆಲ್ ಕುಮಾರಸ್ವಾಮಿ ಹಿಂದೆ ಭಾಜಪ ಜೊತೆ ಸೇರಿ ನಾಟಕೀಯ ಶೈಲಿಯಲ್ಲಿ ಸಿ.ಎಂ. ಪದವಿಗೇರಿದ್ದ ೨೦೦೬ರ ಮಾಡೆಲ್ ಕುಮಾರಣ್ಣನಲ್ಲವೇ ಅಲ್ಲ. ಅಷ್ಟರಮಟ್ಟಿಗೆ ೧೧ ವರ್ಷಗಳ ಅವಧಿಯ ಅಧಿಕಾರರಹಿತ ರಾಜಕೀಯದ ಅನುಭವದಿಂದ ಸಾಕಷ್ಟು ಮಾಗಿದ್ದಾರೆ. ಇತರರ ಮಾತುಗಳನ್ನು ಶಾಂತಚಿತ್ತದಿಂದ ಆಲಿಸುವ ಸಹನಶೀಲತೆಯನ್ನು ತೋರುತ್ತಿದ್ದಾರೆ. ಹಾಗೆಯೇ ಹಣಕಾಸು ಇಲಾಖೆ ವಹಿಸಿಕೊಂಡು ಬಜೆಟ್ ತಯಾರಿಕೆಯಲ್ಲೂ ವಿಭಿನ್ನ ಹಾದಿ ಹಿಡಿಯುವ ಮೂಲಕ ಹಲವಾರು ವಿಶಿಷ್ಟ ಬಗೆಯ ಚಿಂತನೆಗಳನ್ನು ಮಂಡಿಸಿದ್ದಾರೆ.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ತೋರಿರುವ ಅತ್ಯಂತ ಗಮನಾರ್ಹ ಕಾರ್ಯವೈಖರಿ ಎಂದರೆ ಆಡಳಿತಾತ್ಮಕ ಆದ್ಯತೆಗಳನ್ನು ಗುರುತಿಸುವುದಕ್ಕೋಸ್ಕರ ವಿವಿಧ ಕ್ಷೇತ್ರಗಳ ರಾಜಕೀಯೇತರ ತಜ್ಞರುಗಳು ಮತ್ತು ವೃತ್ತಿವಂತ ಪರಿಣಿತರನ್ನು ಕರೆದು ಮಾತನಾಡಿಸುತ್ತಿರುವುದು. ಇಂತಹ ಎರಡು ಸಂದರ್ಭಗಳನ್ನು ಉದಾಹರಿಸಬಹುದು ನೋಡಿ: ಜುಲೈ ತಿಂಗಳಾಂತ್ಯದಲ್ಲಿ ಜರುಗಿದ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಇಲಾಖಾ ಕಾರ್ಯದರ್ಶಿಗಳ ಎರಡು ದಿನಗಳ ಸಮ್ಮೇಳನದ ಆರಂಭದಲ್ಲಿಯೇ ಕುಮಾರಸ್ವಾಮಿ ಏರ್ಪಾಟು ಮಾಡಿದ್ದು ಸಹಜ ಕೃಷಿ ಪಂಡಿತ ಸುಭಾಷ್ ಪಾಳೇಕರ್‌ರ ಒಂದು ಗಂಟೆಯ ವಿಶೇಷ ಉಪನ್ಯಾಸ. ತದನಂತರ ಆ ವಿಷಯ ಕುರಿತಂತೆ ಚರ್ಚಾಗೋಷ್ಠಿ! ಅಂದರೆ ಇದುವರೆಗೂ ತೀರಾ ಔಪಚಾರಿಕವಾಗಿ, ಒಂದು ವಾರ್ಷಿಕ ವಿಧಿಯೆಂಬಂತೆ ನಡೆಯುತ್ತಿದ್ದ ಈ ಐಎಎಸ್ ಅಧಿಕಾರಿಗಳ ಸಮ್ಮೇಳನವನ್ನು ಒಂದು ಅಕ್ಯಾಡೆಮಿಕ್ ಚಿಂತನ ಶಿಬಿರವಾಗಿ ಮಾರ್ಪಡಿಸಿಬಿಟ್ಟರು ಕುಮಾರಸ್ವಾಮಿ.

ಮತ್ತೊಂದು ಪ್ರಸಂಗ ಈ ಜಿಲ್ಲಾಧಿಕಾರಿಗಳ ಸಮ್ಮೇಳನಕ್ಕಿಂತ ಮುಂಚೆಯೇ ನಡೆದದ್ದು. ತಾವು ಬಜೆಟ್‌ನಲ್ಲಿ ಪ್ರಕಟಿಸಿದ ಇಸ್ರೇಲ್ ಮಾದರಿ ಕೃಷಿ ಮತ್ತು ತೋಟಗಾರಿಕಾ ಯೋಜನೆಗಳ ಕುರಿತಂತೆ ರಾಜ್ಯ ಸರಕಾರದ ಉನ್ನತಾಧಿಕಾರಿಗಳಿಗೆ ಒಂದಷ್ಟು ವೈಜ್ಞಾನಿಕ ತಿಳುವಳಿಕೆ ಮೂಡಲೆಂದು "ಹಸಿರು ಕ್ರಾಂತಿ"ಯ ಹರಿಕಾರ ಡಾ॥ ಎಂ.ಎಸ್. ಸ್ವಾಮಿನಾಥನ್‌ರನ್ನೇ ಬರಮಾಡಿಕೊಂಡು ಅವರಿಂದ ಪವರ್‌ಪಾಯಿಂಟ್ ಕಾರ್ಯಾಗಾರವನ್ನೇ ನಡೆಸಿದರು ಕುಮಾರಸ್ವಾಮಿ. ನೆಹರೂ ಕಾಲದ ಈ ಹಿರಿಯ ಜೀವ ಸ್ವಾಮಿನಾಥನ್‌ರಿಗೆ ಹೀಗೆ ಈ ದೇವೇಗೌಡರ ಮಗ ಕುಮಾರಣ್ಣನಿಗಿರೋ ಜ್ಞಾನಾರ್ಜನೆಯ ಆಸಕ್ತಿ ಕಂಡು ಅತ್ಯಾಶ್ಚರ್ಯವಾಯಿತಂತೆ.

ಇನ್ನು ನಗರ ಪ್ರದೇಶದ ಮೂಲ ಸೌಕರ್ಯ ಅಭಿವೃದ್ಧಿಯ ವಿಷಯದಲ್ಲೂ ಅಷ್ಟೇ; ಕಾರ್ಪೋರೇಟ್ ವಲಯದ ಸಾಧಕರುಗಳಾದ ಸುಧಾ ಮೂರ್ತಿ, ಅಜೀಮ್ ಪ್ರೇಮ್‌ಜಿ, ಕಿರಣ್ ಮಜುಮ್‌ದಾರ್ ಮುಂತಾದ ಪ್ರಮುಖರೊಂದಿಗೆ ಮುಕ್ತ ಚರ್ಚೆ ನಡೆಸುವ ಮೂಲಕ ಅವರುಗಳಿಂದ ಸ್ವಯಂಪ್ರೇರಿತವಾಗಿ ಸಾರ್ವಜನಿಕ ಆಸ್ತಿ ನಿರ್ಮಾಣದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಸಹಭಾಗಿತ್ವದ ಆಶ್ವಾಸನೆ ಪಡೆದುಕೊಂಡಿದ್ದಾರೆ.


ಮತ್ತೆ ಇಷ್ಟೆಲ್ಲ ದಿಟ್ಟ ಹೆಜ್ಜೆಗಳನ್ನಿಡುತ್ತಾ ಸಾಗಿರುವ ಮುಖ್ಯಮಂತ್ರಿಯ ಕಾರ್ಯಶೈಲಿ ಇಷ್ಟೊತ್ತಿಗಾಗಲೇ ರಾಜ್ಯದ ಜನತೆಯಲ್ಲೂ ಹಾಗೂ ಮೈತ್ರಿ ಸರಕಾರದ ಪಾಲುದಾರ ಪಕ್ಷಗಳ ನಾಯಕರುಗಳಲ್ಲೂ, ಕಾರ್ಯಕರ್ತರಲ್ಲೂ ಮಿಂಚಿನ ಸಂಚಾರವಾಗಬೇಕಿತ್ತಲ್ಲವೇ ? ಹಾಗಾಗುತ್ತಿಲ್ಲವಾದರೆ ಕಾರಣವೇನಿದ್ದೀತು ? ಮೂರು ತಿಂಗಳ ನಂತರವೂ ಈ ಸರಕಾರದ ಪ್ರಭಾವ ಅಷ್ಟಾಗಿ ಮೂಡದಿರುವುದರ ಕಾರಣ ಸ್ವತ: ಕುಮಾರಸ್ವಾಮಿಯವರ ಧೋರಣೆಯೇ. ಇದುವರೆಗೂ ಅವರ ಬಾಯಿಂದ "ಇದು ನಾನೇ ಮಾಡಿದ್ದು, ಇದು ನನ್ನದೇ ಆದ ಚಿಂತನೆ, ನಾನೇ ಇದನ್ನೆಲ್ಲಾ ನೋಡಿಕೋಳ್ತೇನೆ " ಎಂಬ ಪ್ರಥಮ ವಿಭಕ್ತಿ ಏಕವಚನ ಪ್ರಯೋಗವೇ ಕೇಳಿಬರುತ್ತಿದೆ. "ನಾವು ನಮ್ಮದು, ನಮ್ಮ ಸರಕಾರ" ಎಂಬ ಟೀಂ ಸ್ಪಿರಿಟ್ ಅಥವಾ ಸಾಮೂಹಿಕ ಸ್ಫೂರ್ತಿಯೇ ಸಮ್ಮಿಶ್ರ ಸರ್ಕಾರದ ಮಂತ್ರಿಗಳಲ್ಲಿ ಕಂಡುಬರುತ್ತಿಲ್ಲ.

ಈ ಲೇಖನವನ್ನು ಪೂರ್ಣಗೊಳಿಸುತ್ತಿರುವಂತೆಯೇ ಮುಖ್ಯಮಂತ್ರಿಗಳಿಂದ ಮಗದೊಂದು ತಾಜಾ "ಬ್ರೇಕಿಂಗ್ ನ್ಯೂಸ್" ಬಿತ್ತರಗೊಳ್ಳುತ್ತಿದೆ. "ಸಣ್ಣ ಹಿಡುವಳಿದಾರರು ಮತ್ತು ಬಡರೈತರುಗಳ ರಾಷ್ಟ್ರೀಕೃತ ಬ್ಯಾಂಕ್ ಸಾಲವೂ ಮನ್ನಾ. ರಾಜಸ್ವಕ್ಕೆ ಒಟ್ಟು ರೂ.೪೩೦೦೦ ಕೋಟಿಗಳ ಹೊರೆ. ಜೊತೆಗೆ ಖಾಸಗಿ ಲೇವಾದೇವಿದಾರರುಗಳಿಂದ ಪಡೆದಿರಬಹುದಾದ ರೂ.೧.೨೫ ಲಕ್ಷವರೆಗಿನ ಸಾಲವೂ ಮನ್ನಾ. ಹಿಂದೆ ತುರ್ತು ಪರಿಸ್ಥಿತಿಯಲ್ಲಿ ಆಗಿನ ಸಿಎಂ ದೇವರಾಜ ಅರಸು ಜಾರಿಗೊಳಿಸಿದ್ದ ಋಣಮುಕ್ತಿ ಕಾನೂನಿಗೆ ಮರುಜೀವ ನೀಡಿ ಸುಗ್ರೀವಾಜ್ಞೆ ಹೊರಡಿಸಲು ಸಂಪುಟ ಸಭೆಯ ತೀರ್ಮಾನ".

ಆಪದ್ಬಾಂದವರಂತಿದ್ದ ಲೈಸೆನ್ಸ್‌ಧಾರಿ ಖಾಸಗಿ ಲೇವಾದೇವಿದಾರರ ಬದುಕನ್ನೇ ಬೀದಿಪಾಲು ಮಾಡುವ "ಋಣಮುಕ್ತ" ಕಾನೂನಿನ ಸುಗ್ರೀವಾಜ್ಞೆಯ ಬದಲು ನಗರಪ್ರದೇಶಗಳಲ್ಲಿನ ಬಡವರ ಗೋಳು ಹೊಯ್ದುಕೊಳ್ಳುತ್ತಿರುವ ಮೀಟರ್ ಬಡ್ಡಿ ಸಾಲದ ಮಾಫಿಯಾಗಳನ್ನು ಮಟ್ಟ ಹಾಕುವ ಧೈರ್ಯ ತೋರುತ್ತಾರೆಯೇ ಕುಮಾರಸ್ವಾಮಿ?

ಇದೇ ಸಮಯಕ್ಕೆ ಸರಿಯಾಗಿ ಅತ್ತ ಮಡಿಕೇರಿ ಪ್ರವಾಸದಲ್ಲಿದ್ದ ಮಾಜಿ ಸಿಎಂ ಸಿದ್ರಾಮಯ್ಯನವರಿಂದ ಮತ್ತೆ ಮುಖ್ಯಮಂತ್ರಿಯಾಗುವ ಅಭಿಲಾಷೆ ಬಹಿರಂಗ! ಜೊತೆಗೆ ಕಂಟ್ರಾಕ್ಟರ್‌ಗಳಿಗೂ ಜಾತಿ ಮೀಸಲಾತಿ ನೀಡುವ ಆಶ್ವಾಸನೆ !! ಅಲ್ಲಿಗೆ ಕುಮಾರಣ್ಣನದ್ದು ಮನ್ನಾ ರಾಜಕೀಯ, ಸಿದ್ರಾಮಣ್ಣನದ್ದು ಮೀಸಲಾತಿ ರಾಜಕೀಯ ... ಮತ್ತೆ ಸ್ಪರ್ಧಾತ್ಮಕ ಓಲೈಕೆ ರಾಜಕಾರಣದ ಮುಂದುವರಿಕೆ.

ಬಡರೈತರು ಮತ್ತು ಕೂಲಿಕಾರ್ಮಿಕರಿಗೆ ಆರ್ಥಿಕ ಸ್ವಾತಂತ್ರ್ಯ ಮತ್ತು ಹಣಕಾಸಿನ ಸ್ವಾವಲಂಬನೆಯ ದಾರಿ ತೋರುವ ಬದಲು ಅವರನ್ನು ಶಾಶ್ವತವಾಗಿ ಸರ್ಕಾರದ ಮರ್ಜಿ ಕಾಯಬೇಕಾದ ಹಾಗೂ ರಾಜಕಾರಣಿಗಳ ಋಣದಲ್ಲಿಯೇ ಇರಬೇಕಾದ ಸ್ಥಿತಿಯಲ್ಲಿ ಮುಂದುವರೆಸಬೇಕೆನ್ನುವ ತಂತ್ರವೇ ಈ ಭಾಗ್ಯವಿಧಾತರದ್ದು! ಮನ್ನಾ ಭಾಗ್ಯ, ಅನ್ನಭಾಗ್ಯ ಮತ್ತು ಮೀಸಲಾತಿ ಭಾಗ್ಯಗಳ ಮೂಲಕವೇ ಬಡವರನ್ನು ಭಿಕ್ಷುಕರನ್ನಾಗಿ ನೋಡುವ ದೃಷ್ಟಿಕೋನ ನಮ್ಮ ಇವತ್ತಿನ ಆಳರಸರದ್ದು.



(ನಿವೃತ್ತ ಸಸ್ಯಶಾಸ್ತ್ರ ಪ್ರಾಧ್ಯಾಪಕರಾದ ಲೇಖಕ ರವೀಂದ್ರ ರೇಷ್ಮೆಯವರು ಹಿರಿಯ ರಾಜಕೀಯ ವಿಶ್ಲೇಷಕ ಹಾಗೂ ಶಿಕ್ಷಣ ಚಿಂತಕರೂ ಹೌದು)

ಪರಿಸರ ಪಾಠ

ಕೊಡಗಿನಲ್ಲಿ ಏನಾಯಿತು? ಏನಾಗಬೇಕು?

-ಡಾ. ಟಿ.ವಿ. ರಾಮಚಂದ್ರ




ಕೊಡಗಿನಲ್ಲಿ ಪ್ರವಾಹಕ್ಕೆ ಸಿಕ್ಕಿ ಬೆಟ್ಟ ಗುಡ್ಡ ತೋಟಗಳಿರಲಿ, ಗ್ರಾಮಕ್ಕೆ ಗ್ರಾಮಗಳೇ ಕೊಚ್ಚಿಕೊಂಡು ಹೋಗಿವೆ. ಸಾವಿರಾರು ಜನ ಮನೆ ಮಠ-ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಸಂತ್ರಸ್ತರಾಗಿದ್ದಾರೆ. ಕೊಡಗು ಮತ್ತೆ ತನ್ನ ಸೊಬಗಿಗೆ, ನೆಮ್ಮದಿಗೆ ಮರಳಲು ವರ್ಷಗಳೇ ಬೇಕಾದಾವು ಎನ್ನಲಾಗುತ್ತಿದೆ. ಇದು ಅನಪೇಕ್ಷಿತವಾದರೂ ಅನಿರೀಕ್ಷಿತವೇ? ಅಲ್ಲಿ ಏನಾಯಿತು, ಅದಕ್ಕೇನು ಕಾರಣ? ಈಗ ಎಲ್ಲಿ ಏನು ಆಗಬೇಕಿದೆ? ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಿದೆ? ಎಂದು ವೈಜ್ಞಾನಿಕವಾಗಿ ವಿವರಿಸುವ ಪುಟ್ಟ ಪ್ರಯತ್ನ ಈ ಲೇಖನ-ಸಂ.

ಎಲ್ಲ ನೈಸರ್ಗಿಕ ಜಲಮೂಲಗಳ ಜಲಾನಯನ ಪ್ರದೇಶಗಳಿಗೆ ತಮ್ಮದೇ ಆದ ಸಂಗ್ರಹಣಾ ಸಾಮರ್ಥ್ಯವಿದ್ದು, ಸಾಮಾನ್ಯವಾಗಿ ಅವು ಪ್ರವಾಹಗಳನ್ನಾಗಲೀ, ಬರವನ್ನಾಗಲೀ ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ (ನಾವು ಭೂಮಿಯ ಸಮಗ್ರ ಭೌತಿಕ ಪರಿಸರವನ್ನು ಕಾಪಾಡಿಕೊಂಡಿದ್ದೇ ಅದರೆ....). ಪಶ್ಚಿಮಘಟ್ಟ ಕುರಿತ ನಮ್ಮ ಅಧ್ಯಯನಗಳು, ಸ್ಥಳೀಯ ನೈಸರ್ಗಿಕ ಸಸ್ಯಸಂಪತ್ತಿನಿಂದ ಕೂಡಿದ ಜಲಾನಯನ ಪ್ರದೇಶಗಳಲ್ಲಿ ನೀರಿನ ಇಂಗುವಿಕೆ ಹೆಚ್ಚು (ಸುಮಾರು ೪೦ ರಿಂದ ೫೦% ನಷ್ಟು), ಆದರೆ ಒಂದೇ ಜಾತಿಯ ಮರಗಳ ನೆಡುತೋಪುಗಳಿಂದ ಕೂಡಿದ ಜಲಾನಯನ ಪ್ರದೇಶಗಳಲ್ಲಿ ಇಂಗುವಿಕೆಯ ಪ್ರಮಾಣ ಕೇವಲ ೧೫ ರಿಂದ ೨೦% ಎಂದು ಹೇಳುತ್ತವೆ. ನೈಸರ್ಗಿಕ ಕಾಡು ಅಥವಾ ನೆಡುತೋಪುಗಳನ್ನು ಕಳೆದುಕೊಂಡ ಅಥವಾ ನೆಲಸಮಗೊಂಡ ಜಲಾನಯನ ಪ್ರದೇಶಗಳಲ್ಲಂತೂ ಇಂಗುವಿಕೆಯ ಸಾಮರ್ಥ್ಯ ಸ್ವಲ್ಪವೂ ಇಲ್ಲದಂತಾಗಿದೆ. ಸ್ಥಳೀಯ ಸಹಜ ಸಸ್ಯಸಂಪತ್ತು ಹೆಚ್ಚಿರುವ ಜಲಾನಯನ ಪ್ರದೇಶಗಳಲ್ಲಿ ಸರ್ವಋತು ತೊರೆಗಳೂ, ಕೃತಕ ನೆಡುತೋಪುಗಳಿರುವ ಜಲಾನಯನ ಪ್ರದೇಶಗಳಲ್ಲಿ ಸುಮಾರು ೬-೮ ತಿಂಗಳು ಹರಿಯುವ ತೊರೆಗಳೂ, ಇನ್ನುಳಿದ ಅತಿಕ್ರಮಗಳಿಗೊಳಗಾದ ಜಲಾನಯನ ಪ್ರದೇಶಗಳಲ್ಲಿ ಕೆಲಕಾಲ(ಸುಮಾರು ೪ ತಿಂಗಳು) ಮಾತ್ರ ಹರಿಯುವ ತೊರೆಗಳಿರುವುದನ್ನು ನೋಡಿದಾಗ ಅದು ಇನ್ನೂ ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬೃಹತ್ ಪ್ರಮಾಣದ, ವಿವೇಚನಾರಹಿತ ಭೂ ದುರ್ಬಳಕೆ ಮತ್ತು ಸ್ಥಳೀಯವಲ್ಲದ ಏಕಜಾತಿ ಮರಗಳ ನೆಡುತೋಪುಗಳಿಂದ ಸುಮಾರು ೨೪ ರಿಂದ ೩೦% ನೈಸರ್ಗಿಕ ಕಾಡು ಕಡಿಮೆಯಾಗಿ, ಜಲಾನಯನ ಪ್ರದೇಶಗಳ ಇಂಗುವಿಕೆಯ ಸಾಮರ್ಥ್ಯ ಕುಂಠಿತಗೊಂಡದ್ದೇ ಈ ಮಹಾಪ್ರವಾಹಕ್ಕೆ ಪ್ರಮುಖ ಕಾರಣವಾಗಿದೆ. ಈ ಭಾಗವು ಅಭಿವೃದ್ಧಿ ಹೊಂದಬೇಕಾಗಿದೆ ನಿಜ. ಆದರೆ ಪರ್ಯಾಯದ್ವೀಪವಾಗಿರುವ ಭಾರತಕ್ಕೆ ಆಹಾರ ಮತ್ತು ನೀರಿನ ಭದ್ರತೆಯನ್ನು ಒದಗಿಸುತ್ತಿರುವ ಬಹಳ ಸೂಕ್ಷ್ಮವಾಗಿರುವ ಜೈವಿಕ ಪರಿಸರ ವ್ಯವಸ್ಥೆಯನ್ನು ಛಿದ್ರಗೊಳಿಸುವ ಮೂಲಕವಲ್ಲ. ಕುರುಡಾಗಿ ಅಭಿವೃದ್ಧಿಯ ಬೆನ್ನಟ್ಟುವುದರಿಂದ ಮತ್ತು ಅರಣ್ಯಪ್ರದೇಶದ ಅತಿಕ್ರಮಣಗಳಿಗೆ ಅವಕಾಶ ಕೊಡುವುದರಿಂದ ಪ್ರವಾಹ ಇಲ್ಲವೇ ನೀರಿನ ಕೊರತೆ ಉಂಟಾಗುತ್ತದಷ್ಟೇ. ಆಯಾ ರಾಜ್ಯಗಳ ಅರಣ್ಯ ಇಲಾಖೆಯ ಅಧಿಕಾರಿಗಳನ್ನೇ ಈ ಅರಣ್ಯ ಅತಿಕ್ರಮಣಗಳಿಗೆ ಹೊಣೆಗಾರರನ್ನಾಗಿ ಮಾಡಬೇಕು.

ಈ ಭೂ ಭಾಗದ ಪ್ರವಾಹಗಳಿಗೆ ಪ್ರಮುಖ ಕಾರಣಗಳೆಂದರೆ: ೧) ಜಲಾನಯನ ಪ್ರದೇಶಗಳ ದುರ್ಬಳಕೆ, ೨) ನಿರ್ಣಾಯಕ ಸ್ಥಾನಗಳಲ್ಲಿರುವ ಅಧಿಕಾರಿಗಳಲ್ಲಿ ಹೊಣೆಗಾರಿಕೆಯ ಕೊರತೆ, ೩) ಪಾರಿಸರಿಕವಾಗಿ ಬಹಳ ಸೂಕ್ಷ್ಮವಾಗಿರುವ ನದೀ ಪಾತ್ರಗಳಲ್ಲಿ ಬೃಹತ್ ಪ್ರಮಾಣದ ಬೇಜವಾಬ್ದಾರಿಯ ಭೂ ಪರಿವರ್ತನೆ, ೪) ವ್ಯವಸ್ಥಿತವಲ್ಲದ ರಸ್ತೆ ಅಗಲೀಕರಣ, ರೈಲ್ವೇ ಯೋಜನೆಗಳಂತಹ ಅತಿಯಾದ ಅಭಿವೃದ್ಧಿ ಚಟುವಟಿಕೆಗಳು, ೫) ನದೀ ತಿರುವು ಯೋಜನೆಗಳನ್ನು ಕುಡಿಯುವ ನೀರಿನ ಯೋಜನೆಗಳೆಂದು ಬಿಂಬಿಸಿ ನ್ಯಾಯವ್ಯವಸ್ಥೆಯನ್ನೇ ಬೇಸ್ತುಬೀಳಿಸುವುದು ಮತ್ತು ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಮತ್ತು ಸಾಮಾಜಿಕ ಪರಿಣಾಮಗಳ ಮೌಲ್ಯಮಾಪನ ಮಾಡುವ ನಿಯಮಾವಳಿಗಳನ್ನು ಕಡೆಗಣಿಸುವುದು, ೬) ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡುವ ಏಕೈಕ ಉದ್ದೇಶದೊಂದಿಗೆ ಶಾಮೀಲಾಗಿರುವ ಇಂಜಿನಿಯರುಗಳು, ಗುತ್ತಿಗೆದಾರರು ಮತ್ತು ಭ್ರಷ್ಟ ಅಧಿಕಾರಿಗಳ ಹಿತಾಸಕ್ತಿಗಾಗಿ ಜಾರಿಯಾಗುವ ಅವೈಜ್ಞಾನಿಕವಾದ ಯೋಜನೆಗಳು.

ಕಾಲಕಾಲಕ್ಕೆ ಬೀಳುವ ಮಳೆಯ ಪ್ರಮಾಣಗಳ ದತ್ತಾಂಶವನ್ನು ನೋಡಿದರೆ, ೭-೮ ವರ್ಷಗಳ ಮಳೆಚಕ್ರವನ್ನು ಗುರುತಿಸಬಹುದು (ಸುಮಾರು ಏಳು ವರ್ಷ ವಾಡಿಕೆಗಿಂತ ಕಡಿಮೆ ಮತ್ತು ಏಳು ವರ್ಷ ವಾಡಿಕೆಗಿಂತ ಹೆಚ್ಚು ಮಳೆ). ಜಲಾನಯನ ಪ್ರದೇಶಗಳ ಜೈವಿಕ ಪರಿಸರವನ್ನು ಸಮಗ್ರವಾಗಿ ನಿರ್ವಹಣೆ ಮಾಡುವ ಮೂಲಕ ಅತಿವೃಷ್ಟಿ ಮತ್ತು ಪ್ರವಾಹಗಳನ್ನು ತಗ್ಗಿಸಬಹುದು. ಹರಿವಿನ ನೈಸರ್ಗಿಕ ಪಾತ್ರಗಳನ್ನು ಕಾಂಕ್ರೀಟೀಕರಣ ಮಾಡುವುದರಿಂದ ಮತ್ತು ಕಿರಿದುಗೊಳಿಸುವುದರಿಂದ ಪಾತ್ರಗಳು ತಮ್ಮ ನೈಸರ್ಗಿಕ ಜಲವೈಜ್ಞಾನಿಕ ಕಾರ್ಯಗಳನ್ನು (ಇಂಗುವಿಕೆ, ಅಂತರ್ಜಲ ಮರುಪೂರಣ, ಪುನಶ್ಚೇತನಗೊಳ್ಳುವಿಕೆ) ನಿರ್ವಹಿಸಲಾಗದೇ ಹೆಚ್ಚೆಚ್ಚು ಪ್ರವಾಹಗಳುಂಟಾಗುತ್ತವೆ. ಸಂಯುಕ್ತ ಸರ್ಕಾರವು ಮಧ್ಯಸ್ತಿಕೆ ವಹಿಸಿ, ದೇಶದಲ್ಲಿನ ಪಾರಿಸರಿಕವಾಗಿ ಸೂಕ್ಷ್ಮವಾಗಿರುವ ಪ್ರದೇಶಗಳನ್ನು ಗುರುತಿಸಿ, ನೀರು ಮತ್ತು ಆಹಾರ ಭದ್ರತೆಗಾಗಿ ಈ ಪ್ರದೇಶಗಳನ್ನು ಅರಣ್ಯ ಅತಿಕ್ರಮಣದಿಂದ, ಮಾಫಿಯಾ ಮತ್ತು ಲೂಟಿಕೋರರ ಹಿಡಿತದಿಂದ ಕಾಪಿಟ್ಟು ಸಂರಕ್ಷಿಸಬೇಕು. ಪರಿಸರ ಪ್ರಜ್ಞೆಯುಳ್ಳ ಸದೃಢ ಯುವಜನತೆ ಮತ್ತು ಆರೋಗ್ಯವಂತ ಜೈವಿಕ ಪರಿಸರ ವ್ಯವಸ್ಥೆ-ನೈಸರ್ಗಿಕ ಸಂಪನ್ಮೂಲಗಳೊಂದಿಗೆ ದೇಶವು ಸಹಜವಾಗಿ ಅಭಿವೃದ್ಧಿ ಹೊಂದುತ್ತದೆ.



(ಡಾ. ಟಿವಿ., ರಾಮಚಂದ್ರ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕ-ಸಂಶೋಧಕರಾಗಿದ್ದಾರೆ)

(ಕನ್ನಡಕ್ಕೆ : ಟಿ.ಎಲ್. ರೇಖಾಂಬ)

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ (ರಿ), ಶಿವಮೊಗ್ಗ

ಸಮಾಜವಾದಿ ಅಧ್ಯಯನ ಶಿಬಿರ-೨೦೧೮

ನಮ್ಮ ಪ್ರತಿಷ್ಠಾನವು ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರತಿ ವರ್ಷದಂತೆ ಈ ವರ್ಷವೂ ಬರುವ ಅಕ್ಟೋಬರ್ ೨೭ ಹಾಗೂ ೨೮ರಂದು (ಶನಿವಾರ ಮತ್ತು ಭಾನುವಾರ) ತನ್ನ ವಾರ್ಷಿಕ ಸಮಾಜವಾದಿ ಅಧ್ಯಯನ ಶಿಬಿರವನ್ನು ಏರ್ಪಡಿಸುತ್ತಿದೆ.

ಈ ಬಾರಿಯ ಶಿಬಿರದ ವಿಷಯ, 'ರಾಷ್ಟ್ರೀಯತೆಯ ಅರ್ಥ-ಅಪಾರ್ಥಗಳು' ಎಂಬುದಾಗಿರುತ್ತದೆ. ಈ ಶಿಬಿರದಲ್ಲಿ ನಾಡಿನ ಹಿರಿಯ ಚಿಂತಕರು ಉಪನ್ಯಾಸಗಳನ್ನು ನೀಡಿ ಚರ್ಚೆಗಳನ್ನು ನಡೆಸಿಕೊಡಲಿದ್ದಾರೆ. ಶಿಬಿರ ಪ್ರತಿ ದಿನ ಬೆಳಿಗ್ಗೆ ೯ರಿಂದ ಸಂಜೆ ೫ರವರೆಗೆ ಇದ್ದು, ಎರಡೂ ದಿನಗಳಂದು ಈ ಅವಧಿಯಲ್ಲಿ ಶಿಬಿರದಲ್ಲಿ ಭಾಗವಹಿಸುವಷ್ಟು ಸಮಯಾವಕಾಶವಿರುವವರು ಮಾತ್ರ ಶಿಬಿರಾರ್ಥಿಗಳಾಗಿ ಬರಬಹುದು.

ಶಿಬಿರಾರ್ಥಿಗಳಾಗಿ ಬರಲು ಆಸಕ್ತರಾದವರು ಈ ಮುಂದೆ ತಿಳಿಸಿರುವ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಶಿಬಿರಾರ್ಥಿಗಳಿಗೆ ೨೬ರ ರಾತ್ರಿಯ ಊಟದಿಂದ ಹಿಡಿದು ೨೮ರ ಸಂಜೆಯ ಚಹಾದವರೆಗೆ ಸಾಮೂಹಿಕ ವಸತಿ ಮತ್ತು ಊಟೋಪಹಾರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರ ಶುಲ್ಕ ಒಬ್ಬರಿಗೆ : ರೂ. ೩೦೦/- ವಿದ್ಯಾರ್ಥಿಗಳಿಗೆ: ರೂ ೨೦೦/-

ಅಧ್ಯಾಪಕರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಆದ್ಯತೆಯುಂಟು. ಸಂಪರ್ಕ ದೂರವಾಣಿ ಸಂಖ್ಯೆಗಳು: ೯೭೩೧೯೨೯೭೩೧ / ೯೪೮೦೧೪೧೯೮೪ / ೯೪೮೧೩೫೧೦೭೯

-ಡಿ.ಎಸ್. ನಾಗಭೂಷಣ

ಅಧ್ಯಕ್ಷರು : ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ

ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವ ವರ್ಷ

ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಅಹಿಂಸೆ ಸೇರ್ಪಡೆಯ ಪ್ರಸ್ತಾಪ: ಒಂದು ವಿವೇಚನೆ

–ರಾಜೀವಲೋಚನ್



ರಾಷ್ಟ್ರ ಬರುವ ಅಕ್ಟೋಬರ್ ಎರಡರಿಂದ ಒಂದು ವರ್ಷದ ಕಾಲ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವವನ್ನು ಆಚರಿಸಲು ಸಜ್ಜಾಗುತ್ತಿದೆ. ರಾಷ್ಟ್ರಾದ್ಯಂತ ಪ್ರಜೆಗಳಲ್ಲಿ ಪರರನ್ನು ಸಹಿಸುವ ಶಕ್ತಿ ಕುಂದುತ್ತಾ ರಾಷ್ಟ್ರೀಯತೆಯ ಹೆಸರಿನಲ್ಲೇ ವಿವಿಧ ನೆಪಗಳೊಂದಿಗೆ ಹಿಂಸಾಚಾರ ವೈವಿಧ್ಯಮಯ ರೂಪಗಳನ್ನು ತಳೆದು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಗಾಂಧಿಯನ್ನು ನೆನೆಯುವುದು, ಅವರ ಚಿಂತನೆಯನ್ನು ನಮ್ಮ ಕಾಲದ ಈ ಸವಾಲುಗಳೊಂದಿಗೆ ಪುನರನ್ವೇಷಿಸಿಕೊಳ್ಳುವುದು ಉಚಿತವೂ ಅಗತ್ಯವೂ ಆಗಿದೆ. ಏಕೆಂದರೆ, ಆಧುನಿಕತೆಯ ಹುದಲಲ್ಲಿ ಸಿಕ್ಕಿಕೊಂಡು ಹೊಸ ತೆರನ ಸವಾಲು–ಸಂಕಷ್ಟಗಳಿಗೆ ಸಿಲುಕಿಕೊಳ್ಳತೊಡಗಿದ್ದ ಜಗತ್ತಿಗೆ ಹೊಸ ಬೆಳಕಿನ ದಾರಿ ತೋರಿದ ಈ ಮಹಾತ್ಮನ ಚಿಂತನೆಯ ಆಧಾರ ತತ್ವವೇ ಅಹಿಂಸೆ ಆಗಿತ್ತು. ಅಹಿಂಸೆ ಎಂದರೆ ಹಿಂಸೆ ಮಾಡದಿರುವುದು ಎಂಬ ಸರಳಾರ್ಥದ ಆಚೆಗೆ ಅದರ ಅರ್ಥ ಮತ್ತು ಮಹತ್ವವನ್ನು ಕೊಂಡೊಯ್ದ ಅವರು ಬಡತನ, ಮತ, ಜಾತಿ, ಅಭಿವೃದ್ಧಿ ಬಳಕೆದಾರಿಕೆ ಇತ್ಯಾದಿಗಳಿಗೆ ಸಂಬಂಧಿಸಿದ ನಮ್ಮ ಇಂದಿನ ಎಲ್ಲ ಸಂಕಷ್ಟ–ಸವಾಲುಗಳ ಹಿಂದೆ ಹಿಂಸೆ ಇದೆ ಎಂದು ಗುರುತಿಸುತ್ತಾರೆ.

ಇದನ್ನರಿತೇ ಒರಿಸ್ಸಾದ ಮುಖ್ಯ ಮಂತ್ರಿ ನವೀನ್ ಪಟ್ನಾಯಕ್ ಅವರು ಮಹಾತ್ಮನ ೧೫೦ನೇ ಜನ್ಮತೋತ್ಸವ ಆಚರಣೆಗಾಗಿ ರಾಷ್ಟ್ರಪತಿ ಭವನದಲ್ಲಿ ಕರೆಯಲಾಗಿದ್ದ ಮುಖ್ಯಮಂತ್ರಿಗಳ ಪೂರ್ವ ಸಿದ್ಧತಾ ಸಭೆಯಲ್ಲಿ, ಸಂವಿಧಾನದ ಪ್ರಸ್ತಾವನೆಯಲ್ಲಿ ಹೆಸರಿಸಲಾಗಿರುವ ರಾಷ್ಟ್ರ ನಿರ್ಮಾಣಕ್ಕೆ ಆಧಾರವಾದ ಮೂಲತತ್ವಗಳ ಜೊತೆಗೆ ಅಹಿಂಸೆಯನ್ನೂ ಸೇರಿಸಬೇಕೆಂಬ ಸಲಹೆ ನೀಡಿದರು. ಇದೇ ಈ ಸಂದರ್ಭದಲ್ಲಿ ರಾಷ್ಟ್ರಪಿತನಿಗೆ ನಾವು ಅರ್ಪಿಸಬಹುದಾದ ಶ್ರೇಷ್ಠ ತೆರನಾದ ಶ್ರದ್ಧಾಂಜಲಿ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗಾಂಧಿಯ ಕಾಲದಲ್ಲೇ ಅವರ ಈ ತತ್ವದ ಪ್ರತಿಪಾದನೆಯನ್ನು ವಿರೋಧಿಸಿದ 'ಗಂಡಸುತನ'ದ ಪ್ರತಿಪಾದಕರ ರಾಜ್ಯಭಾರ ಆರಂಭವಾಗಿರುವ ಈ ದಿನಗಳಲ್ಲಿ ಪಟ್ನಾಯಕ್ ಅವರ ಈ ಸಲಹೆಯನ್ನು ಪ್ರಭುತ್ವ ಎಷ್ಟು ಗಂಭೀರವಾಗಿ ಸ್ವೀಕರಿಸುವುದೋ ಕಾದು ನೋಡಬೇಕು. ಈ ಲೇಖನ ಈ ಸಂದಿಗ್ಧದ ಹಿನ್ನೆಲೆ–ಮುನ್ನೆಲೆಗಳನ್ನು ವಿವರಿಸುವ ಪ್ರಯತ್ನ ಮಾಡುತ್ತದೆ.–ಸಂ.

ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಈಗಿರುವ ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತೆಗಳೊಂದಿಗೆ 'ಅಹಿಂಸೆ'ಯನ್ನೂ ಒಂದು ಮೂಲತತ್ವವಾಗಿ ಸೇರಿಸಬೇಕೆನ್ನುವ, ಒರಿಸ್ಸಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್‌ರ ಅದ್ಭುತವಾದ ಸಲಹೆಯನ್ನು ಪರಿಗಣಿಸಿದರೆ ಭಾರತೀಯರಿಗೆ ಬಹಳಷ್ಟು ಒಳ್ಳೆಯದೇ ಆಗುತ್ತದೆ. ಅಹಿಂಸೆಯ ಮಾರ್ಗವನ್ನು ಅನುಸರಿಸಬೇಕಾದ ಅಗತ್ಯದ ಬಗೆಗೆ ನಿರಂತರವಾಗಿ ಎಚ್ಚರಿಸುವ ಯಾವ ಕೈಮರವೂ ಇಲ್ಲದ ಪರಿಸ್ಥಿತಿಯಲ್ಲಿ, ಭಾರತೀಯರು ಇತ್ತೀಚೆಗೆ ಬಹಳ ಹಿಂಸಾತ್ಮಕರಾಗಿದ್ದಾರೆ. ನಮ್ಮ ಸುತ್ತಲೂ ಕಾಣುತ್ತಿರುವ, ಬದುಕಿನ ಎಲ್ಲ ರಂಗಗಳಲ್ಲೂ ವ್ಯಾಪಕವಾಗಿ ಹಬ್ಬಿರುವ ಕ್ರಿಮಿನಲ್ ಸ್ವರೂಪದ ಅನ್ಯಾಕ್ರಮಣದ ಪ್ರವೃತ್ತಿಯನ್ನು ಎದುರಿಸಲು 'ಅಹಿಂಸೆ'ಯನ್ನು ಸಾರ್ವಜನಿಕ ಜೀವನದ ಕೇಂದ್ರಕ್ಕೆ ತರುವ ಅಗತ್ಯವಿದೆ. ಆ ಮೂಲಕ ಜನರನ್ನು ಇನ್ನೂ ಹೆಚ್ಚಿನ ಸಭ್ಯತೆಯ ಕಡೆಗೆ 'ಒಯ್ಯುವ ಮತ್ತು ಇತರರ ಬಗೆಗೆ ಚಿಂತಿಸುವಂತೆ ಮಾಡುವ ಅಗತ್ಯವಿದೆ.

ಪಟ್ನಾಯಕರ ಸಲಹೆಯು, ಸುಮಾರು ಒಂದು ಶತಮಾನದ ಹಿಂದೆಯೇ ಗಾಂಧಿ ಆರಂಭಿಸಿದ, ಅಹಿಂಸೆಯಲ್ಲಿ ನಂಬಿಕೆಯುಳ್ಳ, ಇತರರ ಬಗ್ಗೆ ಚಿಂತಿಸುವ, ಅಹಿಂಸಾಮೂರ್ತಿಯಾದ ಭಾರತೀಯನನ್ನು ನಿರ್ಮಿಸುವ ಯೋಜನೆಯನ್ನು ಬಹುಶಃ ಪೂರ್ಣಗೊಳಿಸಬಹುದು. ಗಾಂಧಿ, ಈ ಅಹಿಂಸಾಮೂರ್ತಿಯಾದ ಭಾರತೀಯನ ಬಗೆಗಿನ ಕಥನವನ್ನು ಸೃಷ್ಟಿಸಿದರು, ಅದನ್ನೊಂದು ವ್ರತದಂತೆ ಪಸರಿಸಿದರು ಮತ್ತು ಕಡು ಸಂಕಷ್ಟದ ಕಾಲದಲ್ಲಿಯೂ ಅದನ್ನು ಆಚರಿಸಬೇಕೆಂದು ಆಗ್ರಹಿಸಿದರು. ಅವರು ಹಿಂದೂ ಧರ್ಮದ ಸ್ವಭಾವದಲ್ಲೇ ಅಹಿಂಸೆಯ ಬೇರುಗಳಿವೆ ಎಂದು ಪ್ರತಿಪಾದಿಸಿದ್ದರು ಕೂಡಾ. ಶೇಕಡಾ ೮೦ರಷ್ಟು ಪ್ರಜೆಗಳು ಹಿಂದೂ ಎಂದು ಪಟ್ಟಿ ಮಾಡಲಾಗಿರುವ ಒಂದು ದೇಶದ ಜನರನ್ನು ಅವರು ತಲುಪುವ ರೀತಿ ಅದಾಗಿತ್ತು. ಭಾರತೀಯರು ಅವರ ಧರ್ಮವನ್ನು ಸರಿಯಾಗಿ ಅನುಸರಿಸಿದ್ದೇ ಆದಲ್ಲಿ, ಅವರು ಅಹಿಂಸೆಯನ್ನು ಅನುಸರಿಸಲೇಬೇಕು ಎಂಬುದು ಗಾಂಧಿಯ ಗ್ರಹಿಕೆಯಾಗಿತ್ತು.

೧೯೨೭ರಲ್ಲಿ ಬೃಹತ್ ಪ್ರಮಾಣದಲ್ಲಿ ಕೋಮು ಗಲಭೆಗಳಿಂದ ಭಾರತ ನಲುಗಿದ ಸಂದರ್ಭದಲ್ಲಿ ಗಾಂಧಿ ಈ ರೀತಿ ಬರೆದರು: "ಹಿಂದೂ ಧರ್ಮ ಧರ್ಮಗಳಲ್ಲೆಲ್ಲ ಅತ್ಯಂತ ಸಹಿಷ್ಣುವಾದ ಧರ್ಮ. ಅದೊಂದು ಕಟ್ಟಿ ಬಿಗಿದ ಧರ್ಮವಾಗಿಲ್ಲವಾದ್ದರಿಂದಲೇ ಅದರ ಅನುಯಾಯಿಗಳಿಗೆ ಅತ್ಯಂತ ಹೆಚ್ಚು ಸ್ವಾಭಿವ್ಯಕ್ತಿಯ ಸ್ವಾತಂತ್ರ್ಯ ಲಭ್ಯವಾಗಿದೆ. ಅದು ಯಾರನ್ನೂ ಹೊರಗಿನವನು ಎಂದು ಭಾವಿಸುವುದಿಲ್ಲವಾದ್ದರಿಂದ ತನ್ನ ಅನುಯಾಯಿಗಳಿಗೆ ಎಲ್ಲ ಧರ್ಮಗಳನ್ನು ಗೌರವಿಸುವುದಷ್ಟೇ ಅಲ್ಲದೇ ಇತರ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳನ್ನು ಮೆಚ್ಚಲು ಮತ್ತು ಅವುಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ". ಇದು ಗಾಂಧಿಯವರ ಒಂದು ಬಿಡಿ ಹೇಳಿಕೆಯಾಗಿರಲಿಲ್ಲ. ಇದನ್ನು ಈ ಹಿಂದೆಯೂ ಬಹಳ ಸಲ ಹೇಳಿದ್ದರು ಮತ್ತು ಮುಂದೆಯೂ ಇದನ್ನು ಪುನರುಚ್ಚರಿಸಿದರು. ಅವರು ಸಂಪೂರ್ಣ ಖಚಿತತೆಯೊಂದಿಗೆ "ಅಹಿಂಸೆಯು ಎಲ್ಲ ಧರ್ಮಗಳಿಗೂ ಸಾಮಾನ್ಯವಾದುದು, ಆದರೆ ಹಿಂದೂತ್ವದಲ್ಲಿ ಅದು ಅತ್ಯುತ್ಕೃಷ್ಟವಾದ ಅಭಿವ್ಯಕ್ತಿ ಮತ್ತು ಅನ್ವಯವನ್ನು ಕಂಡುಕೊಂಡಿದೆ" ಎಂದು ಹೇಳುತ್ತಾರೆ.

ಅಹಿಂಸೆಯು ಎಲ್ಲ ಧರ್ಮಗಳ ಮೂಲ ಬೋಧನೆ ಎಂದು ಹೇಳುವ ಗಾಂಧಿ, ಗೀತೆಯು ಅಹಿಂಸೆಯನ್ನು ಬೋಧಿಸುತ್ತದೆ ಎಂದು ನಿರೂಪಿಸಿದರು. ಹಾಗೆಯೇ ಬೈಬಲ್, ಖುರಾನುಗಳಿಂದಲೂ–ಅವು ದೇವರ ಕೊನೆಯ ಮತ್ತು ಏಕೈಕ ಸರಿಯಾದ ಮಾತು ಎಂಬ ನಂಬಿಕೆಯ ಹೊರತಾಗಿಯೂ–ಆ ಅರ್ಥದ ಭಾಗಗಳನ್ನು ಆಯ್ದು ತೋರಿಸಿದರು.

ಅಹಿಂಸೆಯ ಮೇಲಿನ ಗಾಂಧಿಯ ಆಗ್ರಹವು, ಸತ್ಯಾಗ್ರಹ–ಅಹಿಂಸಾತ್ಮಕ ಹೋರಾಟ–ಎಂಬ ರಾಜಕೀಯ ಅಸ್ತ್ರದ ರೂಪವನ್ನು ಪಡೆಯಿತು. ಆದರೆ ಅವರು ಅಹಿಂಸಾತ್ಮಕ ಹೋರಾಟದ ಪ್ರವರ್ತಕರೇನೂ ಆಗಿರಲಿಲ್ಲ. ಗಾಂಧಿಯವರು ಇಂಗ್ಲೆಂಡ್ ಮತ್ತು ದ. ಆಫ್ರಿಕಾಗಳಲ್ಲಿ ನಿಕಟವಾಗಿ ಒಡನಾಡಿದ್ದ ಕ್ವೇಕರ್ಸ್ ಎನ್ನುವ ಕ್ರಿಶ್ಚಿಯನ್ ಪಂಗಡವು ೧೭ ನೇ ಶತಮಾನದ ಮಧ್ಯಕಾಲದಿಂದಲೂ ಅಹಿಂಸೆಯ ತತ್ವಗಳನ್ನು ಅನುಸರಿಸಿಕೊಂಡು ಬಂದಿತ್ತು. ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಜೈನರೂ ಕೂಡ ಅಹಿಂಸಾ ತತ್ವವನ್ನು ಪಾಲಿಸುತ್ತಿದ್ದರು. ಅಹಿಂಸೆಯೊಂದಿಗೆ ಆಳದ ನೈತಿಕತೆಯೊಂದನ್ನು ಹೆಣೆದು, ಅಹಿಂಸಾತ್ಮಕ ಹೋರಾಟಗಳಿಗೆ ದೊಡ್ಡ ಹೆಸರನ್ನು ತಂದಿತ್ತವರು ಗಾಂಧಿ. ಅದು ಅವರನ್ನು ಆಧುನಿಕ ಜಗತ್ತಿನ ಶಾಂತಿದೂತನನ್ನಾಗಿಸಿತು ಮತ್ತು ಅಹಿಂಸಾತ್ಮಕ ಹೋರಾಟಗಳ ಬೆಂಬಲಿಗರಾದ ಅಮೆರಿಕಾದ ಮಾರ್ಟಿನ್ ಲೂಥರ್ ಕಿಂಗ್, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾರಂತಹವರಿಗೆ ದಾರಿದೀಪವಾದರು. ವಿಭಜನಾಪೂರ್ವ ಭಾರತದ ವಾಯವ್ಯ ಗಡಿಯ ಪಾಶ್ತೂನರ ನಾಯಕರಾದ ಬಾಚಾ ಖಾನ್ (ಖಾನ್ ಅಬ್ದುಲ್ ಗಫಾರ್ ಖಾನ್) ತಮ್ಮ ಅಹಿಂಸೆಯ ಪ್ರತಿಪಾದನೆಯಿಂದಾಗಿ ಗಡಿನಾಡ ಗಾಂಧಿ ಎಂದೇ ಹೆಸರಾದರು.

'ಅಹಿಂಸೆ', ರಾಜಕೀಯ ಹೋರಾಟದ ಮಾರ್ಗವಾಗಿ ವಿವೇಚನಾಶೀಲವಾದದ್ದು.. ೨೦ನೇ ಶತಮಾನದ ನೂರಾರು ಹೋರಾಟಗಳನ್ನು ತುಲನೆ ಮಾಡುತ್ತಾ, ಅಹಿಂಸಾತ್ಮಕ ಹೋರಾಟಗಳ ಯಶಸ್ಸಿನ ಸಾಧ್ಯತೆ ಶೇಕಡಾ ೭೦ಕ್ಕೂ ಹೆಚ್ಚು ಎಂದು ಎರಿಕಾ ಶೆನೊವೆತ್ ಅವರು ತೋರಿಸಿದ್ದಾರೆ. ಹಿಂಸಾತ್ಮಕ ಹೋರಾಟಗಳ ಯಶಸ್ಸಿನ

ಪ್ರಮಾಣ ಕಾಲು ಭಾಗ ಮಾತ್ರ. ಭಯೋತ್ಪಾದನೆಯ ಆಧಾರದ ಮೇಲೆ ನಡೆಯುವ ಹೋರಾಟಗಳ ಯಶಸ್ಸಿನ ಪ್ರಮಾಣ ಕೇವಲ ಶೇಕಡಾ ೫ ರಷ್ಟು.

ಆದರೆ 'ಅಹಿಂಸೆ'ಯನ್ನು ಸಂವಿಧಾನದಲ್ಲಿ ಏಕೆ ಸೇರಿಸಬೇಕು? ಏಕೆಂದರೆ, ರಾಷ್ಟ್ರ ವಿಭಜನೆಯ ಕಾಲದಿಂದಲೂ ಭಾರತದ ಸಂವಿಧಾನವು ಭಾರತೀಯರಿಗೆ ಅತ್ಯಂತ ಶಕ್ತಿಯುತವಾದ ಮಾರ್ಗದರ್ಶಕ ಧರ್ಮವಾಗಿ ಹೊರಹೊಮ್ಮಿದೆ. ಸಂವಿಧಾನದಲ್ಲಿ ಅಳವಡಿಕೆಯಾಗಿರುವ ತತ್ವಗಳ ಮೂಲಕವೇ ಭಾರತೀಯರ ಭಾರತೀಯತೆಯನ್ನು ನಿರ್ಣಯಿಸುವುದು. ಅವರ ವಾದ-ವಿವಾದಗಳನ್ನು ಪರಿಹರಿಸುವುದು ಕೂಡಾ ಸಂವಿಧಾನದಲ್ಲಿ ಅಂತರ್ಗತವಾಗಿರುವ ತತ್ವಗಳ ಆಧಾರದ ಮೇಲೇ. ಸಂವಿಧಾನವೆಂಬುದು, ಎಲ್ಲರನ್ನೂ ಸಮಾನರೆಂದು ಕಾಣುವ ಮತ್ತು ದುರ್ಬಲರ ಬಗ್ಗೆ ಕಾಳಜಿ ವಹಿಸುವ ಆಧುನಿಕ ದೇಶವಾಗಿ ಭಾರತವನ್ನು ರೂಪಿಸಲು, ಆಧುನಿಕ ಕಾಲದ ಭಾರತೀಯರು ರಚಿಸಿಕೊಂಡಿರುವ ಒಂದು ವಿಶಿಷ್ಟ ಗ್ರಂಥ.

ಸುಮಾರು ಎರಡು ದಶಕಗಳಷ್ಟು ದೀರ್ಘಕಾಲ ಸಾರ್ವಜನಿಕರ ನಡುವೆ ನಡೆದ ಚರ್ಚೆಗಳ ಫಲವೇ ಈ 'ಸಂವಿಧಾನ'. ಅದರ ಕೊನೆ ಹಂತದ ಚರ್ಚೆಗಳು ನಡೆದದ್ದು ಸಂವಿಧಾನ ರಚನಾ ಸಭೆಯಲ್ಲಿ. ಇದರಲ್ಲಿ ಸಮಾಜದ ಎಲ್ಲ ವರ್ಗಗಳ ಪ್ರಾತಿನಿಧ್ಯ ಇರುವಂತೆ ತುಂಬಾ ಜಾಗ್ರತೆ ವಹಿಸಲಾಗಿತ್ತು. ಈ ಸಂವಿಧಾನ ರಚನಾ ಸಭೆಯಲ್ಲಿ ಇತರರ ಬಗೆಗೆ ಚಿಂತಿಸುವುದು ಬಹಳ ಮುಖ್ಯವಾದ ತತ್ವವಾಗಿತ್ತು. ಸಂವಿಧಾನದ ಪ್ರಸ್ತಾವನೆಯ ಚರ್ಚೆಯಾಗುವಾಗ, ಸಂವಿಧಾನ ರಚನಾ ಸಭೆಯ ಸಹಸದಸ್ಯರಿಗೆ ಜವಾಹರಲಾಲ್ ನೆಹರೂ ಈ ಎಚ್ಚರಿಕೆಯನ್ನು ಕೊಟ್ಟಿದ್ದರು: "ಇತರರಿಗೆ ಅಸಮಾಧಾನವಾಗುವಂತಹ ಅಥವಾ ಯಾವುದೇ ತತ್ವಕ್ಕೆ ವಿರೋಧಿಯಾದ ಏನನ್ನೂ ನಾವು ಮಾಡದಂತೆ ಜಾಗರೂಕರಾಗಿರಬೇಕು". ಈ ಎಲ್ಲ ಗಹನವಾದ ಚರ್ಚೆಗಳು ಮುಗಿದ ಮೇಲೆ, ಭಾರತವನ್ನು ಸಾರ್ವಭೌಮ, ಪ್ರಜಾತಾಂತ್ರಿಕ ಗಣರಾಜ್ಯವನ್ನಾಗಿ ಸ್ಥಾಪಿಸುವ ಮತ್ತು ಅದರ ಎಲ್ಲ ಪ್ರಜೆಗಳಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯನ್ನು ಪಡೆಯುವ ಸಂಕಲ್ಪ ಮಾಡಿ, ಭಾರತೀಯರು ತಮಗೆ ತಾವೇ ಸಂವಿಧಾನವನ್ನು ಕೊಟ್ಟುಕೊಂಡರು.

ಸಂವಿಧಾನ ರಚನೆಯ ಚರ್ಚೆಗಳು ನಡೆಯುತ್ತಿದ್ದಾಗಲೇ ದೇಶವಿಭಜನೆಯಾದ ಅಂಶವನ್ನು ಕಡೆಗಣಿಸಿ ಸೋದರತೆಯ ತತ್ವವನ್ನು ಪ್ರಸ್ತಾವನೆಯಲ್ಲಿ ಒಳಗೊಳ್ಳಲಾಯಿತು. ಗಣನೀಯ ವಿರೋಧ ಮತ್ತು ರಕ್ತಪಾತದ ನಡುವೆಯೇ ಅನೇಕ ಭಾರತೀಯ ಮುಸಲ್ಮಾನರು ಪಾಕಿಸ್ತಾನವೆಂಬ ಮತಾಧಾರಿತ ದೇಶವನ್ನು ಕಟ್ಟಲು ಹೊರಟರು. ಮುಸಲ್ಮಾನರಿಗೆಂದೇ ರಚಿತವಾಗುವ ಪ್ರತ್ಯೇಕ ದೇಶದ ಕಲ್ಪನೆಗೆ ಮಾರುಹೋಗದ ಅನೇಕ ಭಾರತೀಯ ಮುಸಲ್ಮಾನರು ಬಹುಸಂಸ್ಕೃತಿಯ, ಬಹು ಪದರಗಳುಳ್ಳ ಬಹುನುಡಿಗಳ ಭಾರತದಲ್ಲೇ ಬದುಕು ಮುಂದುವರಿಸಲು ನಿರ್ಧರಿಸಿದರು.


ಹಲವು ಪದರಗಳ ಅಸ್ಮಿತೆಗಳೊಂದಿಗೆ ಎಲ್ಲರೂ ಒಂದು ಅನುಕೂಲ ಆವರಣದೊಳಗೆ ಬದುಕಿನ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾಗ ಪರಂಪರೆಯ ಮರುಶೋಧನೆಯ ಪ್ರಕ್ರಿಯೆಯೊಂದು ಆರಂಭವಾಗಿತ್ತು. ಗಾಂಧಿ ಏನು ಮಾಡಿದರೆಂದರೆ, ಈ ಪ್ರಕ್ರಿಯೆಯ ಮೂಲ ಕಲ್ಪನೆಗಳು ಪೂರ್ವಜರದ್ದೆಂದು ಒಪ್ಪಿಕೊಂಡರೂ ಹೆಚ್ಚು ಶಾಂತಿಯುತವಾದ ಒಂದು ಹೊಸ ವಾಸ್ತವದ ಜಗತ್ತನ್ನು ಕಟ್ಟುವ ಪ್ರಯತ್ನ ಮಾಡಿದರು. ಹೇಗಿದ್ದರೂ ಇತಿಹಾಸದಲ್ಲಿಯಾಗಲೀ ಅಥವಾ ನೆನಪುಗಳಲ್ಲಿಯಾಗಲೀ ಅಂಥಾ ಪವಿತ್ರವಾದದ್ದೇನೂ ಇಲ್ಲವಷ್ಟೇ. ಅವೆರಡೂ ಕಾಲ ಮತ್ತು ಕಾಲಧರ್ಮಗಳೊಂದಿಗೆ ಬದಲಾಗುತ್ತಲೇ ಇರುತ್ತವೆ.

ಇವುಗಳಲ್ಲಿ ಕೆಲವನ್ನು ನಾವು ಸಾಮ್ರಾಟ ಅಶೋಕನ ಕಾಲದ ಚರಿತ್ರೆಯ ಮರುಶೋಧನೆಯಲ್ಲಿ ಕಂಡುಕೊಂಡವುಗಳಾಗಿದ್ದವು. ಆ ದಿನಗಳಲ್ಲಿ ಯುವ ಭಾರತೀಯ ಇತಿಹಾಸಕಾರ್ತಿಯಾಗಿದ್ದ ರೋಮಿಲಾ ಥಾಪರ್, ಬ್ರಿಟಿಷ್ ಪತ್ರಿಕೆಯೊಂದರಲ್ಲಿ ಬರೆಯುವಾಗ, ೧೯೫೦ರ ದಶಕದಲ್ಲಿ ಅಶೋಕನ ಆರಾಧಕರು ಗಣನೀಯವಾಗಿ ಹೆಚ್ಚಾಗಿರುವುದನ್ನು ಗಮನಿಸುತ್ತಾರೆ. ಕೆಲ ದಶಕಗಳ ಹಿಂದಷ್ಟೇ ಸಾರ್ವಜನಿಕ ಗಮನಕ್ಕೆ ಬಂದಿದ್ದ ಸಾಮ್ರಾಟ ಅಶೋಕನ ಆರಾಧನೆಯು ಇಷ್ಟೊಂದು ವ್ಯಾಪಕವಾಗಿ ಹಬ್ಬಿರುವುದನ್ನು ಕಂಡು ಬೆರಗುಗೊಂಡಿದ್ದರು. "ಭಾರತ ಸರ್ಕಾರ ಅಶೋಕನ ಸಂಕೇತವನ್ನು ಅಳವಡಿಸಿಕೊಂಡಿದ್ದು ಮಾತ್ರವಲ್ಲದೇ, ಸಾಕಷ್ಟು ಆಧುನಿಕ ಭಾರತೀಯ ರಾಜಕೀಯ ಚಿಂತನೆಗಳು ಅಶೋಕನ ವಿಚಾರಗಳಿಂದ ಸ್ಫೂರ್ತಿ ಪಡೆದವು" ಎಂದು ರೋಮಿಲಾ ಥಾಪರ್ ಬರೆಯುತ್ತಾರೆ.

ಸಾಕಷ್ಟು ಪ್ರಭಾವ ಬೀರಿರುವ ಅಶೋಕನ ಎರಡು ವಿಚಾರಗಳೆಂದರೆ ಧರ್ಮ ಮತ್ತು ಅಹಿಂಸೆ. ಸಂವಿಧಾನವು ಆಧುನಿಕ ಭಾರತದ ಧರ್ಮವಾಗಿ ಪ್ರತಿಷ್ಠಾಪಿತವಾಯಿತು. ಅದರ ಸಾರಾಂಶವನ್ನು ಪೀಠಿಕೆಯಲ್ಲಿ ಬರೆಯಲಾಯಿತು. ಆದರೂ ಅಹಿಂಸೆಯ ಕಲ್ಪನೆಯು ಹಿಮ್ಮೆಟ್ಟಲು ಅನುವು ಮಾಡಿಕೊಡಲಾಗಿತ್ತು. ಗಾಂಧಿ ಅದನ್ನು ಅತಿಯಾಗಿ ಹಿಂದು ಧರ್ಮದೊಂದಿಗೆ ಸಮೀಕರಿಸಿದ್ದಕ್ಕೆ ಹೀಗಾಗಿರಬಹುದೇ?

ಹಲವು ವರ್ಷಗಳ ಅವಧಿಯಲ್ಲಿ, ಭಾರತದ ಸಂಘಷಾತ್ಮಕ ರಾಜಕೀಯ ಪ್ರಕ್ರಿಯೆಗಳು ಎಲ್ಲ ನಾಗರಿಕರಿಗೆ ಒಂದು ದೃಢವಾದ ಸಮಾನತೆಯನ್ನು ಕೊಡಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಆದರೂ ನ್ಯಾಯ ವಿತರಣಾ ವ್ಯವಸ್ಥೆ ಅನುಮಾನಾಸ್ಪದವಾಗಿ ಉಳಿದುಬಿಟ್ಟಿದೆ. ಸದೃಢವಾದ ನ್ಯಾಯ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ, ದೊಡ್ಡ ಮೀನು ಸಣ್ಣಮೀನನ್ನು ತಿನ್ನುವ ಮತ್ಸ್ಯನ್ಯಾಯದ ಹಿಡಿತಕ್ಕೆ ಭಾರತವು ಸಿಕ್ಕಿಹಾಕಿಕೊಂಡಿದೆಯೆನಿಸುತ್ತದೆ. ಸೋದರತೆಯ ಕಲ್ಪನೆಯನ್ನು ದುರ್ಬಲಗೊಳಿಸಲಾಯಿತು. ಕುಟುಂಬ, ಜಾತಿ ಮತ್ತು ಮತಗಳ ಬಗೆಗಿನ ಆದಿಮ ನಿಷ್ಠೆಗಳು ಭಾರತದ ಬಲಹೀನ, ವಿಷಚಕ್ರ ರೂಪದ ರಾಜ್ಯ ವ್ಯವಸ್ಥೆಯ ಅಧಿಕಾರವನ್ನು ಕುಗ್ಗಿಸಿತು. ಬಗೆಬಗೆಯ ಅನ್ಯಾಯಗಳು ನಿರಂತರವಾಗಿ ನಡೆಯುತ್ತ, ಹರಡುತ್ತಲೇ ಬಂದದ್ದು, ಅನೇಕರಿಗೆ ಕಾನೂನನ್ನು ಕೈಗೆತ್ತಿಕೊಳ್ಳಲು ಪ್ರೋತ್ಸಾಹವನ್ನಿತ್ತಿತು.

ಹಿಂಸೆಯನ್ನು ಕೊಂಡಾಡುವ ಕಾಲವೊಂದು ಬಂದೇ ಬಂತು. ಯಾವ ಮಟ್ಟಿಗೆಂದರೆ, ಅಹಿಂಸೆಯು ರಾಜಕೀಯ ಹೋರಾಟದ ಹತಾರವಾಗಿಯೂ ಲೆಕ್ಕಕ್ಕೂ ಇಲ್ಲದಂತಾಯಿತು. 'ಅಹಿಂಸೆ'ಯು ಹಿಂದೂಗಳು ಅಥವಾ ಹಿಂದೂ ಧರ್ಮಕ್ಕೆ ಸಂಬಂಧಿಸಿದ್ದಲ್ಲ ಎಂದು ಮನಗಾಣುವ ಕಾಲ ಬಹುಶಃ ಸನ್ನಿಹಿತವಾಗಿದೆ. ಹಿಂದೆಯೂ ಭಾರತೀಯರು ಇತರ ಮಾನವರಂತೆಯೇ ತಂತಮ್ಮ ಮತಗಳನ್ನು ಲೆಕ್ಕಿಸದೆ ಹಿಂಸಾತ್ಮಕರಾಗಿದ್ದರು. ಅದೇನೇ ಇರಲಿ, 'ಅಹಿಂಸೆ'ಯು ಇಂದಿನ ಭಾರತೀಯನಿಗೆ ನೈತಿಕ ಅಗತ್ಯವೇ ಆಗಿದೆ. ಭಾರತೀಯರಿಗೆ ಮತ್ತು ಭಾರತಕ್ಕೆ, ಮುಂದಿರುವುದು 'ಅಹಿಂಸೆ'ಯದ್ದೊಂದೇ ದಾರಿ. 'ಅಹಿಂಸೆ'ಯನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಬೇಕೆನ್ನುವ ಪಟ್ನಾಯಕ್‌ರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ.



(ಲೇಖಕ ರಾಜೀವಲೋಚನ್ ಪಂಜಾಬ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ)

(ಕೃಪೆ : **ಔಟ್‌ಲುಕ್** ಸಾಪ್ತಾಹಿಕ, ೨೧ ಮೇ, ೨೦೧೮, ಕನ್ನಡಾನುವಾದ : **ಟಿ.ಎಲ್. ರೇಖಾಂಬ/ಡಿಎಸ್ಸೆನ್**)

೧ನೇ ಪುಟದಿಂದ)

ತಮ್ಮ ಸುಲಭ ಜನಪ್ರಿಯ ರಾಜಕಾರಣದ ಸಾಮಾಜಿಕ ಪರಿಣಾಮಗಳು ಮತ್ತು ಹಣಕಾಸಿನ ಜವಾಬ್ದಾರಿಗಳನ್ನು ಮುಂದೆ ತಾವು ಹೊರಬೇಕಾಗಿಲ್ಲ ಎಂಬ ಖಚಿತ ಅರಿವು ಅವರಿಗಿದ್ದಂತಿದೆ. ಆದರೆ ರಾಜ್ಯದ ಜನರ ಗತಿ? ಇದು ಹೇಗೂ ಅಧಿಕಾರಕ್ಕೆ ಬರುವುದಿಲ್ಲ ಎಂಬ 'ಧೈರ್ಯ'ದ ಮೇಲೆ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ರೈತರ ಎಲ್ಲ ಸಂಪೂರ್ಣ ಸಾಲಮನ್ನಾ ಘೋಷಣೆ ಮಾಡಿದ ಉಡಾಳತನದ ರಾಜಕಾರಣದಂತೆಯೇ ಇದು ತೋರುತ್ತಿದೆ. ಇನ್ನು ಋಣಪರಿಹಾರ ಕಾಯಿದೆಯ ಗುರಿಯಾಗಿರುವ 'ಮೀಟರ್ ಬಡ್ಡಿ' ಜಾಲದ ಸೂತ್ರಗಳು ಯಾರ ಕೈಲ್ಲಿವೆ ಎಂಬುದು ಕುಮಾರಸ್ವಾಮಿಯವರಿಗೆ ಗೊತ್ತಿಲ್ಲದ ವಿಷಯವಲ್ಲ. ಹಾಗಿದ್ದೂ ಈ ಘೋಷಣೆ ಮಾಡಿದ್ದಾರೆಂದರೆ ಅದು ಯಶಸ್ವಿಯಾಗಿ ಜಾರಿಯಾಗುತ್ತೆ ಎಂಬುದನ್ನು ನಂಬಲು ಯಾರೂ ಸಿದ್ಧರಿಲ್ಲ.

ಇನ್ನು ಬಿಜೆಪಿ ತನ್ನ ಚುನಾವಣಾ ಸಿದ್ಧತೆಯ ವಿಘಟನಾಕಾರಿ ಮಾರ್ಗವನ್ನು ಮುಂದುವರೆಸಿದಂತೆ ತೋರುತ್ತದೆ. ಸೋಲುವ ಖಚಿತ ಸೂಚನೆಗಳಿರುವ ರಾಜಸ್ಥಾನದಲ್ಲಿ ಅದು ನಡೆಸಿರುವ ಗೋರಕ್ಷಣೆಯ ಹೆಸರಿನ ಹಲ್ಲೆಗಳು' ಮತ್ತು ತಿರಂಗಾ ಯಾತ್ರೆಗಳು ಪರಿಣಾಮದಲ್ಲಿ 'ಕ್ರಿಮಿನಲ್' ಚಟುವಟಿಕೆಗಳೇ ಆಗಿವೆ. ಅಸ್ಸಾಂ ಜನ ಸಮೀಕ್ಷೆ ಕುರಿತ ಅದರ ನಿಲುವು ಅಪ್ಪಟ ಕೋಮುವಾದಿಯಾಗಿದೆ. ಹಾಗೇ ಕೇರಳದ ಮಹಾಪ್ರವಾಹಕ್ಕೆ ನೆರವಾಗಲು ಮುಂದೆ ಬಂದಿರುವ ಅರಬ್ ರಾಷ್ಟ್ರಗಳ ಹಾದಿಗೆ ಅಡ್ಡಗಾಲು ಹಾಕಲು ಹೊರಟಿರುವ ಅದರ ನಡೆ ಕೂಡ. ಇದನ್ನೆಲ್ಲ ಖಚಿತ ಪಡಿಸುವಂತೆ ರಾಜ್ಯದ ಶಾಸಕ ಯತ್ನಾಳ ನೇರವಾಗಿಯೇ ಮತ್ತೆ ಮತ್ತೆ ಹತ್ಯೆಯ ರಾಜಕಾರಣದ ಮಾತುಗಳನ್ನಾಡುತ್ತಿದ್ದಾರೆ. ಇವರಿಗೆ ಛೀಮಾರಿ ಹಾಕುವಷ್ಟು ತಲೆ ನೆಟ್ಟಗಿರುವವರು ಬಿಜೆಪಿಯಲ್ಲಿ ಯಾರೂ ಇಲ್ಲವೆ? ಎಂದಿನಂತೆ ನಮ್ಮ ಪ್ರಧಾನ ಮಂತ್ರಿಯವರು ಇದೆಲ್ಲದರ ಹೊರತಾಗಿ ಮಿಕ್ಕೆಲ್ಲ ವಿಷಯಗಳ ಬಗ್ಗೆ ಘಂಟಾಘೋಷವಾಗಿ ಮಾತಾಡುತ್ತಿದ್ದಾರೆ.

ನೆರೆಯ ಪಾಕಿಸ್ತಾನದಲ್ಲಿ ಕ್ರೀಡಾಪಟು ಇಮ್ರಾನ್ ಖಾನ್ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇದೊಂದು ಕುತೂಹಲದ ಸುದ್ದಿಯೇ ಹೌದು ಅದರ ಬಗ್ಗೆ ಮುಂದಿನ ಸಂಚಿಕೆ ಬೆಳಕು ಚೆಲ್ಲಲಿದೆ.

-ಸಂಪಾದಕ

ಯುವ ಲಹರಿ

ಇಂಗ್ಲಿಷ್ ಬೋಧನೆ : ಅಧ್ಯಾಪಕನೊಬ್ಬನ ಮುಂದಿರುವ ಸವಾಲುಗಳು

–ಪ್ರಸನ್ನ ಕುಮಾರ್



ಉಳಿದ ಎಲ್ಲಾ ಭಾಷೆಗಳಿಗಿಂತ ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿರುವ ಕಾರಣ ಇಂಗ್ಲಿಷ್ ಇಡಿ ಜಗತ್ತಿನಲ್ಲಿ ಇಂದು ಜಾಗತಿಕ ಭಾಷೆ ಎಂದು ಪರಿಗಣಿತವಾಗಿದೆ. ಸಧ್ಯ ಪ್ರಪಂಚದಲ್ಲಿ ಅಂದಾಜು ೮೦೦ ದಶಲಕ್ಷ ಜನ ಇಂಗ್ಲಿಷಿನಲ್ಲಿ ಸುಲಭವಾಗಿ ಮಾತನಾಡುತಿದ್ದು ಈ ಸಂಖ್ಯೆ ೧೯೯೦ ರ ದಶಕದ ನಂತರದಲ್ಲಿ ತ್ವರಿತಗತಿಯಲ್ಲಿ ಏರುತಿದ್ದು ಅದಕ್ಕೆ ಜಾಗತೀಕರಣ ಕಾರಣ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ.ಜಗತ್ತಿನ ಹಲವಾರು ದೇಶಗಳಲ್ಲಿ ಇದನ್ನು ಮುಖ್ಯ ಸಂವಹನ ಭಾಷೆ ಎಂದು ಪರಿಗಣಿಸಿರುವುದರಿಂದ ಈ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಶಾಲಾ ಕಾಲೇಜುಗಳಲ್ಲಿ ಕಲಿಸಲಾಗುತ್ತಿದೆ. ನಮ್ಮ ದೇಶದ ಸಣ್ಣ ಸಣ್ಣ ಊರುಗಳಲ್ಲೂ 'ಇಂಗ್ಲಿಷ್ ಕಲಿಕೆಯ ಶಾಲೆಗಳು ಆರಂಭವಾಗುತ್ತಿರುವುದನ್ನೂ ನಾವು ಗಮನಿಸಬಹುದು.

ಇಂಗ್ಲಿಷ್ ಕೇವಲ ಒಂದು ಭಾಷೆಯಾಗಿ ಉಳಿಯದೆ ಹಲವರ ಬದುಕಿನ ಭಾಗವಾಗಿ ಹೋಗಿರುವ ಈ ಹೊತ್ತಿನಲ್ಲಿ ಭಾರತದಲ್ಲಿ ಈ ಭಾಷೆಯ ಬೋಧನೆ ಮತ್ತು ಕಲಿಕೆಯ ಬಗ್ಗೆ ಯೋಚಿಸಬೇಕಾದದ್ದು ಅತ್ಯಗತ್ಯವಾಗಿದೆ. ಬ್ರಿಟಿಷ್ ಪ್ರಭುತ್ವದ ಕೊಡುಗೆಯಾಗಿ ಭಾರತದಲ್ಲಿ ಉಳಿದ ಈ ಭಾಷೆಯನ್ನು ಯಾವುದೆ ವಿಧಾನ ಮತ್ತು ಮಾನದಂಡಗಳನ್ನು ಅನುಸರಿಸಿ ಬೋಧನೆ ಮಾಡಿದರೂ ಮತ್ತು ಈ ಬಗ್ಗೆ ಹಲವು ರೀತಿಯ ಚರ್ಚೆ, ಸಂವಾದ ಮತ್ತು ಸಂಶೋಧನೆಗಳು ನಡೆದು ಅವುಗಳನ್ನು ಅಳವಡಿಸಿಕೊಂಡರೂ ಇಂಗ್ಲಿಷ್ ಬೋಧನೆ ಮತ್ತು ಕಲಿಕೆ ಎರಡೂ ಕಗ್ಗಂಟಾಗುತ್ತ ಸವಾಲಿನದೆ ಆಗಿವೆ.

೧೮೩೫ ರ ಇಂಗ್ಲಿಷ್ ಶಿಕ್ಷಣ ಕಾಯ್ದೆಯ ನಂತರ ಭಾರತದಲ್ಲಿ ಇಂಗ್ಲಿಷ್ ಬೋಧನೆಯ ಬಗ್ಗೆ ಹತ್ತು ಹಲವು ಚರ್ಚೆ ಮತ್ತು ಸಂವಾದಗಳು ನಡೆದಿದ್ದು ಆನಂತರದ ಅನೇಕ ಶೈಕ್ಷಣಿಕ ಕಾಯ್ದೆ ಮತ್ತು ನಿಯಮಾವಳಿಗಳು ಚಾಲ್ತಿಗೆ ಬಂದಿದ್ದರೂ ಈ ಭಾಷೆಯ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಗಣನೀಯ ಬದಲಾವಣೆ ಎನ್ನುವುದು ಆಗದೆ ಉಳಿದಿದೆ. ಇಂಗ್ಲಿಷ್ ಭಾಷಾ ಬೋಧನೆಯ ಉದ್ದೇಶಗಳು ಕೂಡ ಕಾಲಕಾಲಕ್ಕೆ ಬದಲಾವಣೆಗಳನ್ನು ಕಂಡಿದ್ದರೂ ಸಮಗ್ರವಾಗಿ ನೋಡಿದಾಗ ಮುಖ್ಯ ಉದ್ದೇಶ. ಪ್ರಪಂಚದ ಉದ್ದಗಲ್ಲಕ್ಕೂ ಸಂವಹಿಸಲ್ಪಡುತ್ತಿರುವ ಒಂದು ಪ್ರಮುಖ ಭಾಷೆಯನ್ನು ಕಲಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಜಗತ್ತಿನ ಜ್ಞಾನದ ಕಿಂಡಿಯನ್ನು ಪರಿಚಯಿಸಿ ಹೊಸ ಅರಿವಿನ ಪರಿಧಿಗಳನ್ನು ವಿಸ್ತರಿಸುವುದೆ ಆಗಿದೆ. ಆದರೆ ಈಗ ಇಂಗ್ಲಿಷ್ ಕಲಿಕೆಯು ಕೇವಲ ಪರೀಕ್ಷೆಗಳಲ್ಲಿ ಉತ್ತೀರ್ಣವಾಗುವ ಮತ್ತು ಆ ಮೂಲಕ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯುವ ನೆಪಮಾತ್ರದ ಒಂದು ಸಾಧನವಾಗಿದೆ.


ಈ ಎಲ್ಲಾ ಹಿನ್ನೆಲೆಯಲ್ಲಿ ಭಾರತದಲ್ಲಿ ಇಂಗ್ಲಿಷ್ ಬೋಧನೆಯ ಸವಾಲುಗಳ ಬಗ್ಗೆ ಒಂದು ಪಕ್ಷಿ ನೋಟ ಬೀರಿದಾಗ, ಪ್ರಾಥಮಿಕ, ಪ್ರೌಢ ಮತ್ತು ಪದವಿ ಹಂತಗಳಲ್ಲಿ ಇಂಗ್ಲಿಷ್ ಬೋಧನೆ ಮಾಡುವ ಬಹುತೇಕ ಅಧ್ಯಾಪಕರು ಎದುರಿಸುವ ಸವಾಲುಗಳು ಬೇರೆ ಬೇರೆ ರೀತಿಯಲ್ಲಿ ಇದ್ದರೂ ಅವೆಲ್ಲವೂ ಒಂದೆ ತೆರನಾಗಿ ಕಾಣಿಸುತ್ತವೆ. ಅಂಥವುಗಳನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದಾಗಿದೆ.

* ಭಾರತದಲ್ಲಿ ಇಂಗ್ಲಿಷ್ ಕಲಿಕೆಯ ನಿರ್ದಿಷ್ಟ ಉದ್ದೇಶಗಳ ಬಗ್ಗೆ ಇರುವ ಅಸ್ಪಷ್ಟ ಜ್ಞಾನ ಅಥವಾ ಅಜ್ಞಾನ.
* ಇಂಗ್ಲಿಷಿನ ಬಗ್ಗೆ ವಿದ್ಯಾರ್ಥಿಗಳಿಗಿರುವ ಸಾಂಪ್ರದಾಯಿಕವಾದ ಮತ್ತು ಅವ್ಯಕ್ತವಾದ ಭಯ.
* ಕಲಿಕೆ ಪ್ರಕ್ರಿಯೆಯುದ್ದಕ್ಕೂ ಇಂಗ್ಲಿಷ್ ಅಧ್ಯಾಪಕರ ಮೇಲಿನ ಕಲಿಕಾರ್ಥಿಗಳ ಅತಿಯಾದ ಅವಲಂಬನೆ
* ಇಂಗ್ಲಿಷ್ ಕಲಿಕೆಯಲ್ಲಿ ವಿದ್ಯಾರ್ಥಿಗಳ ನಿರಾಸಕ್ತಿ, ಭಯಮಿಶ್ರಿತಹಿಂಜರಿಕೆ ಮತ್ತು ಭಾಗವಹಿಸದಿರುವಿಕೆ ಅಥವಾ ಏಕಮುಖವಾದ ಬೋಧನಾ–ಕಲಿಕಾ ಪ್ರಕ್ರಿಯೆ.
* ತರಗತಿಯಲ್ಲಿ ಮತ್ತು ತರಗತಿಯಿಂದಾಚೆ ಮಾತೃಭಾಷೆಯಲ್ಲೇ ವ್ಯವಹರಿಸುವ ಅನಿವಾರ್ಯತೆ.
* ಇಂಗ್ಲೀಷ್‌ನಲ್ಲಿ ಆಲೋಚನಾ ಕ್ರಮವನ್ನು ರೂಢಿಸಿಕೊಳ್ಳದ ಮತ್ತು ಒಂದು ಬಗೆಯ ಆಂತರಿಕ ಭಾಷಾಂತರ ಸ್ವರೂಪದ ಪ್ರಕ್ರಿಯೆಗೊಳಗಾಗುವುದು.
* ಇಂಗ್ಲೀಷ್ ಭಾಷೆಯ ಜಟಿಲ ವ್ಯಾಕರಣ ವ್ಯವಸ್ಥೆ.
* ಪರಿಣಾಮಕಾರಿ ಮತ್ತು ಉತ್ತಮ ಬೋಧನಾ ವಿಧಾನಗಳ ಅಳವಡಿಕೆ ಮತ್ತು ಸಾಮಾಗ್ರಿಗಳ ಕೊರತೆ.
* ಭಾಷಾ ಬೋಧನೆಯ ದೃಷ್ಟಿಯಿಂದ ಸುಧಾರಿತವಲ್ಲದ ಪರೀಕ್ಷಾ ವಿಧಾನ
* ಅಸಮರ್ಪಕ ಮತ್ತು ದೋಷಪೂರಿತ ಪಠ್ಯಕ್ರಮ ರಚನೆ ಮತ್ತು ಅನುಷ್ಠಾನ.
* ಅಧ್ಯಾಪಕರಿಗೆ ಕಾಲಕಾಲಕ್ಕೆ ವ್ಯವಸ್ಥಿತ ತರಬೇತಿ ವ್ಯವಸ್ಥೆ ಇಲ್ಲದಿರುವುದು.

ವಿಶಾಲದೃಷ್ಟಿಯ, ಸಾರಸಂಗ್ರಹರೂಪಿ, ಪ್ರಾಯೋಗಿಕ ಬೋಧನಾ ವಿಧಾನ ಅಥವಾ ಇನ್ನಾವುದೆ ವಿಧಾನದಲ್ಲಿ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯ ಎಲ್.ಎಸ್.ಆರ್.ಡಬ್ಲ್ಯು ವಿಧಾನ ಅನುಸರಿಸಿದಾಗಲೂ ವಿದ್ಯಾರ್ಥಿಗಳನ್ನು ತಲುಪುವುದು ಒಮ್ಮೊಮ್ಮೆ ಕಷ್ಟಕರವಾಗಿ ಬಿಡುತ್ತದೆ. ಇದೆಲ್ಲವೂ ಗ್ರಾಮೀಣ ಹಿನ್ನೆಲೆಯಿಂದ ಬಂದು ಐದನೇ ತರಗತಿಯಿಂದ ಇಂಗ್ಲೀಷ್ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಬೋಧಿಸುವಾಗ ಈ ತರಹದ ಎಲ್ಲಾ ಸವಾಲುಗಳೊಟ್ಟಿಗೆ ಮತ್ತಷ್ಟು ಸೇರ್ಪಡೆಯಾಗಿ ಬೋಧಕನ ಮನಸ್ಸು ಇನ್ನಷ್ಟು ಸಂಕೀರ್ಣವಾಗುತ್ತದೆ. ನಗರ ಪ್ರದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದು ಪದವಿ ವ್ಯಾಸಂಗಕ್ಕೆ ಬಂದ ವಿದ್ಯಾರ್ಥಿಗಳೂ ಕೂಡ ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಹಿಡಿತ ಸಾಧಿಸಿದ್ದಾರೆ ಎಂದು ಹೇಳಲಾಗುವುದಿಲ್ಲ. ಅಷ್ಟಲ್ಲದೆ, ಒಂದನೇ ತರಗತಿ ಅಥವಾ ಶಾಲಾ ಪೂರ್ವ ವ್ಯಾಸಂಗಕ್ರಮಗಳಿಂದ ಪದವಿ ಹಂತದವರೆಗೂ ಇಂಗ್ಲೀಷ್ ಮಾಧ್ಯಮದಲ್ಲೆ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳನ್ನು ಗಮನಿಸಿದರೂ ಅವರಲ್ಲಿಯೂ ಇಂಗ್ಲೀಷ್ ಕಲಿಕೆಯ ದೋಷವನ್ನು ಕಾಣಬಹುದಾಗಿದೆ. ಇಂತಹ ಸನ್ನಿವೇಶಗಳಲ್ಲಿ ಯಾವುದೇ ಹಂತದಲ್ಲಿ ಬೋಧಿಸುವ ಅಧ್ಯಾಪಕನಿಗೆ ಆದರೂ ಇದೊಂದು ದೊಡ್ಡ ಸವಾಲೆ ಸರಿ. ಇದರ ಜೊತೆ ಮೆಡಿಕಲ್, ಇಂಜನಿಯರಿಂಗ್ ಮತ್ತು ಇನ್ನಿತರ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕೂಡ ಈ ರೀತಿಯ ಸಮಸ್ಯೆಯಿಂದ ಹೊರತಾಗೇನಿಲ್ಲ.

ಸದ್ಯ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ದೇಶದ ಎಲ್ಲ ವಿಶ್ವವಿದ್ಯಾನಿಲಯ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಆಯ್ಕೆ ಆಧಾರಿತ ಶ್ರೇಯ ನೀಡಿಕೆ (Choice based Credit System) ಪದ್ಧತಿ ಜಾರಿಗೆ ತಂದಿದ್ದು ಇದರಲ್ಲಿ ಟ್ಯುಟೋರಿಯಲ್ ಪದ್ಧತಿಯನ್ನು ಕಡ್ಡಾಯ ಮಾಡಿರುವುದರಿಂದ ಕಡಿಮೆ ಸಂಖ್ಯೆಯ ಒಂದೊಂದು ತಂಡಗಳ ಪ್ರತಿಯೊಬ್ಬರನ್ನು ಮುಖಾಮುಖಿಯಾಗಿಸಿ ಭಾಷಾ ಕೌಶಲಗಳನ್ನು ಬೋಧಿಸಬಹುದೆಂಬ ಆಶಾವಾದವಿದೆ.


ಮೇಲೆ ಗುರುತಿಸಿದ ಎಲ್ಲ ಸವಾಲುಗಳ ಜೊತೆ ಗುರುತಿಸಲಾಗದ ಇನ್ನಷ್ಟು ಸವಾಲುಗಳನ್ನು ಭಾರತದಲ್ಲಿನ ಇಂಗ್ಲಿಷ್ ಅಧ್ಯಾಪಕರು ಎದುರಿಸುತ್ತಿದ್ದಾರೆ. ಇವೆಲ್ಲದರೊಟ್ಟಿಗೆ ಪ್ರಥಮ ಭಾಷೆ ಮತ್ತು ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಬೋಧಿಸುತ್ತಿರುವುದರಿಂದ ಇಲ್ಲಿ ಅಳವಡಿಸಿಕೊಳ್ಳಬೇಕಾದ ಬೋಧನಾ ವಿಧಾನದಲ್ಲಿನ ಸವಾಲೂ ದೊಡ್ಡದಿದೆ. ಆದರೆ ಇದಾವುದೂ ಎದುರಿಸಲಾಗದ ಸವಾಲುಗಳೇನೂ ಅಲ್ಲ ಅಧ್ಯಾಪಕ–ವಿದ್ಯಾರ್ಥಿಗಳಿಬ್ಬರಿಗೂ ಶ್ರದ್ಧೆ ಮತ್ತು ಆಸಕ್ತಿಗಳಿದ್ದರೆ ತರಗತಿಗಳ ಸಮಯದಲ್ಲೇ ಹೊಸ ದಾರಿಗಳು ಕಂಡಾವು.



(ಮೈಸೂರಿ ಸರ್ಕಾರಿ ಪ್ರ. ದ. ಕಾಲೇಜೊಂದರಲ್ಲಿ ಯುವ ಇಂಗ್ಲಿಷ್ ಅಧ್ಯಾಪಕರಾಗಿರುವ ಪ್ರಸನ್ನ ಕುಮಾರ್ ಬಹುಮುಖ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವವರು ಸಹ.)

ಪ್ರೊ. ಜಿ ಎನ್ ದೇವಿ ಸಂದರ್ಶನ : ಭಾಗ-೨

ಸಂದರ್ಶನ: ಡಾ.ಎಸ್. ಸಿರಾಜ್ ಅಹಮದ್



ಸಾಹಿತ್ಯ ವಿಮರ್ಶೆಯಿಂದ ಭಾಷಾ ಅಧ್ಯಯನದ ಕಡೆ ಚಲಿಸಿದ ಪ್ರೊ. ಗಣೇಶ್ ದೇವಿ ಅವರು ಭಾಷೆಗಳ ಚರಿತ್ರೆ, ವಿಕಾಸ, ಅಧ್ಯಯನಗಳ ವಿಧಾನ ಮತ್ತು ಅವುಗಳ ರಾಜಕಾರಣಕ್ಕೆ ಸಂಬಂಧಿಸಿದಂತೆ ಅನನ್ಯವಾಗಿ ಚಿಂತಿಸಿದವರು, ಅಪಾರ ಕ್ಷೇತ್ರ ಕಾರ್ಯ ಮಾಡಿದವರು ಮತ್ತು ಸ್ವಯಂ ಆಸಕ್ತಿಯಿಂದ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದವರು. 'ಹೊಸ ಮನುಷ್ಯ'ಕ್ಕಾಗಿ ನಡೆಸಲಾದ ಈ ವಿಶೇಷ ಸಂದರ್ಶನದ ಈ ಎರಡನೇ ಭಾಗದಲ್ಲಿ, ಅವರೊಡನೆ ಮಾತಾಡುವುದೆಂದರೆ ಅವರೊಡನೆ ನಾವೂ ಭಾಷಾ ಪ್ರಪಂಚದ ನಿಗೂಢ ವಲಯಗಳ ಅನ್ವೇಷಣೆಗೆ ಹೊರಟಂತೆಯೇ ಎಂಬುದನ್ನು ಓದುಗರು ತಿಳಿಯಬಹುದು-ಸಂ.

ಭಾಷೆಗಳನ್ನು ಕುರಿತು ಅಧ್ಯಯನ ಮಾಡುವ, ದಾಖಲಿಸುವ ನಿಮ್ಮ ಹಂಬಲ ಶುರುವಾಗಿದ್ದು ಯಾವುದೋ ರಮ್ಯ ಆಶಾವಾದದಿಂದಲ್ಲ. ಬದಲಾಗಿ ಇದು ಶುರುವಾದದ್ದು ಸಮುದಾಯಗಳನ್ನು ಉಳಿಸುವ ಅವರ ಜೀವನಕ್ರಮವನ್ನು ಉಳಿಸುವ ಒತ್ತಾಸೆಯಿಂದ ಎನ್ನುತ್ತೀರಿ. ನೀವು ೨೦೧೦ ರಲ್ಲಿ ಭಾರತದಲ್ಲಿ ಬಳಕೆಯಲ್ಲಿರುವ ಭಾಷೆಗಳ ಸ್ಥಿತಿಗಳನ್ನು ಕುರಿತು ನಡೆಸಿದ ಜನಭಾಷಾ ಗಣತಿ- 'ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ'(ಪಿಎಲ್‌ಎಸ್‌ಐ)ಯಲ್ಲಿ ಪಾಲ್ಗೊಂಡವರು ಭಾಷಾಕೋವಿದರೋ, ಶಾಸ್ತ್ರಜ್ಞರೋ ಅಲ್ಲ. ಈ ಗಣತಿಯನ್ನು ಮಾಡಿದವರು ಶಿಕ್ಷಕರು, ಕಾರ್ಮಿಕರು, ರೈತರು, ಡ್ರೈವರುಗಳು. ಇದೆಲ್ಲ ಸಾಧ್ಯವಾಗಿದ್ದು ಹೇಗೆ?

ನಾನು ಹುಟ್ಟಿದ್ದು ಸ್ವಾತಂತ್ರದ ನಂತರ. ಹಾಗಾಗಿ ನಾನು ಸರ್ಕಾರ ಕೊಡಮಾಡುವ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಪಿಎಚ್‌ಡಿಯವರೆಗೆ ಅಧ್ಯಯನ ಮಾಡಿದೆ. ಸಮಾನತೆಯ ಸೌಲಭ್ಯವನ್ನು ಬಳಸಿಕೊಂಡು ಸ್ವತಂತ್ರ ಸಮಾಜವನ್ನು ನಾವು ಕಟ್ಟಲು ಸಾಧ್ಯವಾಗಲಿಲ್ಲವಲ್ಲ ಎಂಬ ಆಳವಾದ ಪಾಪಪ್ರಜ್ಞೆ ನನ್ನನ್ನು ಸದಾ ಬಾಧಿಸುತ್ತದೆ. ಹಾಗಾಗಿ ಇದನ್ನು ಸಾಧಿಸಲು ಏನನ್ನು ಮಾಡಿದರೂ ಅದನ್ನು ನನ್ನ ವೈಯಕ್ತಿಕ ಕರ್ತವ್ಯವೆಂದು ಭಾವಿಸಿ ಮಾಡಿದ್ದೇನೆ. ಈ ಕಾರಣದಿಂದ ನಾನು ಬುಡಕಟ್ಟು/ ಡಿನೋಟಿಫೈಡ್/ ಅಲೆಮಾರಿ ಸಮುದಾಯಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡೆ. ನಾನು ನಿರಂತರವಾಗಿ ಅವರ ಹಕ್ಕುಗಳಿಗಾಗಿ ಒಂದಲ್ಲ ಒಂದು ರೀತಿ ಹೋರಾಟ ನಡೆಸುತ್ತಲೇ ಬಂದಿದ್ದೇನೆ.

ಜನಭಾಷಾ ಗಣತಿ(ಪಿಎಲ್‌ಎಸ್‌ಐ) ಹುಟ್ಟಿದ್ದು ನನಗೆ ಮೂಲತಃ ಸಾಹಿತ್ಯ-ಭಾಷೆಗಳ ಕುರಿತು ಇದ್ದ ಆಸಕ್ತಿಯ ಕಾರಣದಿಂದ. ಭಾಷೆಗಳ ಬಗ್ಗೆ ಆಸಕ್ತಿ ಹುಟ್ಟಿದ್ದು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಬಗೆಗೆ ನನಗಿದ್ದ ಬಾಧ್ಯತೆಯ ಕಾರಣದಿಂದ. ಇದನ್ನು ಸೂಕ್ಷ್ಮವಾಗಿ ನೋಡಿದಾಗ-ಭಾಷೆಗಳು ಕಣ್ಮರೆಯಾಗುತ್ತಿರುವುದು, ಅಳಿವಿನಂಚಿಗೆ ಸರಿಯುತ್ತಿರುವುದು ಅವುಗಳನ್ನಾಡುವ ಜನರ ಜೀವನಕ್ರಮವೇ ಕಣ್ಮರೆಯಾಗುತ್ತಿದೆ ಎಂಬ ಕಾರಣದಿಂದ ಎಂದು ಗೊತ್ತಾಯಿತು. ನಾನು ಕೆಲಸಕ್ಕೆ ರಾಜಿನಾಮೆ ನೀಡಿ ಆದಿವಾಸಿಗಳ ಜೊತೆ ಕೆಲಸ ಮಾಡಲು ತೇಜಗಡಕ್ಕೆ ಬಂದು ಅಲ್ಲಿ ಆದಿವಾಸಿ ಅಕಾಡೆಮಿಯನ್ನು ಆರಂಭಿಸಿದಾಗ ಅಲ್ಲಿ ಸಮುದಾಯಗಳಿಗೆ ಬೇಕಾದ ಜೀವನೋಪಾಯದ ಕ್ರಮಗಳನ್ನು ಸೃಷ್ಟಿಸಿದರೆ ಜನ ವಲಸೆ ಹೋಗುವುದನ್ನು ತಪ್ಪಿಸಬಹುದು ಎಂದು ಗೊತ್ತಾಗಿತ್ತು. ಅಲ್ಲಿ ಹೆಚ್ಚು ಕಡಿಮೆ ೭ ಲಕ್ಷ ಜನಸಂಖ್ಯೆ ಇರುವ ಸುಮಾರು ೨೨೦೦ ಹಳ್ಳಿಗಳಲ್ಲಿರುವ ೨೨೦೦೦ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಕಲ್ಪಿಸುವ ದೊಡ್ಡ ಪ್ರಯತ್ನ ನಡೆಸಿದ್ದೆ. ಇದು ನನಗೆ ಹೊಸಬದುಕು ನೀಡಿದ ಅನುಭವವವೇ ಆಗಿತ್ತು. ಈ ಅನುಭವದ ಆಧಾರದ ಮೇಲೆ ನನಗೆ ಆದಿವಾಸಿಗಳು, ಶಾಲಾ ಶಿಕ್ಷಕರು ಇನ್ನಿತರರ ಜೊತೆ ಕೆಲಸ ಮಾಡಲು ಸಾಧ್ಯ ಅನಿಸಿತು.

ಭಾಷಾಗಣತಿಯ ಆಲೋಚನೆ ಬಂದಿದ್ದು ಹೇಗೆ ಎಂದರೆ ಭಾರತ ಸರ್ಕಾರವು ಇಂಥದೊಂದು ಗಣತಿಯನ್ನು ಕೈಗೊಳ್ಳಲು ಯೋಚಿಸಿತ್ತು. ಆದರೆ ಕಾರಣಾಂತರಗಳಿಂದ ಅದು ಕೈಗೂಡಲಿಲ್ಲ. ಇದು ಹಲವರಲ್ಲಿ ತೀವ್ರ ಅತೃಪ್ತಿಯನ್ನುಂಟು ಮಾಡಿತು. ಇದಕ್ಕೆ ಉತ್ತರವಾಗಿ ನಾವು ಹಲವು ರಾಜ್ಯಗಳಿಗೆ ಭೇಟಿನೀಡಿ ತಂಡಗಳನ್ನು ರೂಪಿಸಿ ಭಾಷೆಗಳ ಗಣತಿಯನ್ನು ಆರಂಭಿಸುತ್ತೇವೆ ಎಂದು ಘೋಷಿಸಿದೆವು. ನಮ್ಮ ಉದ್ದೇಶ ಬಹಳ ಸರಳವಾಗಿತ್ತು. ನಾನು ಯಾವುದಾದರೂ ರಾಜ್ಯವೊಂದಕ್ಕೆ ಉಪನ್ಯಾಸ ನೀಡಲು ಹೋದಾಗ ಅಥವಾ ಇನ್ನಾವುದೋ ಉದ್ದೇಶಕ್ಕೆ ಭೇಟಿ ನೀಡಿದಾಗ ಅಲ್ಲಿ ಸಿಕ್ಕ ಹಲವು ಕೆಲವರನ್ನು ನಿಮಗೆ ಭಾಷೆಗಳ ಬಗ್ಗೆ ಆಸಕ್ತಿಯಿದೆಯೇ ಎಂದು ಕೇಳುತ್ತಿದ್ದೆ. ನನಗೆ ಸಿಗುತ್ತಿದ್ದ ಉತ್ತರ ಯಾವಾಗಲೂ ಬಹಳ ಪ್ರೋತ್ಸಾಹದಾಯಕವಾಗಿರುತ್ತಿತ್ತು. ನಂತರ ಇದೇ ಬಗೆಯ ಆಸಕ್ತಿಯಿರುವ ಹಲವರ ವಿಳಾಸ ಪರಿಚಯಗಳನ್ನು ಪಡೆದುಕೊಂಡು ಹಲವು ರೀತಿಯ ಪ್ರಯತ್ನ- ಭೇಟಿಗಳ ತರುವಾಯ ಪ್ರತಿಯೊಂದು ರಾಜ್ಯದಲ್ಲಿ ತಂಡವೊಂದನ್ನು ಸಿದ್ಧಗೊಳಿಸಲಾಗುತ್ತಿತ್ತು. ಅಂಥ ತಂಡಗಳಿಗೆ ಹಲವು ಬಗೆಯ ಕಾರ್ಯಾಗಾರಗಳಲ್ಲಿ ತರಬೇತಿ ನೀಡಲಾಗುತ್ತಿತ್ತು. ಒಂದು ಅಥವಾ ಎರಡು ವರ್ಷಗಳ ಅವಧಿಯಲ್ಲಿ ಇಂಥ ಕಾರ್ಯಾಗಾರಗಳಲ್ಲಿ ನಿಜವಾದ ಆಸಕ್ತಿಯಿರುವವರು ಮಾತ್ರ ಉಳಿದು ಉತ್ತಮ ತಂಡವೊಂದು ಸಿದ್ಧಗೊಳ್ಳುತ್ತಿತ್ತು. ಹೀಗೆ ೨೦೧೦ರಲ್ಲಿ ಕೆಲಸ ಶುರುವಾಯಿತು. ನಂತರ ೨೦೧೦-೨೦೧೧ರ ಎರಡು ವರ್ಷಗಳಲ್ಲಿ ನಾವು ಭಾಷಾಗಣತಿಯ ಬಗೆಗೆ ಕನಸು ಕಾಣುತ್ತ, ಅದರ ರೂಪುರೇಷೆಗಳನ್ನು ಸಿದ್ಧಪಡಿಸುತ್ತ ಹೋದೆವು. ೨೦೧೨ರ ಹೊತ್ತಿಗೆ ಪ್ರತಿಯೊಂದು ರಾಜ್ಯದಲ್ಲಿ ಪರಿಣಿತ ತಂಡವೊಂದನ್ನು ಕಟ್ಟಿ ಗಣತಿಯ ನೀಲನಕ್ಷೆಯನ್ನು ರೂಪಿಸಿದ್ದೆವು. ಈ ತಂಡಗಳಲ್ಲಿ ಮುಖ್ಯವಾಗಿ ಇರಬೇಕಾದವರು ಆ ಪ್ರದೇಶದ ಭಾಷೆಗಳನ್ನು ಆಡುವವರೇ ಹೊರತು ಭಾಷಾಪಂಡಿತರಲ್ಲ-ಕೆಲವರ ಹೊರತಾಗಿ-ಎಂಬುದು ನನ್ನ ಉದ್ದೇಶವಾಗಿತ್ತು. ೨೦೧೨ ರ ಹೊತ್ತಿಗೆ ಹೆಚ್ಚು ಕಡಿಮೆ ಎಲ್ಲ ಭಾಷೆಗಳ ಪ್ರತಿನಿಧಿಗಳು ಪಿಎಸ್‌ಎಲ್‌ಐನ ಯೋಜನೆಯಲ್ಲಿ ಇದ್ದುದರಿಂದ, ಅವರಿಗೆ ಪ್ರತಿ ಭಾಷೆಯನ್ನು ಕುರಿತ ಪುಟ್ಟ ಇತಿಹಾಸ, ಸ್ಥೂಲ ವ್ಯಾಕರಣ, ಮುಖ್ಯ ಪದಕೋಶ, ವಿಶಿಷ್ಟ ನುಡುಗಟ್ಟುಗಳು-ಪಾರಿಭಾಷಿಕಗಳು ಇತ್ಯಾದಿಗಳ ವಿವರಗಳನ್ನು ಒಳಗೊಂಡ ಸುಮಾರು ೨೦-೪೦ ಪುಟಗಳ ಲೇಖನವನ್ನು ೨೦೧೨ರ ಜನವರಿಯಿಂದ ೨೦೧೩ರ ಸೆಪ್ಟೆಂಬರ್‌ವರೆಗೆ ಸಿದ್ಧಪಡಿಸಲು ಕೇಳಿಕೊಂಡೆವು. ನಮ್ಮ ತಂಡಗಳಿಗೆ ಕೇವಲ ೨ತಿಂಗಳ ಅವಧಿಯಲ್ಲಿ ಪ್ರತಿ ಸಮುದಾಯದ ಭಾಷೆಯನ್ನು ಕುರಿತು ೨೦-೪೦ ಪುಟಗಳ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಯಿತು. ಎಲ್ಲ ಭಾಷೆಗಳ ಮಾಹಿತಿ ಸಿದ್ಧವಾದ ಮೇಲೆ ಅದನ್ನು ಪರಿಷ್ಕರಿಸಲು ೨೦೧೩ರಲ್ಲಿ ರಾಷ್ಟ್ರೀಯ ಸಂಪಾದಕ ಮಂಡಲಿಯೊಂದನ್ನು ರಚಿಸಲಾಯಿತು. ಈ ಮಂಡಲಿಯು ಲಭ್ಯವಿದ್ದ ಎಲ್ಲ ಮಾಹಿತಿಯನ್ನು ಪರಿಷ್ಕರಿಸಿ ಪ್ರಕಟಣೆಗೆ ಸಿದ್ಧಗೊಳಿಸಿತು. ೨೦೧೪ರಲ್ಲಿ ಜನಭಾಷಾ ಗಣತಿಯ ಮೊದಲ ಸಂಪುಟ ಸಿದ್ಧಗೊಂಡಿತು. ಕಳೆದ ನಾಲ್ಕು ವರ್ಷಗಳಲ್ಲಿ ೫೬ ಪುಸ್ತಕಗಳು ಪ್ರಕಟಗೊಂಡಿದ್ದು ೨೦೨೦ರ ವೇಳೆಗೆ ೯೧ ಪುಸ್ತಕಗಳು ಪ್ರಕಟಗೊಳ್ಳುವ ನಿರೀಕ್ಷೆಯಿದೆ. ವಿಶೇಷವೆಂದರೆ ಇಂಥ ಯೋಜನೆಗೆ ಹೆಚ್ಚು ಹಣ ಬೇಕಾಗಲಿಲ್ಲ. ನಾನು ಈ ಯೋಜನೆಗೆ ಪ್ರಯಾಣ ಮಾಡುವಾಗ ಯಾವ ಟಿಎ/ಡಿಎಗಳನ್ನು ನಿರೀಕ್ಷಿಸಲಿಲ್ಲ. ನಾನು ಯಾವುದೋ ಉಪನ್ಯಾಸಕ್ಕೋ ವಿಚಾರ ಸಂಕಿರಣಕ್ಕೋ ಹೋದ ಸಂದರ್ಭವನ್ನು ಬಳಸಿಕೊಂಡು ನಮ್ಮ ಸಭೆಗಳನ್ನು ಸ್ಕೂಲು ಕಾಲೇಜುಗಳಲ್ಲೋ, ಮರಗಳ ಕೆಳಗೋ, ಧರ್ಮಶಾಲೆಗಳಲ್ಲೋ, ರೈಲ್ವೇ ಪ್ಲಾಟ್‌ಫಾರಮ್‌ಗಳಲ್ಲೋ, ಸ್ನೇಹಿತರ ಮನೆಗಳಲ್ಲೋ, ಗೆಸ್ಟ್‌ಹೌಸುಗಳಲ್ಲೋ ನಡೆಸುತ್ತಿದ್ದೆವು. ಇಂಥ ಸಭೆಗಳನ್ನು ಸೆಮಿನಾರುಗಳ ರೂಪದಲ್ಲಿ ನಡೆಸುತ್ತಿರಲಿಲ್ಲ. ಎಲ್ಲವನ್ನೂ ಅನೌಪಚಾರಿಕವಾಗಿ ನಡೆಸಿದ್ದರಿಂದ ನಮ್ಮ ಯೋಜನೆಗೆ ಬಹಳ ದೊಡ್ಡ ಪ್ರಮಾಣದ ಹಣ ಬೇಕಾಗಲಿಲ್ಲ. ಪ್ರತಿಯೊಬ್ಬ ಲೇಖಕರಿಗೂ ನಾವು ೩೦೦೦ ದಿಂದ ೪೦೦೦೦ದವರೆಗೆ, ಭಾಷಾಂತರಕಾರರಿಗೆ ೨೦೦೦ರಿಂದ ೩೦೦೦ ರೂ.ಗಳವರೆಗೆ ಸಂಭಾವನೆಯನ್ನು ನೀಡಿದೆವು. ಒಟ್ಟು ಯೋಜನೆಯನ್ನು ಟಾಟಾ ಟ್ರಸ್ಟ್‌ನವರು ನಮ್ಮ ಭಾಷಾ ರಿಸರ್ಚ್ ಸೆಂಟರಿಗೆ ನೀಡಿದ ೮೦ಲಕ್ಷ ರೂ. ಹಣದಲ್ಲಿ ಪೂರ್ಣಗೊಳಿಸಿದೆವು.

ಟಾಟಾ ಟ್ರಸ್ಟ್‌ನವರು ನಿಮ್ಮ ಯೋಜನೆಯ ಕೊನೆಯ ಹಂತದಲ್ಲಿ ಈ ಹಣವನ್ನು ದೇಣಿಗೆಯಾಗಿ ನೀಡಿದರು ಎಂದು ನಾನು ಓದಿದ್ದೆ. ಟ್ರಸ್ಟ್‌ನವರು ನಿಮ್ಮ ಯೋಜನೆಗೆ ನೀಡಿದ ಸಹಾಯವನ್ನು ಕುರಿತು ನಿರ್ದಿಷ್ಟವಾದ ಪ್ರಶ್ನೆಯನ್ನು ಕೇಳಬೇಕು. ಯಾಕೆಂದರೆ ಟಾಟಾ ಸಂಸ್ಥೆಯು ದೇಶದ ಹಲವು ಕಡೆಗಳಲ್ಲಿ ಆದಿವಾಸಿ ಸಮುದಾಯಗಳನ್ನು ಎತ್ತಂಗಡಿ ಮಾಡಿ ಅವರ ಜೀವನಕ್ರಮ ನಾಶವಾಗುವುದಕ್ಕೂ ಕಾರಣವಾಗಿದೆ. ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?

ಟಾಟಾ ಉದ್ಯಮ ಸಮೂಹಗಳು ಆದಿವಾಸಿ ಸಮುದಾಯಗಳ ಬದುಕನ್ನು ನಾಶಗೊಳಿಸಿವೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಈ ಉದ್ಯಮ ಸಮೂಹಗಳನ್ನು ಹೊರತು ಪಡಿಸಿ, ಸಮಾಜ ಕಲ್ಯಾಣಕ್ಕಾಗಿ ಜಮ್‌ಶೆಡ್‌ಜಿ ಟಾಟಾ ಅವರು ಸ್ಥಾಪಿಸಿದ ಒಂದು ಟ್ರಸ್ಟ್ ಇದೆ. ಇದೂ ಸಹ ಒಂದು ಸಮೂಹ ಸಂಸ್ಥೆಯಾಗಿ ಬೆಳೆದಿದೆ ಯಾಕೆಂದರೆ, ಟಾಟಾ ಕುಟುಂಬದ ಪ್ರತಿ ಸದಸ್ಯನೂ ಇನ್ನೊಂದು ಟ್ರಸ್ಟ್‌ಅನ್ನು ಸ್ಥಾಪಿಸಿ ಅದಕ್ಕೆ ಸೇರಿಸಿದ್ದಾನೆ. ಟಾಟಾ ಟ್ರಸ್ಟ್ ಮತ್ತು ಟಾಟಾ ಉದ್ಯಮ ಸಮೂಹಗಳು ಬೇರೆಯಾಗಿ ೪೦ ವರ್ಷಗಳಾದವು. ಟಾಟಾ ಟ್ರಸ್ಟ್‌ಗಳು ಕ್ಯಾನ್ಸರ್ ಆಸ್ಪತ್ರೆಗಳು, ಟಾಟಾ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ಮೊದಲಾದ ಸಂಸ್ಥೆಗಳನ್ನು ನಡೆಸುತ್ತವೆ. ಆಶ್ಚರ್ಯದ ಸಂಗತಿಯೆಂದರೆ ಟಾಟಾ ಉದ್ಯಮಗಳನ್ನು ವಿರೋಧಿಸುವ ಬಹಳಷ್ಟು ಜನ ಆದಿವಾಸಿ ಸಮಾಜಸೇವಾ ಕಾರ್ಯಕರ್ತರು ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ಸ್(ಟಿಐಎಸ್‌ಎಸ್)ನಲ್ಲಿಯೇ ತರಬೇತಿ ಪಡೆಯುತ್ತಾರೆ. ರಾಜಮೋಹನ್ ಗಾಂಧಿಯವರು ೪೦ ವರ್ಷಗಳ ಹಿಂದೆ ಸ್ಥಾಪಿಸಿದ ಸಂಸ್ಥೆಯೊಂದರ ಸಭೆಯಲ್ಲಿ ನಿನ್ನೆ ನಾನು ಮುಂಬಯಿಯಲ್ಲಿ ಭಾಗವಹಿಸಿದ್ದೆ. ಮುಂಬಯಿಯ ಹಲವು ದೊಡ್ಡ ಉದ್ಯಮಿಗಳು ಹಾಜರಿದ್ದ ಆ ಸಭೆಯಲ್ಲಿ ರಾಜಕೀಯ ಕಾರ್ಯಕರ್ತರಿಗೆ ತರಬೇತಿ ನೀಡುವ ಸಂಸ್ಥೆಯೊಂದನ್ನು ರೂಪಿಸುವ ಬಗ್ಗೆ ಚರ್ಚೆ ನಡೆಯುತ್ತಿತ್ತು. ನೀವು ಇಂಥ ಸಂಸ್ಥೆಯನ್ನು ಕಟ್ಟುವುದಾದರೆ, ಅಲ್ಲಿ ತರಬೇತಿ ಪಡೆಯುವ ಕಾರ್ಯಕರ್ತರು ಮೊದಲು ನಿಮ್ಮನ್ನೇ ಟೀಕಿಸುತ್ತಾರೆ ಎಂದು ನಾನು ಹೇಳಿದೆ. ಅದಕ್ಕೆ ಅಲ್ಲಿದ್ದ ಉದ್ಯಮಿಗಳು ನಾವು ಮಾಡಲಾಗದ ಕೆಲಸವನ್ನು ಸಾಮಾಜಿಕ ಕಾರ್ಯಕರ್ತರು ಮಾಡಿದರೆ ಅದಕ್ಕೆ ನಮ್ಮ ತಕರಾರೇನು ಇಲ್ಲ ಎಂದರು. ನಾನು ಟಾಟಾ ಟ್ರಸ್ಟ್‌ನಿಂದ ಹಣ ಪಡೆದಿರುವುದು ಸತ್ಯ. ಇದರ ಬಗ್ಗೆ ಯಾರಿಗಾದರೂ ಅದು ಆಕ್ಷೇಪಗಳಿದ್ದರೆ, ಅದನ್ನು ನಾನು ಗೌರವದಿಂದ ಸ್ವೀಕರಿಸುತ್ತೇನೆ.

ಇನ್ನೊಂದು ಸತ್ಯವೇನೆಂದರೆ ನಾನು ಇದನ್ನು ಮಾಡದಿದ್ದರೆ ಬೇರೆ ಯಾರು ಮಾಡುತ್ತಿದ್ದರೋ, ಯಾರು ಇಷ್ಟೆಲ್ಲ ಸಂಪುಟಗಳನ್ನು ಪ್ರಕಟಿಸುತ್ತಿದ್ದರೋ ಗೊತ್ತಿಲ್ಲ. ಸರ್ಕಾರವು ೨೦೦೭ರ ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ ೨೮೦ ಕೋಟಿ ರೂ. ಗಳಷ್ಟು ಹಣವನ್ನು ಮೀಸಲಿಡುವ ಮೂಲಕ ಇದೇ ಬಗೆಯ ಯೋಜನೆಯನ್ನು 'ನ್ಯೂ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ'ದ ಹೆಸರಿನಲ್ಲಿ ನಡೆಸಲು ಉದ್ದೇಶಿಸಿತ್ತು. ಆದರೆ ಕಾರಣಾಂತರಗಳಿಂದ ಯೋಜನೆ ಆರಂಭವಾಗಲೇ ಇಲ್ಲ. ಆಕ್ಷೇಪ ಮಾಡುವವರಿಗೆ ನನ್ನ ಉತ್ತರವೇನೆಂದರೆ, ಭಾಷಾಗಣತಿಯ ಸಂಪುಟಗಳನ್ನೋ, ನಮ್ಮ ಕೆಲಸವನ್ನೋ ಬಯ್ಯಬೇಡಿ. ಆಕ್ಷೇಪ ಬೈಗುಳಗಳು ನನ್ನ ಮೇಲಿರಲಿ. ಅವನ್ನು ಸ್ವೀಕರಿಸಲು ನಾನು ಸಿದ್ಧನಿದ್ದೇನೆ.

ಪಿಎಸ್‌ಎಲ್‌ಐನ ಮುಖ್ಯಾಂಶಗಳನ್ನು ಚುಟುಕಾಗಿ ಹೇಳಲು ಸಾಧ್ಯವೆ?

ಪಿಎಸ್‌ಎಲ್‌ಐನ ಮುಖ್ಯ ಸಂಗತಿಯೆಂದರೆ ಅದು ಸ್ವತಂತ್ರ ಭಾರತದಲ್ಲಿ ಸರ್ಕಾರದ ಯಾವುದೇ ಬೆಂಬಲವಿಲ್ಲದೆ ಸ್ವತಂತ್ರವಾಗಿ ಕೈಗೊಂಡ ಮೊದಲ ಭಾಷಾಗಣತಿಯಾಗಿದೆ. ಇದು ಭಾರತದಲ್ಲಿ ೭೮೦ ಭಾಷೆಗಳನ್ನು ಗುರುತಿಸಿದೆ. ಅವುಗಳಲ್ಲಿ ಸುಮಾರು ೩೦೦ ಭಾಷೆಗಳ ಕುರಿತು ತಮ್ಮ ಸಮುದಾಯಗಳ ಹೊರಗೆ ತಿಳಿದೇ ಇರಲಿಲ್ಲ. ಗುರುತಿಸದೇ ಉಳಿದಿರುವ ಇನ್ನೂ ೧೦೦ ಭಾಷೆಗಳು ಇರಬಹುದು ಎಂಬ ಅಂದಾಜು ಇದೆ. ೨೨೦ ಭಾಷೆಗಳು ಕಳೆದ ನಾಲ್ಕೈದು ದಶಕಗಳಲ್ಲಿ ಕಣ್ಮರೆಯಾಗಿವೆ. ೨೦೨೦ರ ವೇಳೆಗೆ ಭಾರತೀಯ ಭಾಷೆಗಳ ಕುರಿತು ೫೦ ಸಂಪುಟಗಳ ೯೨ ಪುಸ್ತಕಗಳು ಒಟ್ಟು ಅಂದಾಜು ೩೫೦೦೦ ಪುಟಗಳಷ್ಟು ಮಾಹಿತಿ ದೊರೆಯಲಿದೆ.


ಸದ್ಯ ನೀವು ಗ್ಲೋಬಲ್ ಲಾಂಗ್ವೇಜ್ ಸ್ಟೇಟಸ್ ರಿಪೋರ್ಟ್ ಎಂಬ ಜಾಗತಿಕ ಮಟ್ಟದ ಭಾಷಾ ಸಮೀಕ್ಷೆಯಲ್ಲಿ ತೊಡಗಿಸಿಕೊಂಡಿದ್ದೀರಿ. ಈ ಕುರಿತು ಹೇಳಿ.

ಗ್ಲೋಬಲ್ ಲಾಂಗ್ವೇಜ್ ಸ್ಟೇಟಸ್ ರಿಪೋರ್ಟ್(ಜಿಎಲ್‌ಎಸ್‌ಆರ್)ನ ಹೆಸರೇ ಸೂಚಿಸುವಂತೆ ಅದು ಪ್ರಪಂಚದಾದ್ಯಂತ ಬಳಕೆಯಲ್ಲಿರುವ ಬುಡಕಟ್ಟು ಭಾಷೆಗಳ ಸ್ಥಿತಿಗತಿಗಳ ದಾಖಲೀಕರಣದ ಪ್ರಕ್ರಿಯೆ. ಇದು ಪ್ರಪಂಚದಾದ್ಯಂತ ಒಟ್ಟು ೬೦೦೦೦ ಜೀವಂತ ಭಾಷೆಗಳ ಸದ್ಯದ ಸ್ಥಿತಿಯನ್ನು ಸಮೀಕ್ಷೆ ಮಾಡಿ ಅವುಗಳ ಭವಿಷ್ಯವನ್ನು ಕುರಿತು ವಿವರಿಸಲಿದೆ. ಚುಟುಕಾಗಿ ಹೇಳುವುದಾದರೆ ಭಾಷೆಗಳ ಜಾತಕವನ್ನು ನೋಡುವುದೇ ಇದರ ಉದ್ದೇಶ. ಪಿಎಸ್‌ಎಲ್‌ಐ ಭಾಷೆಗಳ ವರ್ತಮಾನವನ್ನು ಕುರಿತಾಗಿದ್ದರೆ, ಜಿಎಲ್‌ಎಸ್‌ಆರ್ ಭವಿಷ್ಯದ ಕುರಿತಾಗಿದೆ. ನಮ್ಮ ಸಮಾಜ ನಿಧಾನವಾಗಿ ಭಾಷೆಗಳನ್ನೂ ಮೀರಿದ ಸ್ಥಿತಿಯ ಕಡೆಗೆ ಸರಿಯುತ್ತಿದೆ. ಭವಿಷ್ಯದಲ್ಲಿ ಮನುಷ್ಯ ಸಮಾಜ ಭಾಷೆಗಳಿಗೂ ಆಚೆ, ಸಂವಹನವನ್ನು ಕೇವಲ ಚಿತ್ರಗಳ (ಇಮೇಜ್) ಮೂಲಕ ಹೇಗೆ ನಡೆಸಬಹುದು. ಭಾಷೆಗಳಿಲ್ಲದ ಸಮಾಜದಲ್ಲಿ ಸಂವಹನ ಹೇಗೆ ನಡೆಯಬಹುದು ಎಂಬುದರ ಬಗ್ಗೆ ಅದು ಚರ್ಚೆ ನಡೆಸಲಿದೆ.

ನೀವು ಪ್ರಮಾಣ ಭಾಷೆ(ಸ್ಟ್ಯಾಂಡರ್ಡ್ ಲಾಂಗ್ವೇಜ್) ಹಾಗೂ ಉಪಭಾಷೆಗಳ(ಡಯಲೆಕ್ಟ್) ನಡುವಿನ ವ್ಯತ್ಯಾಸಗಳನ್ನು ಒಪ್ಪುವುದಿಲ್ಲ. ಆ ಬಗೆಯ ವರ್ಗೀಕರಣಗಳೇ ಅರ್ಥಹೀನ ಎನ್ನುತ್ತಾ ಮುಖ್ಯಭಾಷೆಯೆಂಬ ನದಿಯ ಪಾತ್ರದ ಕಡೆ ಹರಿದು ಬರುವ ಹಲವು ತೊರೆಗಳೇ ಉಪಭಾಷೆಗಳು ಎಂದು ವಿವರಿಸುತ್ತೀರಿ. ಈ ರೀತಿಯ ವರ್ಗೀಕರಣಗಳು ಆಧುನಿಕಪೂರ್ವ ಯುಗದಲ್ಲಿ ಇರಲಿಲ್ಲ ಎನ್ನುತ್ತೀರಿ. ಹಾಗಾದರೆ ಈ ಬಗೆಯ ವರ್ಗೀಕರಣ/ಶ್ರೇಣೀಕರಣಗಳು ಚಾಲ್ತಿಗೆ ಬಂದದ್ದು ಹೇಗೆ?

೧೮೪೨ರಲ್ಲಿ ಇಂಗ್ಲೆಂಡಿನಲ್ಲಿ ಚಾರಿಟೀಸ್ ಮೂವ್‌ಮೆಂಟ್ ಎಂಬ ಚಳವಳಿಯೊಂದು ನಡೆಯಿತು. ಅದು ಮುಖ್ಯವಾಗಿ ದಿನಪೂರ್ತಿ ಕೆಲಸಕ್ಕೆ ದಿನಪೂರ್ತಿ ಕೂಲಿಯನ್ನು ನೀಡಬೇಕೆಂದು ಬಡಜನರು ನಡೆಸಿದ ಚಳವಳಿಯಾಗಿತ್ತು. ಇದರ ನಂತರ ಬ್ರಿಟಿಷ್ ಸರ್ಕಾರವು ಚಳವಳಿಯಲ್ಲಿ ಭಾಗವಹಿಸಿದವರಿಗೆ ಶಿಕ್ಷೆ ನೀಡಲು ಮುಂದಾಯಿತು. ಶಿಕ್ಷೆಯ ಭಾಗವಾಗಿ ಚಳವಳಿಯಲ್ಲಿ ಭಾಗವಹಿಸಿದವರ ಮಕ್ಕಳಿಗೆ ಇಂಗ್ಲಿಶ್‌ಅನ್ನು ಒಂದು ವಿಷಯವಾಗಿ ಕಲಿಸಲು ನಿರ್ಧಾರ ಮಾಡಿತು. ಆಗ ಲ್ಯಾಟಿನ್‌ಅನ್ನು ಮಾತ್ರ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು. ಇಂಗ್ಲಿಶನ್ನು ವಿಷಯವಾಗಿ ಕಲಿಸಲು ಶುರುಮಾಡಿದಾಗ ಇಂಗ್ಲೆಂಡಿನಲ್ಲಿ ಯಾವ ಇಂಗ್ಲಿಶನ್ನು ಕಲಿಸಬೇಕು ಎಂಬ ಬಗ್ಗೆ ಚರ್ಚೆ ಶುರುವಾಯಿತು. ಯಾಕೆಂದರೆ ಅಲ್ಲಿನ ಮಕ್ಕಳು ತಂತಮ್ಮ ಪ್ರಾಂತೀಯ ಭಾಷೆಗಳಲ್ಲಿ ಮಾತಾಡುತ್ತಿದ್ದರು. ಹಾಗಾಗಿ ೧೮೫೦, ೬೦, ೭೦ರ ದಶಕಗಳಲ್ಲಿ ಸುಮಾರು ೩೦ ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ಸುದೀರ್ಘ ಚರ್ಚೆ ನಡೆದು ಸ್ಟ್ಯಾಂಡರ್ಡ್ ಇಂಗ್ಲಿಶ್ ಎಂಬ ಒಂದು ಪ್ರಮಾಣೀಕೃತ ಭಾಷೆ, ಹಾಗೆಯೇ ಉಳಿದವನ್ನು ಉಪಭಾಷೆಗಳು ಎಂದು ನಿರ್ಧರಿಸಲಾಯಿತು. ಹಾಗಾಗಿ ಇಂಗ್ಲೆಂಡಿನಲ್ಲಿ ಉಪಭಾಷೆಗಳು/ಪ್ರಾಂತೀಯ ಭಾಷೆಗಳ ವಿಚಾರ ಚಾಲ್ತಿಗೆ ಬಂದಿದ್ದು-೧೮೭೦ರಲ್ಲಿ ಸಾಮಾಜಿಕ ಚಳುವಳಿಗಳ ಮೂಲಕ. ಇದರ ತರುವಾಯ ನಮ್ಮ ದೇಶದಲ್ಲಿ ಏನಾಯಿತು ಎಂದರೆ, ಇಂಗ್ಲಿಶನ್ನು ಹೊರತು ಪಡಿಸಿದ ದೇಶೀಯ ಭಾಷೆಗಳಿಗೆ ವರ್ನಾಕ್ಯುಲರ್ಸ್ ಎಂಬ ಲ್ಯಾಟಿನ್ ಪಾರಿಭಾಷಿಕ ಶಬ್ದವನ್ನು ಬಳಸಲಾಯಿತು. ನಾನು ೭ನೇ ತರಗತಿಯ ಪರೀಕ್ಷೆಯನ್ನು ಬರೆದಾಗ ಈ ಪರೀಕ್ಷೆಯನ್ನು ನಡೆಸುವ ಸಂಸ್ಥೆಯನ್ನು ವರ್ನಾಕ್ಯುಲರ್ ಬೋರ್ಡ್ ಎಂದು ಕರೆಯಲಾಗುತ್ತಿತ್ತು. ಮೂಲತಃ ಈ ವರ್ನಾಕ್ಯುಲರ್ ಎಂಬುದೇ ನಿಂದನೆಯ ಅರ್ಥವನ್ನು ಕೊಡುವ ಶಬ್ದವಾಗಿದ್ದು ಲ್ಯಾಟಿನ್‌ಅನ್ನು ಮಾತನಾಡಲು ಬರದ ಅನಾಗರಿಕ ಸಮುದಾಯಗಳನ್ನು ಕುರಿತು ಈ ಪದವನ್ನು ಬಳಸಲಾಗುತ್ತಿತ್ತು. ಈ ವಿಚಾರ ಚರ್ಚೆಗೆ ಬಂದಾಗ ಭಾಷೆಗಳನ್ನು ಕುರಿತು ವ್ಯವಹರಿಸುವ ಹಲವು ಸಂಸ್ಥೆಗಳು ಬ್ರಿಟಿಶ್ ಪರಿಕಲ್ಪನೆಯನ್ನೇ ಅನುಸರಿಸಿ ಲಿಪಿಯಿಲ್ಲದ ಭಾಷೆಗಳು ಉಪಭಾಷೆಗಳೇ ಇರಬಹುದು ಎಂದುಕೊಂಡು ಇಲ್ಲಿಯೂ ಇದೇ ಪಾರಿಭಾಷಿಕದ ಮೂಲಕ ವಿವರಿಸುವ ಪರಿಪಾಠ ಶುರುವಾಯಿತು. ಕನ್ನಡದ ಹಲವು ವಿವಿಧ ಭಾಷಾರೂಪಗಳನ್ನು ಉಪಭಾಷೆಗಳು ಎಂದು ಕರೆಯಲಾಯಿತು. ಲಿಪಿಯಿಲ್ಲದ, ಬರಹದಲ್ಲಿ ದೊರಕದ ಗೌಳಿಗಳು ಅಥವಾ ಸಿದ್ದಿಗಳ ಭಾಷೆಗಳನ್ನು ಉಪಭಾಷೆಗಳು ಎಂದು ಕರೆಯಲು ಸಾಧ್ಯವಿಲ್ಲ. ಸುಮಾರು ೪೦-೫೦ವರ್ಷಗಳಿಂದ ಭಾರತದಲ್ಲಿ ೨೨ ಭಾಷೆಗಳನ್ನು ಪ್ರಮುಖಭಾಷೆಗಳೆಂದು/ಶೆಡ್ಯೂಲ್ಡ್ ಭಾಷೆಗಳೆಂದು ಕರೆದು ಉಳಿದವನ್ನೆಲ್ಲ ಉಪಭಾಷೆಗಳು ಎಂದು ಕರೆಯಲಾಗಿದೆ. ನಾನು ಬರಹದಲ್ಲಿಲ್ಲದ ಭಾಷೆಯನ್ನು ಉಪಭಾಷೆಯೆಂದು ವರ್ಗೀಕರಿಸುವ ಕ್ರಮವನ್ನೇ ಬಲವಾಗಿ ವಿರೋಧಿಸುತ್ತೇನೆ. ಅವುಗಳನ್ನು ನಾವು ಉಪಭಾಷೆಗಳು ಎಂದು ಕರೆಯದೆ ಭಾಷೆಗಳು ಎಂದು ಕರೆಯಬೇಕು. ಪಿಎಸ್‌ಎಲ್‌ಐನಲ್ಲಿ ಇದನ್ನು ಹೇಗೆ ವ್ಯಾಖ್ಯಾನಿದ್ದೇವೆ ಎಂದರೆ, ಯಾವ ಭಾಷೆಗೆ ತನ್ನದೇ ಆದ ವ್ಯಾಕರಣವಿದೆಯೋ ಅದು-ಲಿಪಿಯಿರಲಿ ಇಲ್ಲದಿರಲಿ-ಸ್ವತಂತ್ರ ಭಾಷೆಯೇ. ಗಮನಿಸಬೇಕಾದ ಸಂಗತಿಯೆಂದರೆ ಇಂಗ್ಲಿಶಿಗೆ ಇವತ್ತಿಗೂ ತನ್ನದೇ ಆದ ಲಿಪಿಯಿಲ್ಲ. ಅದು ರೋಮನ್ ಲಿಪಿಯನ್ನು ಬಳಸಿದರೂ ಅದನ್ನು ಪ್ರಮಾಣೀಕೃತ ಭಾಷೆಯೆಂದು ಪರಿಗಣಿಸಿರುವಾಗ, ನಮ್ಮಲ್ಲಿರುವ ಹಲವು ಭಾಷೆಗಳಿಗೆ ಯಾಕೆ ಇದೇ ಮಾನದಂಡವನ್ನು ಬಳಸಬಾರದು?

ಮರಾಠಿ ಹಾಗೂ ಕನ್ನಡಗಳು ಹಲವು ಉಪಭಾಷೆಗಳನ್ನು ಹೊಂದಿವೆ. ಹಾಗೆಯೇ ತೆಲುಗು ಸಹ. ಮೌಖಿಕವಾಗಿ ಬಳಕೆಯಲ್ಲಿರುವ ಭಾಷೆಗಳೆಲ್ಲ



ಭಾಷೆಗಳು ಹುಟ್ಟುವ ಸಂದರ್ಭ ಎಂತಹದು? ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ನಮ್ಮ ಈ ಆಧುನಿಕ ಯುಗದಲ್ಲಿ ಭಾಷೆಗಳು ಹುಟ್ಟುವ ಸಾಧ್ಯತೆಯಿದೆಯೆ? ಇಲ್ಲವಾದರೆ ಯಾಕೆ?

ಭಾಷೆಗಳು ಬಹಳ ದೀರ್ಘವಾದ ಅವಧಿಯಲ್ಲಿ ನಿಧಾನಕ್ಕೆ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ನಂತರ ಸಮಾಜದಲ್ಲಿ ಚಾಲ್ತಿಗೆ ಬಂದು ಭಾಷೆ ಎಂದೋ ಹೊಸ ಭಾಷೆ ಎಂದೋ ಗುರುತಿಸಲ್ಪಡುತ್ತವೆ. ಸಮುದಾಯಗಳು ತಮ್ಮ ಜೀವನೋಪಾಯಕ್ಕೆ ಹೊಸಮಾರ್ಗಗಳನ್ನು ಹೊಸ ಪ್ರದೇಶಗಳನ್ನು ಹುಡುಕಿಕೊಳ್ಳುವ ಕಾರಣದಿಂದ ಭಾಷೆಗಳು ನಿಧಾನವಾಗಿ ರೂಪುಗೊಳ್ಳುತ್ತವೆ. ಸಮುದಾಯಗಳು ತೊಡಗಿಕೊಂಡಿರುವ ದುಡಿಮೆಯ ವಿಧಾನಗಳು ಮತ್ತು ಬಳಕೆಯಲ್ಲಿರುವ ಪದಸಂಪತ್ತು ಇವುಗಳ ನಡುವಿನ ಅಂತರ ಹೆಚ್ಚಾದ ಹಾಗೆ ಶಬ್ದಕೋಶವನ್ನು ಹಿಗ್ಗಿಸುವ ಅನಿವಾರ್ಯತೆ ಉಂಟಾಗುತ್ತದೆ. ಕಳೆದ ಎರಡು ಶತಮಾನಗಳಲ್ಲಿ ಪ್ರಪಂಚದಲ್ಲಿ ಅನೇಕ ಹೊಸ ಭಾಷೆಗಳು ಹುಟ್ಟಿವೆ. ಉದಾಹರಣೆಗೆ ದಕ್ಷಿಣ ಮತ್ತು ಪೂರ್ವ ಆಫ್ರಿಕಾ ಖಂಡದಲ್ಲಿ ಆಫ್ರಿಕಾನ್ಸ್, ನಾಗಾಲ್ಯಾಂಡ್‌ನಲ್ಲಿ ನಾಗಮೀಸ್(ಎರಡು ಭಾಷೆಗಳೂ ಸಹ, ಬಹು ದೊಡ್ಡ ಭಾಷಾ ಸಮೂಹಗಳಿಗೆ ಸಂಪರ್ಕಭಾಷೆಗಳಾಗಿದ್ದವು) ಸಂಜ್ಞಾ ಭಾಷೆ(ಕಿವಿ ಕೇಳದವರಿಗಾಗಿ), ಯಂತ್ರ ಭಾಷೆ(ಕಂಪ್ಯೂಟರ್‌ಗಳಿಗಾಗಿ), ಸ್ವತಂತ್ರ ಭಾಷೆಯಾದ ಕೊಂಕಣಿ(ಮೊದಲು ಕನ್ನಡ ಮರಾಠಿಗಳ ವಿಸ್ತರಣೆಯಾಗಿತ್ತು) ಮೊದಲಾದವು.

ಭಾಷೆಗಳು ಹೇಗೆ ಬೆಳೆಯುತ್ತವೆ? ಭಾಷೆಗಳ ವಿಕಾಸಕ್ಕೆ ಪೂರಕವಾದ ಕಾರಣಗಳೇನು?

ಭಾಷೆಗಳ ಬೆಳವಣಿಗೆಯನ್ನು ಕೇವಲ ಅವುಗಳನ್ನು ಆಡುವವವರ ಸಂಖ್ಯೆಯ ಆಧಾರದಮೇಲೆ ನಿರ್ಧರಿಸಲು ಸಾಧ್ಯವಿಲ್ಲ. ಅದನ್ನು ಭಾಷೆಯಲ್ಲಿ ಎದ್ದುಕಾಣುವ ಶಬ್ದಾರ್ಥವ್ಯಾಪ್ತಿ, ಸಮಾನ ಹಾಗೂ ವಿರುದ್ಧ ಪದಗಳ ವೈವಿಧ್ಯ, ಮತ್ತು ಅದರ ಧಾರಣ ಶಕ್ತಿಗಳ ಆಧಾರದ ಮೇಲೆ ನಿರ್ಧರಿಸಬಹುದು.ಭಾಷೆಯ ಅಸ್ತಿತ್ವವಿರುವುದು 'ಅದು ಹೇಗಿದೆ' ಎಂಬುದನ್ನು ಅವಲಂಬಿಸಿದೆಯೇ ವಿನಾ ಕೇವಲ ಅದನ್ನು 'ಯಾರು ಬಳಸುತ್ತಾರೆ' ಎಂಬುದರ ಮೇಲಲ್ಲ. ಭಾಷೆಯ ಬೆಳವಣಿಗೆಗೆ ಪೂರಕವಾಗಿರುವ ಇತರ ಅಂಶಗಳೆಂದರೆ 1. ಭಾಷೆಯನ್ನು ಬಳಸುವವರು ಸೇರಿಸುವ ಹೊಸ ಶಬ್ದಗಳು, ಶೈಲಿಗಳು, ರೂಪಗಳು, ಸಂಕೇತ, ಪ್ರತಿಮೆಗಳು, ಸಂಕೀರ್ಣ ಅರ್ಥಗಳು 2. ಬೇರೆ ಭಾಷೆಗಳಿಂದ ಹರಿದುಬರುವ ಪದಗಳು, ನುಡಿಗಟ್ಟುಗಳು 3. ಭಾಷೆಯನ್ನು ಬಳಸುವವರಿಗೆ ಆ ಭಾಷೆಯಲ್ಲಿಯೇ ಸಿಗುವ ಉದ್ಯೋಗ– ಜೀವನೋಪಾಯದ ಕ್ರಮಗಳು.

ಸರ್ಕಾರಗಳು ಯಾವ ಬಗೆಯ ಭಾಷಾನೀತಿಯನ್ನು ಅಳವಡಿಸಿಕೊಳ್ಳಬೇಕು?

ಯಾವುದೇ ಭಾರತೀಯ ಭಾಷೆಗಳನ್ನು ಕಡೆಗಣಿಸದೆ, ಗರಿಷ್ಠ ಪ್ರಮಾಣದ ಭಾಷೆಗಳಿಗೆ ಗರಿಷ್ಠ ರಕ್ಷಣೆ.

ಯಾವುದೋ ಭಾಷೆಯ ಉಪಭಾಷೆಗಳಲ್ಲ. ಇತ್ತೀಚಿನವರೆಗೆ ಕೊಂಕಣಿಯನ್ನು ಮರಾಠಿಯ ಅಥವಾ ಕನ್ನಡದ ಉಪಭಾಷೆಯೆಂದು ಕರೆಯಲಾಗುತ್ತಿತ್ತು. ಆದರೆ ಅದೀಗ ಒಂದು ರಾಜ್ಯದ ಭಾಷೆಯಾಗಿರುವ ಕಾರಣದಿಂದ ಸ್ವತಂತ್ರ ಭಾಷೆಯೆಂದು ಪರಿಗಣಿಸಲಾಗಿದೆ. ೧೯ನೇ ಶತಮಾನದ ಉದ್ದಕ್ಕೂ ಒರಿಯಾ ಭಾಷೆಯನ್ನು ಬಂಗಾಳಿಯ ಉಪಭಾಷೆಯೆಂದು ಪರಿಗಣಿಸಲಾಗುತ್ತಿತ್ತು, ಅದೀಗ ಸ್ವತಂತ್ರ ಭಾಷೆಯ ಅಸ್ತಿತ್ವ ಪಡೆದಿದೆ. ಆದ್ದರಿಂದ ಯಾವ ಭಾಷೆಗೆ ತನ್ನದೇ ಆದ ವ್ಯಾಕರಣ, ಸಮುದಾಯಗಳಿವೆಯೋ ಅಂಥವುಗಳನ್ನು ಭಾಷೆಗಳೆಂದು ಪರಿಗಣಿಸಬೇಕು.

ಒಂದು ದಿನ ನೀವು ಏನನ್ನೋ ಓದುತ್ತ ಇರುವಾಗ, ದ್ರಾವಿಡ ಭಾಷೆಗಳು ಇಂಡೋ ಆರ್ಯನ್ ಭಾಷೆಗಳ ಸಮೂಹದಿಂದ ಭಿನ್ನವಾಗಿ ಉಳಿಯುತ್ತವೆ ಎಂದು ಇದ್ದಕ್ಕಿದ್ದಂತೆ ಹೊಳೆಯಿತು ಎಂದು ಎಲ್ಲೋ ಒಂದು ಕಡೆ ಬರೆದಿದ್ದೀರಿ. ಆ ಸಂದರ್ಭವನ್ನು ನೆನಪಿಸಿಕೊಳ್ಳಲು ಸಾಧ್ಯವೇ?


೧೯೭೭ರಲ್ಲಿ ಅಥವಾ ಅದಕ್ಕಿಂತ ಒಂದು ವರ್ಷ ಹಿಂದೆ, ಆರ್.ಸಿ. ನಿಗಮ್ ಎಂಬುವವರು ಒಂದು ಪುಟ್ಟ ವರದಿಯನ್ನು ಪ್ರಕಟಿಸಿದರು. ಆರ್.ಸಿ. ನಿಗಮ್ ಅವರು ೧೯೭೧ರ ಸಮೀಕ್ಷೆಯಲ್ಲಿ ಭಾಷೆಗಳ ಕುರಿತ ಅಂಕಿ–ಅಂಶಗಳನ್ನು ಪ್ರಕಟಿಸುವ ಕಾರ್ಯನಿರ್ವಹಿಸುತ್ತಿದ್ದರು. ಅದರಲ್ಲಿ ಪಟ್ಟಿ ಮಾಡಿದ ಭಾಷೆಗಳ ಅಂಕಿ ಸಂಖ್ಯೆಗಳು ಗಣನೀಯವಾಗಿ ಕಡಿಮೆಯಾಗಿದ್ದನ್ನು ನಾನು ಗಮನಿಸಿದೆ. ಆ ಭಾಷೆಗಳು ಎಲ್ಲಿ ಹೋದವು ಎಂಬುದನ್ನು ತಿಳಿದುಕೊಳ್ಳಬೇಕೆಂಬ ತೀವ್ರ ಕುತೂಹಲ ನನ್ನಲ್ಲಿ ಉಂಟಾಯಿತು. ಈ ವರದಿಯನ್ನು ನಾನು ೧೯೭೭ರಲ್ಲಿ ಶಿವಾಜಿ ವಿಶ್ವವಿದ್ಯಾಲಯದ ರೆಫರೆನ್ಸ್ ವಿಭಾಗದಲ್ಲಿ ಕೂತು ಓದಿದಾಗ, ನಾನು ಭಾರತದ ಭೂಪಟವೊಂದನ್ನು ಅಲ್ಲಿಯೇ ಬರೆದೆ. ಭಾಷೆಗಳ ಕುರಿತು ಆಗ ನನಗೆ ಯಾವುದೇ ಜ್ಞಾನವಿರಲಿಲ್ಲ. ನನಗಿದ್ದ ಸೀಮಿತ ತಿಳುವಳಿಕೆಯ ಆಧಾರದ ಮೇಲೆ ಆ ಭೂಪಟದ ಮೇಲೆ ಎಲ್ಲೆಲ್ಲಿ ಭಾಷೆಗಳ ಸಾಂದ್ರತೆ ಹೆಚ್ಚಾಗಿದೆಯೋ ಅಲ್ಲಲ್ಲಿ ಗುರುತುಗಳನ್ನು ಮಾಡಿದೆ. ಆಶ್ಚರ್ಯವೆಂದರೆ ದಕ್ಷಿಣದಲ್ಲಿ ಇಂಥ ಗುರುತುಗಳು ಹೆಚ್ಚಾಗಿದ್ದು ಒಂದು ಉದ್ದನೆಯ ಪಟ್ಟಿಯಂತೆ ಕಾಣುವ ನಿರ್ದಿಷ್ಟ ಭಾಗದಲ್ಲಿ–ಸೂರತ್‌ನಿಂದ ಆರಂಭಿಸಿ ಹೌರಾದವರೆಗೆ–ಆ ಭಾಗದಿಂದ ೩೦೦ರಿಂದ ೪೦೦ ಕಿಲೋಮೀಟರ್ ಉತ್ತರಕ್ಕೆ ಮತ್ತು ೩೦೦–೪೦೦ ಕಿಮೀ ದಕ್ಷಿಣಕ್ಕೆ ಸರಿಯಾಗಿ ಭಾರತದ ಧ್ವಜದ ನಡುವೆ ಇರುವ ಪಟ್ಟಿಯಂತಿರುವ ಭಾಗದಲ್ಲಿ ಖಾಲಿ ಜಾಗವೊಂದು ಇರುವುದನ್ನು ಗಮನಿಸಿದೆ. ಭಾರತದ ಧ್ವಜದಲ್ಲಿರುವ ಹಾಗೆ ಉತ್ತರ ದಕ್ಷಿಣದ ಎರಡೂ ಕಡೆಗಳಲ್ಲಿ ಭಾಷೆಗಳು ಇಡಿಕಿರಿದು ತುಂಬಿದಂತೆ ಕಾಣಿಸಿದರೆ ನಡುವಿನ ಭಾಗ ಖಾಲಿಯಾಗಿತ್ತು. ಇದೆಲ್ಲವೂ ನನಗೆ ಸರಿಯಾಗಿ ಅರ್ಥವಾಗಲು ಎರಡು ಮೂರು ದಿನಗಳು ಬೇಕಾದವು. ಮಧ್ಯದಲ್ಲಿ ಇಷ್ಟು ಖಾಲಿ ಜಾಗ ಹೇಗೆ ಉಂಟಾಯಿತು? ಯಾಕೆ ಉತ್ತರದಲ್ಲಿ ಇಂಡೋಆರ್ಯನ್ ಭಾಷೆಗಳು, ದಕ್ಷಿಣದಲ್ಲಿ ದ್ರಾವಿಡ ಭಾಷೆಗಳು ಹೇಗೆ ಇಡಿಕಿರಿದವು?

ಈ ಕಾರಣದಿಂದಲೇ ಭಾಷಾಕುಟುಂಬಗಳ ಆಧಾರದಲ್ಲಿ ಭಾಷೆಗಳನ್ನು ವರ್ಗೀಕರಿಸುವ ಕ್ರಮದ ಬಗ್ಗೆ ನನಗೆ ಬಹಳ ವಿರೋಧವಿದೆ. ಇದನ್ನು ವಿವರಿಸಲು ನನಗೆ ಹೆಚ್ಚು ಸಮಯವಿಲ್ಲ. ಈ ಎರಡು ಭಾಷಾ ಕುಟುಂಬಗಳು ಸಾವಿರಾರು ವರ್ಷಗಳ ಸಾಂಸ್ಕೃತಿಕ ಒಡನಾಟದ ಹೊರತಾಗಿಯೂ ಯಾಕೆ ಒಂದಾಗಲಿಲ್ಲ ಎಂಬ ಪ್ರಶ್ನೆ ಎದುರಾಯಿತು. ಆಗ ನನಗೆ ಮಿಂಚಿನಂತೆ ಹೊಳೆದಿದ್ದೇನೆಂದರೆ, ಮಧ್ಯೆ ಭಾಷಿಕವಾಗಿ ಖಾಲಿಯಾಗಿ ಕಾಣುವ ಇಂಡಿಯಾ, ಬುಡಕಟ್ಟು ಸಮುದಾಯಗಳು ಬದುಕುತ್ತಿದ್ದ ಇಂಡಿಯಾ, ಇವೆರಡೂ ಭಾಷಾ ಕುಟುಂಬಗಳು ದೂರ ದೂರ ಇರುವಂತೆ ಮಾಡಿತು. ಇದು ನನ್ನಲ್ಲಿ ಬುಡಕಟ್ಟು ಭಾಷೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಪ್ರೇರೇಪಿಸಿತು. ಈ ಸಮುದಾಯಗಳು ಎರಡು ಭಾಷಾ ಕುಟುಂಬಗಳನ್ನು ದೂರವಿರಿಸಿದ್ದು ನಿಜವೇ ಆದರೆ ಅಲ್ಲಿನ ಜನ ಆಡುವ ಭಾಷೆಗಳು ಯಾವುವು? ಅವರು ಆಡುವುದು ದ್ರಾವಿಡ ಭಾಷೆಗಳನ್ನೋ, ಇಂಡೋ ಆರ್ಯನ್ ಭಾಷೆಗಳನ್ನೋ? ಅವರಾಡುವ ಭಾಷೆಗಳ ಬಗ್ಗೆ ನಮಗೆ ಯಾಕೆ ಏನೂ ತಿಳಿದಿಲ್ಲ? ಹಾಗಾಗಿಯೇ ಮೂರು ವರ್ಷಗಳ ನಂತರ ೧೯೮೦ರಲ್ಲಿ ನಾನು ಬರೋಡಾಕ್ಕೆ ಉಪನ್ಯಾಸಕನಾಗಿ ಹೋದಾಗ ಸ್ಕೂಟರ್ ತೆಗೆದುಕೊಂಡು ಬುಡಕಟ್ಟುಗಳು ಅವರ ಭಾಷೆಗಳ ಬಗ್ಗೆ ಅರಿತುಕೊಳ್ಳಲು ಆರಂಭಿಸಿದೆ.

ಮಾತಿನ ನಡುವೆ, ಭಾಷೆಗಳನ್ನು ಇಂಡೋ ಆರ್ಯನ್ ಭಾಷೆಗಳೆಂದು ವರ್ಗೀಕರಿಸುವ ಕ್ರಮದ ಬಗ್ಗೆ ನಿಮಗೆ ತಕರಾರು ಇದೆ ಎಂದಿರಿ. ಅದನ್ನು ವಿವರಿಸಿ.

ದ್ರಾವಿಡ ಭಾಷೆಗಳ ವರ್ಗೀಕರಣವನ್ನು ಪ್ರೊ.ಎಲಿಸ್ ಅವರು ತಮಗೆ ತಿಳಿದ ಭಾಷಾಶಾಸ್ತ್ರದ ಆಧಾರದ ಮೇಲೆ ಮಾಡಿದರು. ಅದು ಆಗಿನ ಕಾಲಕ್ಕೆ ಸರಿಯಿರಬಹುದು. ಮುಖ್ಯವಾಗಿ ಅವರು ವಿಲಿಯಮ್ ಜೋನ್ಸ್ ಅವರು ಮಾಡಿದ ಇಂಡೋ ಆರ್ಯನ್ ಭಾಷಾ ಕುಟುಂಬಗಳ ವರ್ಗೀಕರಣಕ್ಕೆ ಪ್ರತಿಕ್ರಿಯೆಯಾಗಿ ಇಂಥದೊಂದು ವಾದವನ್ನು ಮಂಡಿಸಿದ್ದರು. ಆದರೆ ಎಲಿಸ್ ಅವರಾಗಲೀ ಜೋನ್ಸ್ ಅವರಾಗಲೀ ಇಂಡೋ ಆರ್ಯನ್ ಹಾಗೂ ದ್ರಾವಿಡ ಭಾಷಾ ಕುಟುಂಬಗಳೆರಡಕ್ಕೂ ಸೇರಿದ ಮರಾಠಿ ಮತ್ತು ಒರಿಯಾದಂಥ ಭಾಷೆಗಳ ರಚನೆಗಳನ್ನು ವಿವರಿಸಲು ಅಸಮರ್ಥರಾಗಿದ್ದಾರೆ.

ಮೇಲಾಗಿ ಭಾಷೆಗಳನ್ನು ಕುಟುಂಬಗಳನ್ನಾಗಿ ವರ್ಗೀಕರಿಸುವ ಕ್ರಮ ಯೂರೋಪಿನಲ್ಲಿ ವಸ್ತುಗಳನ್ನು ವರ್ಗೀಕರಿಸುವ ಕ್ರಮವನ್ನು ಆಧರಿಸಿದೆ. ಈ ಕ್ರಮ ಸುಮಾರು ಎರಡು ಶತಮಾನಗಳಷ್ಟು ಹಳೆಯದು. ಈ ಬಗೆಯ ವರ್ಗೀಕರಣದ ಹಿಂದಿರುವ ಮೂಲಕಲ್ಪನೆಯನ್ನೇ, ಹಲವು ಬಗೆಗಳಲ್ಲಿ ಮರುವಿಮರ್ಶೆ ಮಾಡಬೇಕು. ಡೇವಿಡ್ ಡಾಲ್ಬಿಯವರು ಹೇಳುವ ಮನುಷ್ಯರು ಬಳಸುವ ಎಲ್ಲಾ ಭಾಷೆಗಳನ್ನು ಒಳಗೊಳ್ಳುವ 'ಭಾಷಾ ಪರಿಸರ' ('ಅಟ್ಮಾಸ್ಫಿಯರ್' ನಂತೆ 'ಲಿಂಗ್ವಾಸ್ಫಿಯರ್')ವನ್ನು ಆಧರಿಸಿ ನಾನು ಇಂಥ ಒಂದು ಪ್ರಯತ್ನವನ್ನು ಮಾಡಿದ್ದೆ. ಅದರ ಬಗ್ಗೆ ಇನ್ನೊಮ್ಮೆ ವಿವರವಾಗಿ ಮಾತಾಡೋಣ. **(ಮುಂದಿನ ಸಂಚಿಕೆಗೆ)**



(ಸಂದರ್ಶಕ ಎಸ್. ಸಿರಾಜ್ ಅಹಮದ್ ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರು ಮತ್ತು ಭರವಸೆಯ ಸಾಹಿತ್ಯ–ಸಂಸ್ಕೃತಿ ಚಿಂತಕರು)

ಧರ್ಮ ವಿಚಾರ ಪುಟ

ಲೋಕಧರ್ಮಿ ಕನ್‌ಫ್ಯೂಷಿಯಸ್



ಇಡೀ ಜಗತ್ತು, ವಿಶೇಷವಾಗಿ ಚೀನಾ, ಅತ್ಯಂತ ಗೌರವದಿಂದ ಕಾಣುವ ವಿಶಿಷ್ಟ ಗುರು, ಕನ್ಫ್ಯೂಷಿಯಸ್. ಆತ ಒಬ್ಬ ಸಾಮಾಜಿಕ ತತ್ವಜ್ಞಾನಿ.ಚೀನೀ ವಿವೇಕದ ಪ್ರತೀಕವೆಂಬಂತೆ ಆತನನ್ನು ಕಾಣಲಾಗುತ್ತದೆ. ಕನ್ಫ್ಯೂಷಿಯಸ್‌ನನ್ನು ಅರಿಯದವನನ್ನು ನೈತಿಕವಾಗಿ ಋಜುಮಾರ್ಗಿ, ಮತ್ತು ಜ್ಞಾನಿ ಎಂದು ಚೀನೀಯರು ಒಪ್ಪುವುದಿಲ್ಲ. ಹಾಗಾಗಿ ಚೀನದಲ್ಲಿ ಇದೊಂದು ಧರ್ಮದ ಸ್ಥಾನವನ್ನೇ ಪಡೆದಿದೆ.

ದೇವಲೋಕ ಮತ್ತು ಮರ್ತ್ಯಲೋಕಗಳು ನಿರಂತರ ಕ್ರಿಯಾಶೀಲವಾಗಿದ್ದೂ, ಅವು ಸಾಮರಸ್ಯ ಮತ್ತು ಸಂತುಲನೆಯಲ್ಲಿ ಒಂದಾಗಿ ಮುಂದುವರಿದಿವೆ, ಈ ವಿಶ್ವಮಾದರಿಯ ಅನುಕರಣೆಯೇ ಮನುಷ್ಯರಿಗೆ ಸೂಕ್ತ ಮಾದರಿ ಎಂಬುದು ಕನ್ಫ್ಯೂಷಿಯಸ್‌ನ ತತ್ವ. ಸಿರಿಯಾ ದೇಶದ ವಿಚಾರದಲ್ಲಿ ತಾನು ಅನುಸರಿಸುತ್ತಿರುವ ವಿದೇಶ ನೀತಿಯ ಸಮರ್ಥನೆಗಾಗಿ ಚೀನಾ ಕನ್ಫ್ಯೂಷಿಯಸ್‌ನ ಕಥೆಗಳನ್ನು ಉಲ್ಲೇಖಿಸುತ್ತದೆಂದರೆ ಆತನ ಪ್ರಭಾವ ಎಷ್ಟು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಕನ್ಫ್ಯೂಷಿಯಸ್‌ನ ಒಂದು ಕಥೆ ಹೀಗಿದೆ: ಒಮ್ಮೆ ಕನ್ಫ್ಯೂಶಿಯಸ್‌ನನ್ನು ಆತನ ರಾಜ್ಯವಾದ 'ಲೂ'ನ ಮುಖ್ಯನ್ಯಾಯಾಧೀಶನನ್ನಾಗಿ ನೇಮಿಸಲಾಯಿತು. ಒಂದು ದಿನ ತಂದೆಯೊಬ್ಬ, ತನಗೆ ಸಲ್ಲಬೇಕಾದ ಮರ್ಯಾದೆಯನ್ನು ತನ್ನ ಮಗ ನೀಡುತ್ತಿಲ್ಲವಾದ್ದರಿಂದ, ಅವನಿಗೆ ತಕ್ಕ ಶಿಕ್ಷೆ ನೀಡಿ ತನಗೆ ನ್ಯಾಯ ಕೊಡಿಸಬೇಕೆಂದು ದೂರು ಸಲ್ಲಿಸಿದ. ಆ ಮಗನಾದರೂ ತನ್ನ ತಂದೆ ಪಿತೂರಿ ಮಾಡುತ್ತಿದ್ದಾನೆಂದು ದೂರು ಹೇಳಿದ. ನಾಯ್ಯಾಧೀಶ ಕನ್ಫ್ಯೂಶಿಯಸ್ ಯಾವ ವಿಚಾರಣೆಯನ್ನೂ ಮಾಡದೆ ಆ ತಂದೆ ಮಕ್ಕಳನ್ನು ಮೂರು ತಿಂಗಳ ಕಾಲ ಒಂದೇ ಕೋಣೆಯಲ್ಲಿ ಸುಮ್ಮನೇ ಕೂಡಿಹಾಕಿಸಿದ. ಮೂರು ತಿಂಗಳ ಕೊನೆಯಲ್ಲಿ ಆ ತಂದೆಯು ಕನ್ಫ್ಯೂಶಿಯಸ್‌ನನ್ನು ಕಂಡು ತಾವಿಬ್ಬರೂ ಶಾಂತಿಯುತವಾದ ಒಪ್ಪಂದಕ್ಕೆ ಬಂದಿದ್ದು ತಮ್ಮ ದೂರನ್ನು ಹಿಂಪಡೆಯುವುದಾಗಿ ತಿಳಿಸಿದ. ಇದಕ್ಕೆ ಸಮ್ಮತಿಸಿ ಕನ್ಫ್ಯೂಶಿಯಸ್ ಅವರನ್ನು ಬಿಡುಗಡೆಗೊಳಿಸಿದನು. ಇದರಿಂದ ಅಸಮಧಾನಗೊಂಡ ಇತರ ಮಂತ್ರಿಗಳು ಕರ್ತವ್ಯ ಚ್ಯುತಿಯೆಸಗಿದ ಮಗನನ್ನು ಶಿಕ್ಷಿಸದೆ ಆತನೊಡನೆ ಕನ್ಫ್ಯೂಶಿಯಸ್ ಶಾಮಿಲಾಗಿದ್ದಾನೆ ಎಂದು ಆರೋಪ ಮಾಡಿದರು. ನಿಜ, ಮಗನನ್ನು ಸೆರೆಯಲ್ಲಿರಿಸುವುದು ಕನ್ಫ್ಯೂಷಿಯಸ್‌ಗೆ ಕಷ್ಟವೇನೂ ಆಗುತ್ತಿರಲಿಲ್ಲ, ನಿಜಕ್ಕೂ ಅವನನ್ನು ಸೆರೆಯಲ್ಲಿರಿಸಿದರೆ ಮೇಲ್ನೋಟಕ್ಕೆ 'ನ್ಯಾಯ' ಗೆಲುವು ಪಡೆದಂತೆ ಕಂಡರೂ ಮುಂದೆ ತಂದೆಯ ಪಾಡೇನಾಗುತ್ತಿತ್ತು? ತಾಯಿಗೆ ಸಂಕಟವಾಗುತ್ತಿತ್ತು, ಬಂಧು‌ಬಾಂಧವರಿಗೆ ತಂದೆಯ ಹೃದಯಹೀನತೆಯ ಬಗ್ಗೆ ಅಸಮಧಾನವುಂಟಾಗುತ್ತಿತ್ತು. ಸೆರೆಯಲ್ಲಿದ್ದ ಮಗನಿಗೆ ಜೀವನ ಪೂರ್ತಿ ತಂದೆಯ ವಿರುದ್ಧ ದ್ವೇಷವಿರುತ್ತಿತ್ತು. ತಂದೆಯೂ ಕೂಡ ಜೀವನ ಪೂರ್ತಿ ಅಪರಾಧಿ ಪ್ರಜ್ಞೆಯಿಂದ ನರಳುತ್ತಿದ್ದ. ಮೇಲ್ನೋಟಕ್ಕೆ ನ್ಯಾಯಸಮ್ಮತವೆನಿಸಬಹುದಾದ ತೀರ್ಪು ಕುಟುಂಬದಲ್ಲಿ ಒಡಕನ್ನುಂಟುಮಾಡುತ್ತಿತ್ತು. ಯಾರಿಗೂ ಸುಖವಿರುತ್ತಿರಲಿಲ್ಲ.

ಕೌಟುಂಬಿಕ,ಅಥವಾ ಸಾಮುದಾಯಿಕ ಸಮಸ್ಯೆಯೊಂದು ಉದ್ಭವಿಸಿದಾಗ ಕುಟುಂಬ, ಅಥವಾ ಸಮುದಾಯದ ಸಮಗ್ರತೆಯನ್ನು ಗಮನದಲ್ಲಿರಿಸಿಕೊಂಡು ಮಾತುಕತೆ ಮತ್ತು ಅಂತರಂಗ ನಿರೀಕ್ಷಣೆಗಳ ಮೂಲಕ ಸಂಬಂಧಿಸಿದವರು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದೇ ಸೂಕ್ತ. ಬಾಹ್ಯ ಮಧ್ಯವರ್ತಿಗಳು ಅಥವಾ ಪಂಚಾಯತರು ಇದನ್ನು ಗಮನಿಸಬೇಕು. ಸುಮ್ಮನೆ ಒಂದು ಪಕ್ಷವನ್ನು ಬೆಂಬಲಿಸಿ ಮತ್ತೊಂದನ್ನು ವಿರೋಧಿಸುವುದು ಎರಡೂ ಪಕ್ಷಗಳ ನಡುವಿನ ದ್ವೇಷವನ್ನು ಮತ್ತಷ್ಟು ಹೆಚ್ಚಿಸಿ. ಪರಿಸ್ಥಿತಿಯನ್ನು ಬಿಗಡಾಯಿಸುತ್ತದೆ. ಹಾಗಾಗಿ ಸದುದ್ದೇಶದಿಂದಲೇ ನೀಡಿದ ತೀರ್ಪು ದುಷ್ಪರಿಣಾಮವನ್ನೇ ಉಂಟುಮಾಡುತ್ತದೆ. ಕನ್ಫ್ಯೂಶಿಯಸ್ ಈ ಸಮಸ್ಯೆಯನ್ನು ನಿರ್ವಹಿಸಿದ ರೀತಿ, ಎರಡೂ ಪಕ್ಷಗಳ ಮೇಲಿನ ಕಾಳಜಿಯ ನೆಲೆಯಿಂದ ಮೂಡಿಬಂದ ದೀರ್ಘಕಾಲೀನ ಹಿತಚಿಂತನೆ ಎನ್ನಬಹುದು.

ಇನ್ನೊಂದು ಕಥೆ : ಕನ್ಫ್ಯೂಷಿಯಸ್ ಬದುಕಿದ್ದ ಕಾಲದಲ್ಲಿ ಚೀನಾದ ವಿವಿಧ ಪ್ರಾಂತ್ಯಗಳ ನಡುವೆ ಯುದ್ಧಗಳು ನಡೆಯುತ್ತಿದ್ದು, ಒಂದು ಪ್ರಾಂತ್ಯದವರು ಮತ್ತೊಂದು ಪ್ರಾಂತ್ಯದವರಿಂದ ಬಂಧಿಸಲ್ಪಟ್ಟು ಅಲ್ಲಿ ಗುಲಾಮರಾಗಿರುತ್ತಿದ್ದರು.. ಕನ್ಫ್ಯೂಷಿಯಸ್‌ನ ಪ್ರಾಂತ್ಯವಾದ ಲೂ ವಿನಲ್ಲಿದ್ದ ಪದ್ಧತಿಯ ಪ್ರಕಾರ ಹೊರಪ್ರಾಂತ್ಯಗಳಲ್ಲಿ ಬಂಧಿಸಲ್ಪಟ್ಟ ತಮ್ಮ ಪ್ರಾಂತ್ಯದ ಜನರನ್ನು ದಂಡ ತೆತ್ತು ಬಿಡಿಸಿದವರಿಗೆ ಬಹುಮಾನ ನೀಡಲಾಗುತ್ತಿತ್ತು.

ಹೀಗಿರುತ್ತ ಒಮ್ಮೆ ಝಿ ಗಾಂಗ್ ಎಂಬ ಕನ್ಫ್ಯೂಷಿಯಸ್‌ನ ಶ್ರೀಮಂತ ಶಿಷ್ಯನೊಬ್ಬ ಹಲವಾರು ಗುಲಾಮರನ್ನು ಹೊರ ಪ್ರಾಂತ್ಯದಿಂದ ಬಿಡಿಸಿ, ಬಹುಮಾನ ಸ್ವೀಕರಿಸಲು ನಿರಾಕರಿಸಿದ. ತಾನು ಉದಾತ್ತವಾದುದ್ದೇನನ್ನೋ ಮಾಡಿದೆ ಎಂಬುದು ಅವನ ಭಾವನೆಯಾಗಿತ್ತು. ಈ ಸಂಗತಿ ತಿಳಿದಾಗ ಕನ್ಫ್ಯೂಷಿಯಸ್ ಆತನನ್ನು ಟೀಕಿಸುತ್ತಾನೆ ಕಾರಣ: ಲೂ ಪ್ರಾಂತ್ಯದ ಜನ ಬಡವರಾಗಿದ್ದು, ಝಿ ಗಾಂಗ್ ನ ನಡವಳಿಕೆಯಿಂದಾಗಿ ಬಹುಮಾನ ಸ್ವೀಕರಿಸುವುದು ನಾಚಿಕೆಯ ಸಂಗತಿ ಎಂಬ ಭಾವನೆ ಜನರಲ್ಲಿ ಮೂಡಿದರೆ ಹೊರ ಪ್ರಾಂತ್ಯಗಳಲ್ಲಿ ಬಂಧಿಯಾದವರನ್ನು ಬಿಡಿಸಲು ಜನ ಮುಂದೆಬರದೇ ಹೋಗಬಹುದು. ಬಂಧಿಸಲ್ಪಟ್ಟವರನ್ನು ಬಿಡಿಸುವ ಸರ್ಕಾರದ ಪ್ರಯತ್ನಕ್ಕೆ ಇದರಿಂದ ಅಡ್ಡಿಯಾಗಬಹುದು. ಝಿ ಗಾಂಗ್‌ನ ನಡತೆಯಿಂದ ಆತನಿಗೆ ಒಳ್ಳೆಯ ಹೆಸರು ಬಂದರೂ ಅದರಿಂದ ದೇಶಕ್ಕೆ ಒಳಿತಾಗುತ್ತಿರಲಿಲ್ಲ. ಸ್ವಲ್ಪ ಕಾಲ ಒಳ್ಳೆಯದು ಮಾಡಿದಂತೆ ಕಂಡರೂ ದೀರ್ಘಾವಧಿಯಲ್ಲಿಅದರಿಂದ ತೊಂದರೆಯೇ ಆಗುತ್ತಿತ್ತು

ಮತ್ತೊಂದು ಕಥೆ :: :ಒಮ್ಮೆ ಕನ್ಫ್ಯೂಷಿಯಸ್‌ನ ಇಬ್ಬರು ಶಿಷ್ಯರು ಜಗಳವಾಡಿಕೊಳ್ಳುತ್ತಾರೆ; ಅವರಲ್ಲೊಬ್ಬ ಸವಾಧಾನಿ, ಸದಾ ಶಾಂತನಾಗಿರುವವನಾದರೆ ಮತ್ತೊಬ್ಬ ಬುದ್ಧಿವಂತ, ಕರುಣಾಮಯಿ, ಅದರೆ ಮಹಾ ಕೋಪಿಷ್ಠ ಏನಾದರೂ ಮಾಡಬೇಕೆಂದು ಅವನಿಗೆ ಅನ್ನಿಸಿದರೆ ಅದನ್ನವನು ಮಾಡಿಯೇ ತೀರುತ್ತಿದ್ದ. ಯಾರಾದರೂ ತಡೆಯಲು ಪ್ರಯತ್ನಿಸಿದರೆ ಅವನಿಗೆ ಮಹಾಕೋಪ ಬರುತ್ತಿತ್ತು.ಇಂಥದೊಂದು ಕೋಪದ ಪ್ರಸಂಗದ ನಂತರ ಅವನ ಬಾಯಿಂದ ರಕ್ತ ಒಸರತೊಡಗಿತು. ಇದರಿಂದ ಭೀತನಾದ ಆ ಶಿಷ್ಯ ಗುರುವಿನ ಬಳಿಗೆ ಓಡಿ ಬಂದ. 'ಗುರುಗಳೇ, ನಾನು ಬದುಕುವುದಿಲ್ಲವೆನಿಸುತ್ತಿದೆ, ಈ ದೇಹವನ್ನೇನು ಮಾಡಲಿ? ನಾನು ಇನ್ನು ಮುಂದೆ ವಿದ್ಯಾಭ್ಯಾಸ ಮಾಡದಿರುವುದು ಒಳ್ಳೆಯದೆನಿಸುತ್ತದೆ. ನೀವು ನನ್ನ ಗುರುಗಳು, ನನ್ನ ತಂದೆಯಂತೆ ನನ್ನನ್ನು ಪ್ರೀತಿಸಿದ್ದೀರಿ, ಹೇಳಿ ಈ ದೇಹವನ್ನೇನು ಮಾಡಲಿ.?' ಎಂದು ಆರ್ತನಾಗಿ ಕೇಳಿಕೊಳ್ಳುತ್ತಾನೆ.

ಕನ್ಫ್ಯೂಷಿಯಸ್ ತನ್ನ ಶಿಷ್ಯನಿಗೆ ಕೋಪದಿಂದಾಗುವ ಅನಾಹುತವನ್ನು ವಿವರಿಸುತ್ತಾನೆ. ಮನುಷ್ಯನಿಗೆ ಮುವ್ವತ್ತೆರಡು ಹಲ್ಲುಗಳಿದ್ದರೂ ಆ ಹಲ್ಲುಗಳ ನಡುವಿರುವ ಒಂದು ನಾಲಗೆ ಹಲ್ಲುಗಳಿಗಿಂತ ಹೆಚ್ಚು ದೀರ್ಘಕಾಲ ಬಾಳುತ್ತದೆ ಏಕೆಂದರೆ ಕಠಿಣವಾದ ಹಲ್ಲುಗಳು ತಮ್ಮ ಕಾಠಿಣ್ಯದ ಕಾರಣದಿಂದಲೇ ಬೇಗ ಅವಸಾನ ಹೊಂದಿದರೆ, ನಾಲಗೆ ತನ್ನ ನಮ್ಯತೆಯ ಕಾರಣದಿಂದಲೇ ಮನುಷ್ಯನಿಗೆ ಉಪಯುಕ್ತವಾಗಿ ಹೆಚ್ಚು ಕಾಲ ಬದುಕುತ್ತದೆ ಎಂಬ ನಿದರ್ಶನವನ್ನು ನೀಡಿ ತನ್ನ ಶಿಷ್ಯನಿಗೆ ಜೀವನದರ್ಶನ ಮಾಡಿಸುತ್ತಾನೆ

ಮಗದೊಂದು ಕಥೆ : ಕನ್ಫ್ಯೂಷಿಯಸ್ ಒಂದು ಹಳ್ಳಿಯನ್ನು ಹಾದು ಹೋಗುತ್ತಿದ್ದಾಗ ರೈತನೊಬ್ಬ ತನ್ನ ಮಕ್ಕಳೊಡಗೂಡಿ ಬಾವಿಯಿಂದ ನೀರನ್ನು ಎಳೆಯುತ್ತಿರುವುದನ್ನು ನೋಡುತ್ತಾನೆ. ಆ ಕಾಲಾದಲ್ಲಿ ನೀರನ್ನು ಎಳೆಯಲು ಎತ್ತುಗಳನ್ನು ಬಳಸುವ ಪದ್ಧತಿ ಚೀನಾದಲ್ಲಿ ಬಳಕೆಯಲ್ಲಿದ್ದು ಈ ರೈತನ ನಡೆ ಕನ್ಫ್ಯೂಷಿಯಸ್‌ಗೆ ಅಚ್ಚರಿ ಹುಟ್ಟಿಸಿ ಅವನು ರೈತನಲ್ಲಿ ಈ ಬಗ್ಗೆ ವಿಚಾರಿಸಿದಾಗ, ಆತ ತಾನು ೮೫ ವರ್ಷವಯಸ್ಸಿನವನಾಗಿದ್ದು ತನ್ನ ೩೦ ವರ್ಷ ವಯಸ್ಸಿನ ಮಕ್ಕಳ ಸಮಕ್ಕೆ ದುಡಿಯಬಲ್ಲವನಾಗಿರುವುದು ತನ್ನ ದೈಹಿಕ ಶ್ರಮದ ಫಲವೇ ಎನ್ನುತ್ತಾನೆ ತನ್ನ ಮಕ್ಕಳೂ ಸಹ ತನ್ನಂತೆ ಶ್ರಮ ವಹಿಸಿ ದುಡಿದು ದೀರ್ಘಕಾಲ ಬದುಕಲಿ ಎಂಬುದೇ ಇದರ ಹಿಂದಿನ ಉದ್ದೇಶ ಎನ್ನುತ್ತಾನೆ

ಶುದ್ಧ ಲೌಕಿಕ ವಿವೇಕ, ಸಾರ್ವಜನಿಕ ನೈತಿಕತೆ, ಕೌಟುಂಬಿಕ ಬದ್ಧತೆಗಳಂತಹ ಮೌಲ್ಯಗಳ ಪ್ರತೀಕವಾಗಿ ಕನ್ಫ್ಯೂಷಿಯಸ್ ಚೀನೀ ಜನಮಾನಸದಲ್ಲಿ, ಇಂದಿಗೂ ನೆಲೆಯೂರಿದ್ದಾನೆ.

ನಿರೂಪಣೆ : ಎಂ ರಾಜು

ನವಿಲುಗರಿ



ಒಂದು ಸ್ಥಾವರದ ಜಾಹೀರಾತು


ಕಣ್ಣೀರು ತುಂಬಿಕೊಂಡಿದ್ದೇನೆ ಗೆಳೆಯಾ
ಇದೇ ನನ್ನ ಪಿತ್ರಾರ್ಜಿತ ಆಸ್ತಿಯಂತೆ
ಜಾಹೀರಾತು ಅನಿವಾರ್ಯ

ರೇಡಿಯೋದಲ್ಲಿ ಸತ್ಯಂ ಶಿವಂ ಸುಂದರಂ
ಹಾಡು ತೇಲಿ ಬರುತ್ತಿದೆ
ಎಲ್ಲಿ ಕಳೆದುಹೋದೆ ನೀನು?
ಎದೆಗೊರಗಿಕೊಳ್ಳಲು
ತಲೆ ನೇವರಿಸಲು
ಅಪ್ಪಿ ಮುದ್ದಾಡಲು ಬಳಿ ನೀನಿಲ್ಲ.

ನೀನಿತ್ತ ನೆನಪುಗಳು
ಹೃದಯ ತುಂಬಿ
ನಿನ್ನನ್ನು ಪ್ರತಿಷ್ಠಾಪನೆಗೊಳಿಸಿರುವ
ನನ್ನ ದೇಹವೆಂಬ ಸ್ಥಾವರದ ಗುಡಿ
ದಿನೇ ದಿನೇ ಪರಿಶುದ್ಧವಾಗುತ್ತಲೇ ಇದೆ

ಈ ಶುದ್ಧಿಯ ವ್ಯಸನದಲ್ಲಿ
ನಾನೇ ಇಲ್ಲವಾಗುವ ಭಯ


ಹೀಗಾಗುವ ಮೊದಲು
ನೀ ಎಲ್ಲಿದ್ದರೂ-ಹೇಗಿದ್ದರೂ
ತಕ್ಷಣ ಬಂದುಬಿಡು



ನಿನ್ನ ಬೆವರ ಕೊಳೆ
ನ್ನ ಮೈ ಮೆತ್ತಿಕೊಳ್ಳಲಿ
ತ್ಯಾಗದ ಭಾರದಿಂದ ಹಣ್ಣಾಗಿರುವ ನನ್ನ ಮನದಲ್ಲಿ
ಚಿಗುರೆಲೆಯೊಂದು ಜನ್ಮಿಸಲಿ

-ಆರ್.ಜ್ಯೋತಿ ಗುರುಪ್ರಸಾದ್

ರಾತ್ರೆಯ ಹುಡುಕುತ್ತಾ




"ಕಳ್ಳೇಮಳ್ಳೆದೇವ್ರು
ಕಾಲ್ಕಿಸ್ಕಂಡ್ ದೇವ್ರು
ಮೂರುಳ್ಳಾಗಿ
ಹಳ್ಳಕ್ ಬಿದ್ರು!..."

ಇತ್ತ ನಗರದ-
ಮಲ್ಲಿಗೆ ವೃತ್ತದಲ್ಲಿ
ಮೂರು ಮೊಳ ಮಲ್ಲಿಗೆ ಮುಡಿಸಿ
ಅಮ್ಮಾ!
ಇವುಳ ಪಕ್ಕ ನಡೆಯೋನಿಗೆ
ಕೈಯುಗುರು ಕತ್ತಿ
ಬಾಯುಗುಳು ಬೆಂಕಿ!
ಇನ್ನೀವತ್ತು ಇವಳ ತಿಥಿ!!ತಜ್ಞರು:

ಹೇಳಬೇಕಿತ್ತದರ ಹೆಸರನ್ನ
ಕೇಳಬೇಕಿತ್ತದರ ಕನಸನ್ನ
ನೋಡಿದ್ದ ಕಾಡಿದ್ದ
ಕಣ್ಮುಚ್ಚಿಹಾರಿದ್ದ.


ಚಿತ್ರಗಳು : ವಿಜಯಶ್ರೀ ಹಾಲಾ



ಅದೇನೂ ಅಲ್ಲ ಸುಖ ಅಂತ ಅವನೂ;
ಇದೇನು ಹೀಗಂತಿ ನೀನು
ನೋವಿರಬೇಕೇನೊ ಎಂದಿವನೂ

ಸುತ್ತಾಡುವ ಕುರ್ಚಿಯಲಿ
ನಿಟ್ಟುಸಿರು ಬಿಟ್ಟರು.

ಅತ್ತ ಹಳ್ಳಿಯ:
ಹುಲ್ಲುಸೊಪ್ಪು ತಂದೋರು
ಮಾರಲಾಗದೆ ಸಂತೆಯಿಂದ ವಾಪಸ್ಸು
ದನ ಹೊಡಕೊಂಡ್ ಬಂದೋರು
ಸೌದೆ ಹೊತ್ತು ನಿಂದೋರು
ರಾಗಿ ಬೀಸ್ತಾ ಹಾಡಿದೋರು
ಎಲ್ಲಾ ಎಲ್ಲಿಗ್ಹೋದರು ಎಲ್ಲಾ?



ಯಾರಾರೂ
ಎಲ್ಲೀಂತ ಹುಡುಕುತಾರೆ?
ಹೇಗೇಂತ ಹುಡುಕುತಾರೆ?

ಕೂಸುಗಳು ನಮಗಿನ್ನು ನಿದ್ದೆಯಿಲ್ಲ!

-ಕೆ.ಪಿ. ಮೃತ್ಯುಂಜಯ

ಕೊಡಗಿನ ಹನಿಗಳು...

ಕಾಡು ನಿನ್ನದು ನಾಡು ನಿನ್ನದು
ಜಾಡು ನಿನ್ನದು ಸೂಡು ನಿನ್ನದು
ನಿನ್ನ ಕರುಣೆಯಿಂದಲೇ
ಹಾಡು ನನ್ನದು

-೨-

ಕಾಫಿ ಕೊಯ್ದ ಕೈಗಳನು
ಕಾವೇರಮ್ಮ ಕೈಬಿಡಳು
ತುಸು ಹೆಚ್ಚೇ ಸಿಟ್ಟಾದರೂ
ಶಾಂತಳಾಗುವಳು!


-೩-

ಸೂರಿಲ್ಲದಿದ್ದರೂ ಬದುಕು
ತಾನೇ ಚಿಗುರುವುದು
ಬೇರಿಲ್ಲದವರಿಗೆ ಬಲು ಕಷ್ಟ!

-೪-

ಹಿರಿದ ಕಿರಿದೆನ್ನದೆ ಎಲ್ಲವನ್ನೂ
ಕೊಚ್ಚಿ ಕೊಂಡು ಹೋಯಿತು!
ಸಮಾನತೆ-
ಪ್ರಳಯವಾಗಬೇಕು!

-೫-



ಐದು ವರ್ಷ ಕೊಡಗಿನಲ್ಲಿದ್ದೆ
ಈಗ ಹಾರಿಹೋಗಿದೆ ನಿದ್ದೆ
ಮೋಡಗಳ ಹಿಂಡು ನೋಡಿದರೆ
ಎದೆ ನಡುಗುವುದು
ಮತ್ತೆ ನಳನಳಿಸಲಿ ಕೊಡಗು
ಮನ ಹಾರೈಸುವುದು

-ಸವಿತಾ ನಾಗಭೂಷಣ

ಸಾಹಿತ್ಯ–ಸಂಸ್ಕೃತಿ–ರಾಜಕಾರಣ ಇತ್ಯಾದಿ | ಕೆಲವು ಟಿಪ್ಪಣಿಗಳು

ಸುಮತೀಂದ್ರ ನಾಡಿಗ : ಒಂದು ನೆನಪು




ಇತ್ತೀಚೆಗೆ ನಿಧನರಾದ ಹಿರಿಯ ಲೇಖಕ ಸುಮತೀಂದ್ರ ನಾಡಿಗರು ಬಹಳ ಕುತೂಹಲಕಾರಿ ವ್ಯಕ್ತಿ. ನವ್ಯದ ಆರಂಭದಲ್ಲೇ ಆ ಚಳುವಳಿಯ ಪ್ರವರ್ತಕರಾದ ಅಡಿಗ ಮತ್ತು ಅವರ ನೆಚ್ಚಿನ ಶಿಷ್ಯ ಬಳಗವಾಗಿದ್ದ ಅನಂತಮೂರ್ತಿ, ಲಂಕೇಶ್ ಮತ್ತಿತರೊಂದಿಗೆ ಗುರುತಿಸಿಕೊಂಡಿದ್ದ ಅವರು ಇವರಾರ ಎತ್ತರಕ್ಕೂ ಏರಲಾಗದೆ, ಆ ಎತ್ತರಗಳನ್ನು ಎಟುಕಿಸಿಕೊಳ್ಳಲು ಜಿಗಿದೂ ಜಿಗಿದೂ ಸುಸ್ತಾದವರು ಮತ್ತು ಆ ಜಿಗಿತದ ಭಾವ ಭಂಗಿಗಳಿಂದಲೇ ನಮ್ಮೆಲ್ಲರ ಗಮನ ಸೆಳೆದು ಕೆಲವೊಮ್ಮೆ ತಮಾಷೆಗಳನ್ನೂ ಸೃಷ್ಟಿಸುತ್ತಿದ್ದವರು ಮತ್ತು ಸ್ವತಃ ತಾವೇ ಆ ತಮಾಷೆಗಳಿಗೆ ಈಡಾಗುತ್ತಿದ್ದವರು. ಉದಾಹರಣೆಗೆ,ತಮ್ಮ ಓರಿಗೆಯ ಮಾತ್ರವಲ್ಲ, ತಮ್ಮ ಮೆಚ್ಚಿನ ಕವಿ ಬೇಂದ್ರೆಯವರಲ್ಲೂ ಕೃತಿಚೌರ್ಯದ ಸುಳಿವುಗಳನ್ನು ಪತ್ತೆ ಹಚ್ಚಿ ಸುದ್ದಿ ಮಾಡಿದವರು.


ಅವರನ್ನು ಆಗ ನಾವೆಲ್ಲ ಅವರು ಅನುವಾದಿಸಿದ್ದ ನಾಟಕ 'ಬೊಕ್ಕ ತಲೆಯ ನರ್ತಕಿ'ಯೊಂದಿಗೇ ಗುರುತಿಸಿದ್ದುದು. ನಂತರ ಅವರು ಏನೆಲ್ಲ–ಕವಿತೆ, ವಿಮರ್ಶೆ, ಸಾಹಿತ್ಯ ಚರಿತ್ರೆ–ಬರೆದರೂ ಅವರ ಈ ಜಿಗಿತಗಳೇನೂ ಗುರಿ ಮುಟ್ಟಿದಂತೆ ಕಾಣಲಿಲ್ಲ. ಆದರೆ ಆ ಕಾಲದ ವಿಚಾರ ಸಂಕಿರಣ ಮತ್ತು ಅನೌಪಚಾರಿಕ ಗುಂಪು ಚರ್ಚೆಗಳಲ್ಲಿ ತಮ್ಮದೇ ಅರೆ ಗಂಭೀರ–ಅರೆ ಲಘುಶೈಲಿಯಲ್ಲಿ ಭಾಗವಹಿಸುತ್ತಾ ಚರ್ಚೆಗಳನ್ನು ಜೀವಂತಗೊಳಿಸುತ್ತಿದ್ದ ನಾಡಿಗರು ನವ್ಯದ ಎಲ್ಲ ಮುಂಚೂಣಿ ನಾಯಕರಂತೆಯೇ ಇಂಗ್ಲಿಷ್ ಮೇಷ್ಟ್ರಾಗಿದ್ದವರು. ಗೋವಾದ ಖಾಸಗಿ ಕಾಲೇಜೊಂದರಲ್ಲಿದ್ದ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲೊಂದು ತುಲನಾತ್ಮಕ ಅಧ್ಯಯನವೆಂಬ ಹೆಸರಿನಲ್ಲಿ ಇಂಗ್ಲಿಷ್ ಮೇಷ್ಟ್ರ ಹುದ್ದೆಯೊಂದನ್ನು ಸೃಷ್ಟಿಸಿ ಅಲ್ಲಿ ಪುನರ್‌ವಸತಿಗೊಳಿಸಿದವರು, ಆ ಕಾಲದ ಸಾಹಿತ್ಯ ವಸತಿ ಖಾತೆಯ ಸಚಿವರಾಗಿದ್ದ ಜಿಎಸ್ಸೆಸ್. ನಿವೃತ್ತಿಯ ನಂತರವೋ ಅಥವಾ ಅದಕ್ಕೆ ಮುನ್ನವೋ ಅವರು ಗಾಂಧಿ ಬಜಾರಿನಲ್ಲಿ ಪುಸ್ತಕದಂಗಡಿಯೊಂದನ್ನು ತೆರೆದು ಸಾಹಿತ್ಯ ಪ್ರಚಾರ ಕೈಂಕರ್ಯವನ್ನು ಕೈಗೊಂಡಿದ್ದೂ ಉಂಟು. ಈ ಕೈಂಕರ್ಯದ ಉದ್ದೇಶ ಪುಸ್ತಕ ಮಾರಿ ಸಂಪಾದನೆ ಮಾಡಿದುದಕ್ಕಿಂತ ಹೆಚ್ಚಾಗಿ ತಮ್ಮ ಸಾಹಿತ್ಯ ಹರಟೆಗೆ ಗಿರಾಕಿಗಳನ್ನು ಸಂಪಾದಿಸಿಕೊಳ್ಳುವುದೇ ಆಗಿತ್ತು.

ಇದೆಲ್ಲದಕ್ಕಿಂತ ಮುನ್ನ ನಾಡಿಗರು ರೈಲಿನಲ್ಲಿ ಗೋವಾದಿಂದ ಬೆಂಗಳೂರಿಗೆ ಬರುವಾಗಲೆಲ್ಲ ರೈಲು ಐದು ನಿಮಿಷ ನಿಲ್ಲುತ್ತಿದ್ದ ಧಾರವಾಡ ನಿಲ್ದಾಣಕ್ಕೆ ಕವಿಗಳಿಂದ ಕಿಕ್ಕಿರಿದಿದ್ದ ಆ ಊರಿನ ಯಾರದರೊಬ್ಬ ಕವಿಮಿತ್ರನನ್ನು ಬರಹೇಳಿ ಅವರ ಮುಂದೆ ತಮ್ಮ ಹೊಸ ಕವನವೊಂದನ್ನು ಓದಿ ಮುಂದೆ ಸಾಗುತ್ತಿದ್ದ ಅವರ ಸಾಹಿತ್ಯ ಪ್ರೇಮದ ವೈಖರಿ ಜಗತ್ಪ್ರಸಿದ್ಧವಾದದ್ದು. ಹೀಗೆ ತಮ್ಮ ಸಾಹಿತ್ಯ ರಾಶಿಗಿಂತ ಹೆಚ್ಚಾಗಿ ತಮ್ಮ ತಲೆಮಾರಿನ ಯುವಜನರಲ್ಲಿ ಸಾಹಿತ್ಯದ ಹುಚ್ಚು ಹತ್ತಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರು ತಮ್ಮ ಕೊನೆಯ ವರ್ಷಗಳಲ್ಲಿ ಹಿಂದೂವಾದಿ ರಾಜಕಾರಣದೊಂದಿಗೆ ತಮ್ಮನ್ನು ಗುರುತಿಸಿಕೊಂಡು ತಮ್ಮ ಬಹತೇಕ ಹಳೆಯ ಗೆಳೆಯರ ಅಸಮಧಾನಕ್ಕೆ ತುತ್ತಾದರು. ಆದರೆ ಇದು ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ' ಗೌರವ ಪ್ರಶಸ್ತಿಯನ್ನು ನೀಡದಿರಲು ಕಾರಣವಾಗಬಾರದಿತ್ತು. ಏಕೆಂದರೆ ಅವರ ಮೊಣಕಾಲೆತ್ತರಕ್ಕೂ ಬರದ ಅನೇಕ ಪುಡಿ ಸಾಹಿತಿಗಳಿಗೆಲ್ಲ ಯಾವುದಾವುದೋ ಕಾರಣಕ್ಕೆ ಈ ಅಕಾಡೆಮಿ ಈ ಪ್ರಶಸ್ತಿ ನೀಡಿರುವ ದಾಖಲೆ ಇದೆ.

ಕುವೆಂಪು V/S ಅಂಬೇಡ್ಕರ್

ತಿಂಗಳ ಹಿಂದೆ ಕಾಲೇಜು ಉಪನ್ಯಾಸಕರಿಗಾಗಿ (ಕನ್ನಡ ಅಧ್ಯಾಪಕರೇ ಹೆಚ್ಚಾಗಿದ್ದ) ಏರ್ಪಾಡಾಗಿದ್ದ ಶಿಕ್ಷಣ ಕಾರ್ಯಾಗಾರವೊಂದಕ್ಕೆ ಹೋಗಿದ್ದೆ. ಅಲ್ಲಿ ಕುವೆಂಪು ಮತ್ತು ಕನ್ನಡ ಸಂಸ್ಕೃತಿ ಬಗ್ಗೆ ಮಾತಾಡಲು ನನ್ನನ್ನು ಆಹ್ವಾನಿಸಲಾಗಿತ್ತು. ಅಂದು ನಾನು ಮುಖ್ಯವಾಗಿ ಕನ್ನಡ ಸಂಸ್ಕೃತಿಯಿಂದ ಕಡಿದುಕೊಂಡಿದ್ದ ನವ್ಯ ಸಾಹಿತ್ಯ ಸಂಪ್ರದಾಯವು ತನ್ನ ಪಾಶ್ಚಾತ್ಯ ಆಧುನಿಕ ಸಂವೇದನೆಯ ಆವಾಹನೆಯಿಂದಾಗಿ ಕುವೆಂಪು ಅವರನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಹೇಗೆ ವಿಫಲವಾಯಿತು ಎಂಬುದನ್ನು ವಿವರಿಸಿದೆ. ಇದೇ ದೊಡ್ಡ ಮತ್ತು ಸಂಕೀರ್ಣ ಚರ್ಚೆಗೆ ಕಾರಣವಾಗಬಹುದೆಂಬುದು ನನ್ನ ನಿರೀಕ್ಷೆಯಾಗಿತ್ತು. ಆದರೆ 'ಚರ್ಚೆಯ ಸಂದರ್ಭದಲ್ಲಿ ನನಗೆ ಎದುರಾದದ್ದು ಬೇರೆ ನೆಲೆಯ ಪ್ರಶ್ನೆಗಳೇ : ಕುವೆಂಪು ಏಕೆ





ಜೀತ ಪದ್ಧತಿಯ ವಿರುದ್ಧ ಬರೆಯಲಿಲ್ಲ?, ಕುವೆಂಪು ಏಕೆ ಅಂಬೇಡ್ಕರ್‌ರ ಬಗೆ ಬರೆದಿಲ್ಲ? ಪೂನಾ ಒಪ್ಪಂದದ ಬಗ್ಗೆ ಏಕೆ ಬರೆದಿಲ್ಲ? ನಾನು ಸಾಹಿತಿಗಳನ್ನು ಇಂತಹ ಪ್ರಶ್ನೆಗಳ ಮೂಲಕ ಅರ್ಥ ಮಾಡಿಕೊಳ್ಳಲಾಗದೆಂದೂ, ಬದಲಿಗೆ ಅವರ ಸಾಹಿತ್ಯ ಎಷ್ಟರಮಟ್ಟಿಗೆ ಗುಣಮಟ್ಟದ ಸಾಹಿತ್ಯವಾಗಿದೆ ಎಂಬುದನ್ನು ಚರ್ಚಿಸುವ ಮೂಲಕ ಅರ್ಥ ಮಾಡಿಕೊಳ್ಳಬೇಕೆಂದೂ ಹೇಳಿದೆ. ಆದರೆ ಇವರಾರೂ ನನ್ನ ಈ ಮಾತುಗಳನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ನಾನು ಅವರಿಗೆ, ಕೇಂದ್ರ ಸರ್ಕಾರ ತೊಂಬತ್ತರ ದಶಕದಲ್ಲಿ ಅಂಬೇಡ್ಕರ್‌ರಿಗೆ 'ಭಾರತ ರತ್ನ' ಗೌರವ ನೀಡಿ ಅವರ ಜನ್ಮದಿನಾಚರಣೆಗೆ ಅಧಿಕೃತ ರಜೆ ಘೋಷಿಸಿ ಮತ್ತು ಅದರ ಶತಮಾನೋತ್ಸವ ಆಚರಣೆಗೆ ನಿರ್ಧರಿಸುವವರೆಗೂ ಅಂಬೇಡ್ಕರ್ ಕರ್ನಾಟಕದ ಮಟ್ಟಿಗಾದರೂ ಸಾರ್ವಜನಿಕ ಜೀವನದಲ್ಲಿ ಅಷ್ಟಾಗಿ ಚರ್ಚೆಗೆ ಬಂದಿರಲಿಲ್ಲವಾಗಿ, ಅದಕ್ಕಿಂತ ಬಹು ಹಿಂದಿನ ಕಾಲದ ಕುವೆಂಪು, ಅವರ ಬಗ್ಗೆ ಬರೆಯುವ ಸಾಧ್ಯತೆ ಇರಲಿಲ್ಲ ಎಂದು ಎಷ್ಟೇ ವಿವರಿಸಿದರೂ ಈ ಮೇಷ್ಟ್ರುಗಳಾರೂ ಜಪ್ಪಯ್ಯ ಅನ್ನಲಿಲ್ಲ. ಒಬ್ಬರಂತೂ, ಕುವೆಂಪು ಸವರ್ಣೀಯರನ್ನು ಎದುರು ಹಾಕಿಕೊಳ್ಳುವ ಆತಂಕದಿಂದ ಜೀತದ ವಿರುದ್ಧ ಬರೆದಿರಲಾರರೆ? ಎಂಬ ಪ್ರಶ್ನೆ! ನಾನು ಅವರಿಗೆ ಕುವೆಂಪು ಸವರ್ಣೀಯರನ್ನು, ವಿಶೇಷವಾಗಿ ತಮ್ಮದೇ ಜಾತಿಯ ಒಕ್ಕಲಿಗರನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದು ನಿಮಗೆ ತಿಳಿದಿಲ್ಲವಾದ್ದರಿಂದ ಇಂತಹ ಪ್ರಶ್ನೆ ಕೇಳುತ್ತಿದ್ದೀರಿ ಎಂದು ಉತ್ತರಿಸಿದೆ. ತಕ್ಷಣವೇ, ಮಹಾಡ್ ಕೆರೆ ನೀರಿನ ಸತ್ಯಾಗ್ರಹ, ಪೂನಾ ಒಪ್ಪಂದ, ಹಿಂದೂ ಕೋಡ್ ಬಿಲ್ ಇತ್ಯಾದಿಗಳು ಅಷ್ಟು ಸುದ್ದಿ ಮಾಡಿದರೂ ಕುವೆಂಪು ಏಕೆ ಮಾತಾಡಲಿಲ್ಲ ಎಂಬುದು ಇನ್ನೊಬ್ಬರ ಪ್ರಶ್ನೆ!

ನಾನು ಅಂಬೇಡ್ಕರ್ ಇನ್ನೂ ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಮುನ್ನವೇ 'ಜಲಗಾರ' ಮತ್ತು ಆನಂತರ 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್'ಗಳಂತಹ ನಾಟಕಗಳನ್ನು ನೀಡಿರುವ ಸಾಹಿತಿಯನ್ನು ಹೀಗೆ ಪ್ರಶ್ನಿಸಬಾರದೆಂದೂ, ಅಂತಹ ಸಾಹಿತ್ಯದ ಮೂಲಕ ಕುವೆಂಪು ನಮ್ಮ ಮನಸ್ಸನ್ನು ಹದ ಮಾಡಿದ್ದರಿಂದಲೇ ನಂತರದಲ್ಲಿ ಅಂಬೇಡ್ಕರ್ ಅವರ ವಿಚಾರಗಳನ್ನು ನಾವು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಸಹಾಯವಾಗಿದೆ ಎಂದು ಎಷ್ಟೇ ವಿವವರಿಸಿದರೂ ಈ ಅಂಬೇಡ್ಕರ್‌ವಾದಿ ಮೇಷ್ಟುಗಳು ಸುಮ್ಮನೆ ಕೂರಲಾಗದಾದರು. ನಾನು ಕೊನೆಗೆ 'ಕುವೆಂಪು ಗಾಂಧಿ ಮಾರ್ಗದ ಬಗ್ಗೆ ಸಹಾನುಭೂತಿ ಹೊಂದಿದ್ದು, ಅಂಬೇಡ್ಕರ್ ಮಾರ್ಗವನ್ನು ಒಪ್ಪದೇ ಇದ್ದಿರಬಹುದು' ಎಂದು ಹೇಳಿ ಈ ಚರ್ಚೆಯನ್ನು ಮುಗಿಸಬೇಕೆಂದಿದ್ದವನು, ಇದು ಬರೀ ನನ್ನ ಊಹೆಯ ಮಾತಾಗಬಹುದೆಂದು ಸುಮ್ಮನಾಗುವ ಹೊತ್ತಿಗೆ ಅಂದಿನ ಹಿರಿಯ ಅತಿಥಿ ಡಾ. ಕೆ. ಮರುಳಸಿದ್ಧಪ್ಪನವರು ಮಧ್ಯ ಪ್ರವೇಶಿಸಿ ಪ್ರತಿ ಬರಹಗಾರನ ವಿಚಾರ ಸ್ವಾತಂತ್ರ್ಯವನ್ನು ಮಾನ್ಯ ಮಾಡುವ ಅಗತ್ಯವನ್ನು ಒತ್ತಿ ಹೇಳಿದಾಗ ಅವರೆಲ್ಲ ಕೊನೆಗೂ ಮೌನವಾದರು.


ಈ ಚರ್ಚೆಯ ಮಧ್ಯೆ ಆಸ್ತಿಕ ಎಂಬ ಶಬ್ದ ಅಸ್ತಿ ಅಥವಾ ಅಸ್ತಿತ್ವ ಎಂಬ ಶಬ್ದದಿಂದ ಬಂದಿದ್ದು, ಅದರ ಅರ್ಥ ಜಗತ್ತಿನ ಮೂಲದಲ್ಲಿ ಏನೋ ಒಂದು "ಇದೆ' ಎಂದು ನಂಬಿದವರು ಆಸ್ತಿಕರು ಮತ್ತು ಆ ನಂಬಿಕೆ ಇಲ್ಲದವರು ನಾಸ್ತಿಕರು ಎಂದು ನಾನು ನೀಡಿದ್ದ ವಿವರಣೆಗೆ ವಿರುದ್ಧವಾಗಿ ಒಬ್ಬ ಮೇಷ್ಟ್ರು ಮಧ್ಯ ಪ್ರವೇಶಿಸಿ ನೀಡಿದ ವಿವರಣೆ ತುಂಬ ಕುತೂಹಲಕಾರಿಯಾಗಿತ್ತು. ಅವರ ಪ್ರಕಾರ ಆಸ್ತಿಕರು ಯಾರೆಂದರೆ ಸತ್ತಾಗ ಶವವನ್ನು ಸುಟ್ಟು ಯಾರ ಅಸ್ಥಿಯನ್ನು (ಅಂದರೆ ಮೂಳೆಯನ್ನು) ತೆಗೆದು ಪೂಜೆ ಸಲ್ಲಿಸುವರೋ ಆ ಕುಲದವರು. ಯಾರು ಶವವನ್ನು ಹೂಳುತ್ತಾರೋ ಅವರು ನಾಸ್ತಿಕರು. ಅಂದರೆ ಕ್ರಮವಾಗಿ ಬ್ರಾಹ್ಮಣರು ಮತ್ತು ಶೂದ್ರರು! ಎಲ್ಲ ಚರ್ಚೆಗಳನ್ನೂ ಜಾತಿ ಪರಿಭಾಷೆಗೆ ಇಳಿಸುವ ಗೀಳು ಮೇಷ್ಟ್ರುಗಳ ಮಧ್ಯೆ ಈ ಪಾಟಿ ಹಬ್ಬಿರುವ ಭಯಾನಕ ವಾಸ್ತವವನ್ನೂ, ಇವರ ಈ ಸಂಶೋಧನಾ ಪಾಂಡಿತ್ಯದ ವೈಖರಿಯನ್ನೂ ಮತ್ತು ಇವರ ಇದೆಲ್ಲ ಭಂಡ ಧೈರ್ಯವನ್ನೂ ಕಂಡು ನಾನು ಗಾಬರಿಯಾದೆ. ಇಂಥವರಿಂದ ಪಾಠ ಕೇಳುವ

(೧೮ನೇ ಪುಟಕ್ಕೆ

ಪುಸ್ತಕಾವಲೋಕನ

ಪು : ಸೂಲಾಡಿ ಬಂದೋ ತಿರುತಿರುಗೀ(ಬಾಳಕಥನ) ಲೇ: ಕೆ. ಸುಮಿತ್ರಾಬಾಯಿ
ಪ್ರ: ಅಭಿರುಚಿ ಪ್ರಕಾಶನ, ಮೈಸೂರು ಪು : ೩೪೪ ಬೆಲೆ :ರೂ. ೨೮೦/-

ಕೆಲ ದೃಷ್ಟಿದೋಷಗಳ ಒಂದು ಅದ್ಭುತ ನೆನಪಿನ ಚಿತ್ರ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜ ಶಾಸ್ತ್ರ ಪ್ರಾಧ್ಯಾಪಕಿಯಾಗಿ, ನಂತರ ತಮ್ಮ ಸೇವಾವಧಿಯ ಅಂತ್ಯದಲ್ಲಿ ಯುವರಾಜಾ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾದ ಸುಮಿತ್ರಾಬಾಯಿಯವರ ಬಾಳ ಕಥನ ಇದು. ಇವರು ಖ್ಯಾತ ಲೇಖಕ ದೇವನೂರ ಮಹಾದೇವ ಅವರ ಪತ್ನಿಯೂ ಆಗಿರುವುದರಿಂದ ಈ ಬಾಳ ಕಥನದಲ್ಲಿ ಮಹಾದೇವ ಅವರ ಬಾಳೂ 'ಕಥನ'ಗೊಂಡು ಹಲವು ಕುತೂಹಲಗಳಿಗೆ ಕಾರಣವಾಗಿದೆ. ಈ ಪುಸ್ತಕವನ್ನು ಓದಿ ಮುಗಿಸಿದಾಗ ಇದನ್ನು ಮುಖ್ಯವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸಬಹುದೆನ್ನಿಸಿತು. ಸುಮಿತ್ರಾಬಾಯಿಯವರ ಬೆರಗುಗೊಳಿಸುವ ನೆನಪಿನ ಚಿತ್ರಗಳ ಸರಮಾಲೆಯಂತಿರುವ ಅವರ ಬಾಲ್ಯ ಮತ್ತು ಸ್ನಾತಕೋತ್ತರ ಶಿಕ್ಷಣ ಪಡೆದು ಉಪನ್ಯಾಸಕಿಯಾಗುವ ತನಕದ ಬದುಕು ಮೊದಲ ಭಾಗವಾದರೆ, ದೇವನೂರ ಮಹಾದೇವ ಅವರೊಡನೆಯ ದಾಂಪತ್ಯದ ಸ್ವಾರಸ್ಯಕರ ವಿವರಗಳದ್ದು ಎರಡನೇ ಭಾಗ. ಮೂರನೇ ಭಾಗ ಅವರ ಮೊಮ್ಮೊಕ್ಕಳೊಡನೆಯ ವಿಶ್ರಾಂತ ಜೀವನದ–ಅವರ ವಿಶಿಷ್ಟ ಆಸಕ್ತಿ ಮತ್ತು ಕುತೂಹಲಗಳನ್ನು ಹೇಳುವ–ಹಲವು ಬಿಡಿ ಚಿತ್ರಗಳು.

ಮಂಡ್ಯದ ಬಳಿಯ ಲೋಕ ಪಾವನಿ ನದಿ ದಂಡೆಯ ಒಂದು ಕುಗ್ರಾಮವಾದ ತಾಳಶಾಸನದ ಒಂದು ದಲಿತ ಕುಟುಂಬದ ಮಗಳಾಗಿ ಹುಟ್ಟಿದ ಸುಮಿತ್ರಾ ಅವರು ಅಷ್ಟಾಗಿ ಜಾತಿ ಪದ್ಧತಿಯ ಸೋಂಕಿಲ್ಲದೆ ಬೆಳೆದ ಅದೃಷ್ಟವಂತೆ. ಇದಕ್ಕೆ ಒಂದು ಕಾರಣ, ಇವರ ತಂದೆ ಮತ್ತು ತಾಯಿಯ ವಂಶಗಳೆರಡೂ ಒಂದೆರಡು ತಲೆಮಾರುಗಳ ಹಿಂದಿನಿಂದಲೂ ಉನ್ನತ ಶಿಕ್ಷಣ ಪಡೆದು, ಸರ್ಕಾರಿ ಅಧಿಕಾರಿಗಳು, ವೈದ್ಯರು ಇತ್ಯಾದಿಯಾಗಿ ಸಮಾಜದಲ್ಲಿ ಪ್ರಭಾವಿ ವ್ಯಕ್ತಿಗಳಾಗಿದ್ದು ಇವರ ಕುಟುಂಬದಲ್ಲಿ ಆತ್ಮವಿಶ್ವಾಸವನ್ನು ನೆಲೆಗೊಳಿಸಿದ್ದುದು. ಹಾಗಾಗಿ ಇವರ ಕುಟುಂಬದ ಸದಸ್ಯರು ಸಮಾಜದ ಇತರ ಸಮುದಾಯಗಳೊಂದಿಗೆ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಸರಿಸಾಟಿಯಾಗಿ ನಿಂತು ಬೆಳೆದು ಬಾಳಿದ್ದು ಸಹಜವೇ ಆಗಿದೆ. ಇವರ ಕುಟುಂಬದ ಕಥೆಯನ್ನು ಕೇಳಿದರೆ ನಮ್ಮಂಥವರಲ್ಲಿ ದಲಿತ ಸಮುದಾಯದ ಬಗ್ಗೆ ಇರುವ ಒಂದು ಸಾರಾಸಗಟಾದ ಮರುಕದ ಚಿತ್ರ ಬದಲಾಗುವಂತಿದೆ. ಇದಕ್ಕೆ ತಕ್ಕನಾಗಿ ಸುಮಿತ್ರಾ ಅವರು ತಮ್ಮ ಕುಟುಂಬದ ಒಂದು ಟಿಸಿಲನ್ನು ನಂಜನಗೂಡು ಕಡೆಯ ನೇರಳೆ ಗ್ರಾಮದ ಮೇಲ್ಜಾತಿ ಹೆಣ್ಣುಮಗಳ ಸಂಬಂಧದೊಂದಿಗೆ ಗುರುತಿಸಿದರೆ, ಇನ್ನೊಂದು ಟಿಸಿಲನ್ನು ಶ್ರವಣಬೆಳಗೊಳದ ಕಡೆಯ ಜೈನ ಮುನಿಯೊಬ್ಬರ ಸಂಬಂಧದೊಂದಿಗೆ ಗುರುತಿಸುತ್ತಾರೆ. ಲೇಖಕಿಯ ಈ ವಂಶಾವಳಿಗಳ ಸಂಶೋಧನೆ ಬೆರಗುಗೊಳಿಸುವ ವಿವರಗಳಿಂದ ಕೂಡಿದ್ದು ಅವರ ಸಮಾಜಶಾಸ್ತ್ರದ ಅಧ್ಯಯನ ವೃತ್ತಿಗೆ ಒಪ್ಪುವಂಥದೇ ಆಗಿದೆ. ಇದೇ ಪ್ರತಿಭೆ ಮತ್ತು ಕುತೂಹಲ ಇವರು ಮಹಾದೇವ ಅವರ ವಂಶಾವಳಿ ಮತ್ತು ಅವರೊಂದಿಗೆ ದಾಂಪತ್ಯ ಆರಂಭಿಸುವ ಮೈಸೂರಿನ ಅಶೋಕಪುರಂನ ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ಶೋಧಿಸುವಲ್ಲಿಯೂ ಎದ್ದು ಕಾಣುತ್ತದೆ. ಇವರ ಈ ವಂಶಾವಳಿ ಅಧ್ಯಯನವನ್ನು ನೋಡಿದಾಗ ಎಲ್ಲ ಕುಟುಂಬಗಳ ವಂಶಾವಳಿಗಳನ್ನೂ ಹೀಗೆ ಅಧ್ಯಯನಕ್ಕೆ ಒಳಪಡಿಸಿದರೆ ಜಾತಿ ಶುದ್ಧಿ ಎಂಬುದು ಎಷ್ಟು ಹುಸಿ ಎಂಬುದು ಸಾಬೀತಾಗಿ ನಮ್ಮ ಜಾತಿ ಪದ್ಧತಿಯ ನಿಜ 'ಬಂಡವಾಳ' ಬಯಲಾದೀತೇನೋ!

ಅದೇನೇ ಇರಲಿ, ಸುಮಿತ್ರಾಬಾಯಿಯವರು ತಮ್ಮ ಕುಟುಂಬದ ಬಾಳು ಬದುಕಿನೊಂದಿಗೆ ಅದರ ಸದಸ್ಯರು ಮತ್ತು ಬಂಧುಬಾಂಧವರ ಸೂಕ್ಷ್ಮ ಸ್ವಭಾವವಗಳ ಹಾಗೂ ತಮ್ಮ ಹಳ್ಳಿಯ ಹಬ್ಬ ಹರಿದಿನಗಳ ಆಚರಣೆಗಳ ಮತ್ತು ತಮ್ಮ ಶಾಲಾದಿನಗಳ ಹಲವು ಕುತೂಹಲಕರ ಘಟನಾವಳಿಗಳ ವಿವರಗಳನ್ನು ಹೇಗೆ ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತಾರೆಂದರೆ ಅವರ ಅದ್ಭುತ ನೆನಪಿನ ಶಕ್ತಿ ಮಾತ್ರವಲ್ಲದೆ ಅವರ ಸರಳ ಸುಂದರ ನಿರೂಪಣಾ ಶೈಲಿಗೂ ನಾವು ಒಂದು ದೊಡ್ಡ ಸಲಾಂ ಹೇಳಲೇಬೇಕಾಗುತ್ತದೆ.

ತಮ್ಮ ತಾಯಿಯೂ ಸೇರಿದಂತೆ ಜಾತಿ ಬಾಂಧವರ ವಿರೋಧವನ್ನು ಹಿಮ್ಮೆಟ್ಟಿಸಿ ಮೈಸೂರಿನಲ್ಲಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅಧ್ಯಾಪಕಿಯಾದ ನಂತರ ಮದುವೆಯಾದ ಕೆಲವೇ ತಿಂಗಳುಗಳಲ್ಲಿ ಗಂಡನನ್ನು ಕಳೆದುಕೊಳ್ಳುವ ದುರಂತಕ್ಕೀಡಾಗುವ ಸುಮಿತ್ರಾ ಅವರ ಬದುಕಿಗೆ ಎರಡನೆಯ ಗಂಡನಾಗಿ ಮತ್ತು ಉಜ್ವಲಾ ಎಂಬ ಅವರ ಮೊದಲ ಮಗಳಿಗೆ ತಂದೆಯಾಗಿ ಪ್ರವೇಶಿಸುವವರು ನಮ್ಮ ದೇವನೂರ ಮಹಾದೇವ. ನಂತರ ಇಡೀ ಪುಸ್ತಕ ವರ್ಣಮಯ ವಿವರ ಮತ್ತು ವಿವರಣೆಗಳೊಂದಿಗೆ 'ಮಹಾದೇವ ವಿಜಯ'ವಾಗಿ ವಿಜೃಂಭಿಸುತ್ತದೆ ಎಂದರೆ ತಪ್ಪಾಗಲಾರದು. (ಮಹಾದೇವ ಅವರ 'ಬದುಕು–ಬರಹ'ಗಳನ್ನು ಆಧರಿಸಿ ಈ ಹಿಂದೆ ಸಿ. ಬಸವಲಿಂಗಯ್ಯನವರು ರಚಿಸಿ ನಿರ್ದೇಶಿಸಿದ್ದ ನಾಟಕವನ್ನು ನಾನು 'ದೇವನೂರ ಮಹಾತ್ಮೆ' ಎಂದು ವರ್ಣಿಸಿದ್ದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು!) ತಾವೇ 'ಕರಿಯ', 'ಕರಿ ನಾಗರ' 'ಏಣಿ' ಎಂದೆಲ್ಲ ಸಂದರ್ಭಕ್ಕೆ ತಕ್ಕಂತೆ ಮುದ್ದುಗರೆಯುವ ತಮ್ಮ ಗಂಡನ ಅಡ್ಡಾದಿಡ್ಡಿ ಉಡುಪು, ನಿದ್ದೆಗೇಡಿತನ, ಸೋಮಾರಿತನ ಮತ್ತು ಇವುಗಳಿಂದ ಸಂಭವಿಸುವ ಹಲವಾರು ಎಡವಟ್ಟುಗಳೊಂದಿಗೇ ಅವರು ಒಬ್ಬ ವ್ಯಕ್ತಿಯಾಗಿ ಮತ್ತು ಲೇಖಕರಾಗಿ ಹೊಂದಿರುವರೆಂದು ಹೇಳಲಾಗುವ ವಿಶಿಷ್ಟ ಶಕ್ತಿ–ಪ್ರತಿಭೆಗಳು ಲೇಖಕಿಯಿಂದ ಈ ಭಾಗದಲ್ಲಿ ಸಾಕಷ್ಟು ವೈಭವೀಕೃತ ಶೈಲಿಯಲ್ಲಿ ನಿರೂಪಿತವಾಗಿದ್ದು ಇವು ಓದುಗರ ಹುಬ್ಬೇರಿಸುವಂತಿವೆ. ಮಹಾದೇವ ಅವರನ್ನು ದೈವೀಕರಿಸುವ ಕೆಲವು ಸಂದರ್ಭಗಳೂ ಇಲ್ಲಿದ್ದು, ಇವು ಸುಮಿತ್ರಾ ಅವರು ನಂಬುವಂತೆ ತೋರುವ–ಈ ಪುಸ್ತಕದಲ್ಲೇ ಬೇರೆಡೆ ನಿರೂಪಿತವಾಗಿರುವ–ದೆವ್ವಗಳ ಕತೆಗಳಂತೆಯೇ ನಮ್ಮಲ್ಲಿ ತುಟಿಯಂಚಿನ ನಗೆಯನ್ನು ಮಾತ್ರ ಹುಟ್ಟಿಸಬಲ್ಲವಾಗಿವೆ.. ಇಂತಹ ವಿಷಯಗಳು ಸುಮಿತ್ರಾರಿಗೆ ನಿಜವೆನ್ನಿಸಿದರೂ ಪತ್ನಿಯಾಗಿ ಅವನ್ನು ಹೀಗೆ ದಾಖಲಿಸುವ ಅಗತ್ಯವಿರಲಿಲ್ಲ.

ಹಾಗೇ ದಲಿತ ಚಳುವಳಿಯ ತಮ್ಮ ಆವೃತ್ತಿಯ ಕಥೆ (ಇದರ ಹಲವು ಆವೃತ್ತಿಗಳಿವೆಯಲ್ಲ!) ಹೇಳುವ ಸಂದರ್ಭದಲ್ಲಿ ಮಹಾದೇವ ಅವರ ಬಗ್ಗೆ ಕೇಳಿ ಬಂದ ಟೀಕೆ–ಆರೋಪಗಳನ್ನು ಅವರ ಪತ್ನಿಯಾಗಿ ಇವರು ನಿರಾಕರಿಸುವ/ತಳ್ಳಿ ಹಾಕುವ ಅಥವಾ ಸ್ಪಷ್ಟನೆ ನೀಡುವ ಪ್ರಯತ್ನಗಳು ಗಂಡನ ರಕ್ಷಣೆಯ ಸಹಜ ಪ್ರಯತ್ನಗಳಂತೆ ಕಾಣುತ್ತವೆಯೇ ಹೊರತು ಅಷ್ಟು ಉಚಿತವಾಗಿ ತೋರುವುದಿಲ್ಲ. ಉದಾಹರಣೆಗೆ, ಈ ಸಂಬಂಧವಾಗಿ ಈಗ ನಮ್ಮೊಂದಿಗಿಲ್ಲದ ಕೆ.ಎಂ. ಶಂಕರಪ್ಪನವರ ಮೇಲೆ ಮಾಡಲಾಗಿರುವ 'ಸಣ್ಣತನ'ದ ಆರೋಪವನ್ನೇ, ಅವರನ್ನು ಬಲ್ಲವರು ಲೇಖಕಿಯ 'ಸಣ್ಣತನ' ಎಂದು ತಿರುಗಿಸಿ ಹೇಳಿದರೆ ಸುಮಿತ್ರಾ ಬಾಯಿಯವರು ಏನು ಹೇಳುವರು? ಜೊತೆಗೆ ಈ ತಮ್ಮೆಲ್ಲ ಸಮರ್ಥನೆಗಳಿಗೆ ಬೆಂಬಲವಾಗಿ ಉಲ್ಲೇಖಿಸುವ 'ಸಾಕ್ಷ್ಯ'ಗಳೂ ಈಗ ತಮ್ಮ ಬಳಿ ಇಲ್ಲವೆಂದೂ ಅವರು ಹೇಳುತ್ತಾರೆ. ಮಹಾದೇವ ಅವರು ತಮ್ಮ ವಿಶಿಷ್ಟ ಸಾಹಿತ್ಯ ಮತ್ತು ವಿಭಿನ್ನ ಚಿಂತನ ಶೈಲಿಗಳ ಮೂಲಕವೇ ಕರ್ನಾಟಕದ ಓರ್ವ ಅಸಾಧಾರಣ ವ್ಯಕ್ತಿ–ಶಕ್ತಿಯೆಂದು ಗುರುತಿಸಲ್ಪಟ್ಟಿದ್ದಾರೆ. ಆದರೆ ಅದು ಸಾಕಾಗದೆಂಬಂತೆ ಕೆಲವೊಮ್ಮೆ ಸ್ವತಃ ಮಹಾದೇವ ಅವರೇ ಮತ್ತು ಇಲ್ಲಿ ಅವರ ಪತ್ನಿ, ಅವರ ವ್ಯಕ್ತಿತ್ವದ ಮಾನವ ಸಹಜ ಓರೆ–ಕೋರೆಗಳನ್ನು ಮತ್ತು ದೌರ್ಬಲ್ಯಗಳನ್ನು ಮರೆಮಾಚಿ ಅವರನ್ನು ಓರ್ವ 'ಅಕಳಂಕ ಮಹಿಮ'ರನ್ನಾಗಿ ಬಿಂಬಿಸುವ–ಇಂತಹ–ಪ್ರಯತ್ನಗಳು ಏಕೋ, ತಿಳಿಯದಾಗಿದೆ.

ಮುಂದೆ, ಈ ತಮ್ಮ ಮತ್ತು ತಮ್ಮ ಪತಿ ಪರಮೇಶ್ವರರ ಕತೆಗಳ ಮಧ್ಯೆ ಸುಮಿತ್ರಾಬಾಯಿಯವರು ತಮ್ಮ ನೆನಪಿನಲ್ಲಿ ಮಕ್ಕಳಾದ ಉಜ್ವಲಾ ಮತ್ತು ಮಿತಾರ ಕತೆಗಳೇ ಇಲ್ಲವೆಂಬಂತೆ ಅವನ್ನು ಹಿನ್ನೆಲೆಗೆ ಸರಿಸಿರುವುದು–ಅವು ಆನುಷಂಗಿಕವೆಂಬಂತೆ ಒಂದೆರೆಡು ಕಡೆ ಮಾತ್ರ ಮಿಂಚಿ ಮಾಯುವಾಗುತ್ತವೆ– ಆಶ್ಚರ್ಯವನ್ನುಂಟು ಮಾಡುತ್ತದೆ. ಆದರೆ ಹೀಗೆ ತಾಯಿಯಾಗಿ ಅಷ್ಟಾಗಿ ಕಾಣಿಸಿಕೊಳ್ಳದ ಸುಮಿತ್ರಾ ಅವರು ಮೊಮ್ಮಕ್ಕಳಾದ ಅರವಿಂದ ಮತ್ತು ರುಹಾನಿಯ ಬಾಲ್ಯಚೇಷ್ಟೆಗಳನ್ನು ಮತ್ತು ಮಾತುಗಾರಿಕೆಗಳನ್ನು ಬಹು ಹೆಮ್ಮೆ ಮತ್ತು ಮುದ್ದಿನಿಂದ ವಿವರವಾಗಿ ವರ್ಣಿಸುವ ಮೂಲಕ ಅಜ್ಜಿಯಾಗಿ ಮಾತ್ರ ಎದ್ದು ಕಾಣುತ್ತಾರೆ. ಇನ್ನು ಲೇಖಕಿ ಒಂದೆರಡು ಕಾಲೇಜುಗಳ ಪ್ರಾಂಶುಪಾಲೆಯಾಗಿ ಎದುರಿಸಿದ ಸವಾಲುಗಳು ಮತ್ತು ಪಕ್ಷಿ–ಪ್ರಾಣಿಗಳನ್ನು ಕುರಿತ ಅವರ ಪ್ರೀತಿ ಮತ್ತು ಆಸಕ್ತಿಗಳನ್ನು ಹೇಳುವ ಪ್ರಸಂಗಗಳು ಅವರ ವೃತ್ತಿಶೀಲತೆಯಲ್ಲಿನ ಜಾಣ್ಮೆ ಮತ್ತು ವ್ಯಕ್ತಿತ್ವದಲ್ಲಿನ ಮಾರ್ದವತೆಯ ಆಯಾಮಗಳನ್ನು ತೆರೆದಿಟ್ಟು ಅವರ ಬಗ್ಗೆ ವಿಶೇಷ ಗೌರವ ಮೂಡಿಸುವಂತಿದೆ.


ಈ ಪುಸ್ತಕದಲ್ಲಿ ಅಂಬೇಡ್ಕರರನ್ನು ವೈಯಕ್ತಿಕವಾಗಿ ಭೇಟಿಯಾಗಿ 'ಮುಖದ ಮೇಲೆ ಬೆಳಕು ಪ್ರತಿಫಲಿಸಿಕೊಂಡು' ಬಂದ ಇಬ್ಬರು ಮುವ್ವರು ಮಹನೀಯರ ಪ್ರಸ್ತಾಪ ಬರುತ್ತದೆ. ಅವರಲ್ಲೊಬ್ಬರಾದ ಪ್ರೊ. ಬಿಸಿಲಯ್ಯನವರು ತಾವು ಹೆಸರಾಂತ ಸಮಾಜಶಾಸ್ತ್ರ ಪ್ರಾಧ್ಯಾಪಕಿ ಡಾ. ಸಿ. ಪಾರ್ವತಮ್ಮನವರನ್ನು ಕಂಡ ಬಗ್ಗೆ ಹೇಳುವ ಈ ಇಂಗ್ಲಿಷ್ ಮಾತು ಡಾ. ಪಾರ್ವತಮ್ಮನವರನ್ನು ರೇಗಿಸಿತಂತೆ: 'I crossed her today morning near Maharani's College.' ರೇಗದಿದ್ದೀತೆ?

ಸುಮಿತ್ರಾ ಬಾಯಿಯವರನ್ನು ನಾನು ೪೦ ವರ್ಷಗಳಿಂದಲೂ ಬಲ್ಲೆ. ಹತ್ತಾರು ಬಾರಿ ಅವರೊಂದಿಗೆ ಮಾತಾಡಿದ್ದೇನೆ. ಒಂದೆರೆಡು ಬಾರಿ ಅವರು ಬಡಿಸಿದ ಊಟವನ್ನೂ ಮಾಡಿದ್ದೇನೆ. ಆದರೆ ಈ ಪುಸ್ತಕದಲ್ಲಿ ಅನಾವರಣಗೊಂಡಿರುವ ಅವರ ಜೀವನ ಪ್ರೀತಿ-ಕುತೂಹಲ, ಲವಲವಿಕೆ ಮತ್ತು ಮಾರ್ದವತೆಗಳು ನನಗೆ ಹೊಸದು. ಅವರಿಗೆ ಅಭಿನಂದನೆಗಳು.

-ಡಿ.ಎಸ್. ನಾಗಭೂಷಣ

ಪು **ಭಾರತ: ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆ** ಲೇ: ಡಾ.ಎಂ.ಡಿ. ಒಕ್ಕುಂದ
ಪ್ರ: **ಲಡಾಯಿ ಪ್ರಕಾಶನ**, ಧಾರವಾಡ. ಪು: ೨೦೦ ಬೆಲೆ: ರೂ. ೧೫೦/-

ಹಿಂಸೆಯ ಮೀಮಾಂಸೆಯ ಅನಾವರಣ



ರಾಷ್ಟ್ರ', 'ದೇಶಪ್ರೇಮ', 'ಗೋವು' ಮುಂತಾದ ಭಾವವೇಶದ ಮಾತುಗಳು ನಾಗರೀಕ ಸಮಾಜದ ಸ್ವಾಸ್ಥ್ಯವನ್ನೇ ಕೆಡಿಸುತ್ತಿರುವ ಈ ಕಾಲಘಟ್ಟದಲ್ಲಿ ಪ್ರಾಧ್ಯಾಪಕ ಮತ್ತು ಪ್ರಗತಿಪರ ಹೋರಾಟಗಾರರಾದ ಎಂ.ಡಿ. ಒಕ್ಕಂದ ಅವರ 'ಧಾರ್ಮಿಕ ಹಿಂಸೆ ಮತ್ತು ಸೌಹಾರ್ದತೆ' ಪುಸ್ತಕ ಪ್ರಕಟವಾಗಿದೆ. ಈ ಹೊತ್ತಿಗೆಯ ಶೀರ್ಷಿಕೆಯೇ ಸೂಚಿಸುವಂತೆ ಇದು ಧರ್ಮ ಮತ್ತು ರಾಜಕಾರಣದ ಅಪವಿತ್ರ ನೆಲೆಗಳು ಮತ್ತು ಇದರಿಂದ ಸ್ವಾಸ್ಥ ಸಮಾಜದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ವಿಶ್ಲೇಶಿಸುತ್ತದೆ. ಎಲ್ಲಾ ಬಗೆಯ ಹಿಂಸೆಗಳಿಗೂ ಧಾರ್ಮಿಕ ಕೆಸರಾಟಕ್ಕೂ ಇರುವ ಸಂಬಂಧ ಮತ್ತು ಇತಿಹಾಸದ ವ್ಯವಸ್ಥಿತ ತಿರುಚುವಿಕೆಯ ಐಡಿಯಾಲಜಿ ಕುರಿತು ಲೇಖಕರು ಇಲ್ಲಿ ಬೆಳಕು ಚೆಲ್ಲಿದ್ದಾರೆ. ನಾಗರೀಕತೆಯ ಬೆಳವಣಿಗೆಯ ಚಾರಿತ್ರಿಕ ಘಟ್ಟಗಳನ್ನು ವಿಶ್ಲೇಷಸುತ್ತಾ, ಸೌಹಾರ್ದತೆಯ ನೆಲೆಗಳನ್ನು ತನ್ನ ಮೌಲ್ಯವಾಗಿ ಸ್ವೀಕರಿಸಿದ ಅನೇಕ ಸಮುದಾಯಗಳು ಈ ಸಿದ್ಧಮಾದರಿ ತಿರುಚುವಿಕೆಯ ರಾಜಕಾರಣದಿಂದಾಗಿ ತಮ್ಮ ಶಾಂತಿಯ ನೆಲೆಗಳನ್ನು ಕಳೆದುಕೊಳ್ಳುತ್ತಿರುವುದನ್ನು ಎಂ.ಡಿ. ಒಕ್ಕುಂದ ಇಲ್ಲಿ ದಾಖಲಿಸಿದ್ದಾರೆ. ಮುಖ್ಯವಾಗಿ ಮುಸ್ಲಿಂ ರಾಜರು ಮತ್ತು ಅವರ ಆಡಳಿತಾವಧಿಯನ್ನು ಕೇವಲ ಮತೀಯ ದೃಷ್ಟಿಕೋನದಿಂದ ಮಾತ್ರ ನೋಡುತ್ತಿರುವ ಹಿಂದಿರುವ ಮನಃಸ್ಥಿತಿಯನ್ನು ಲೇಖಕರು ನಿರಾಕರಿಸಿ ಅದು ಪ್ರಭುತ್ವ ಮತ್ತು ವೈದಿಕಶಾದಿ ಪರಂಪರೆಯ ಹುನ್ನಾರ ಎಂದು ಹೇಳುತ್ತಾರೆ. ಮುಂದುವರೆದು, ಸಮಕಾಲೀನ ಕಾಲಘಟ್ಟದಲ್ಲಿ ಬಲಪಂಥೀಯ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಕೋಮುವಾದಿ ಮೀಮಾಂಸೆಯನ್ನು ವ್ಯವಸ್ಥಿತವಾಗಿ ಮುನ್ನಲೆಗೆ ತಂದಿರುವ ಹಿಂದಿರುವ ನೈಜ ರಾಜಕೀಯ ಕಾರಣಗಳನ್ನು ಇಲ್ಲಿ ಪ್ರಸ್ಥಾಪಿಸಲಾಗಿದೆ. ಈ ಬಗೆಯ ಚಾರಿತ್ರಿಕ ತಿರುಚುವಿಕೆಗೆ ಇರುವ ರಾಜಕೀಯ ಮತ್ತು ಧಾರ್ಮಿಕ ಆಯಾಮಗಳ ವಿಶ್ಲೇಷಣೆ ಈ ಪುಸ್ತಕದ ಒಂದು ಮುಖ್ಯ ಆಶಯವಾಗಿದೆ. ಅಂದರೆ, ಈ ಪಠ್ಯವು ಹಿಂಸೆಯ ಮೀಮಾಂಸೆಯನ್ನು ಅನಾವರಣಗೊಳಿಸುವ ಪ್ರಯತ್ನವಾಗಿದೆ ಎಂದೂ ನಾವು ತಿಳಿಯಬಹುದು.

ಹಿಂದೂ-ಮುಸ್ಲಿಂ ಸಮುದಾಯಗಳಿಗೆ ಇರುವ ಮತೀಯ ದ್ವೇಶ, ಅನುಮಾನ ಮತ್ತು ಆಗುತ್ತಿರುವ ಗಲಭೆಗೆ ಚರಿತ್ರೆಯನ್ನು 'ಸ್ವ-ಅನ್ಯ' ಎಂಬ ಕೃತಕ ವಿಭಜನೆಯಲ್ಲಿ ನೋಡುತ್ತಿರುವುದು ಕಾರಣ ಎಂದು ವಾದಿಸುತ್ತಾ, ಕೋಮುವಾದಿ ಇತಿಹಾಸವು ಟಿಪ್ಪು ಮುಂತಾದ ಮುಸ್ಲಿಂ ದೊರೆಗಳನ್ನು ರಾಕ್ಷಸರಂತೆ ಚಿತ್ರಿಸುತ್ತಿರುವುದನ್ನು ಮತ್ತು ಹಿಂದೂ ಸಾಮ್ರಾಜ್ಯದ (ಉದಾ: ವಿಜಯನಗರ) ಕಾಲಘಟ್ಟವನ್ನು ವಿಜೃಂಭಿಸುತ್ತಿರುವ ನೋಟಕ್ರಮ ಧಾರ್ಮಿಕ ಹಿಂಸೆಗೆ ಕಾರಣವಾಗಿದೆ ಎಂದು ಹೇಳುತ್ತಾರೆ. ಒಂದು ಬಗೆಯ ಕಲ್ಪಿತ ಆತಂಕವನ್ನು ಸೃಷ್ಟಿಸಿ ಜನ ಸಮುದಾಯಗಳ ನಡುವೆ ಇರುವ ಸೌಹಾರ್ದವನ್ನು ಒಡೆದು ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವ ಬಲಪಂಥೀಯ ಸಂಘಟನೆಗಳ ಕುರಿತು ತೀವ್ರ ಆಕ್ರೋಶ ಇಲ್ಲಿ ವ್ಯಕ್ತವಾಗಿದೆ. ಗತಕಾಲದ ವಿಜೃಂಭಣೆಯ ಮತ್ತು ಶಿವಾಜಿ ರೀತಿಯ ಐಕಾನ್‌ಗಳನ್ನು ಆರಾಧಿಸುವುದಕ್ಕೆ ಇದೇ ಬಗೆಯ ಕೃತಕ ಕೋಮುವಾದಿ ದೃಷ್ಟಿಕೋನ ಇರುವುದನ್ನು ಲೇಖಕರು ಇಲ್ಲಿ ಗುರುತಿಸುತ್ತಾರೆ. ಇದು ಲೇಖಕರ ಪಿಎಚ್.ಡಿ. ಪ್ರಬಂಧವೂ ಆಗಿರುವುದರಿಂದ ರಾಷ್ಟ್ರ, ಹಿಂಸೆ, ಧರ್ಮ ಮುಂತಾದ ಪಾರಿಭಾಷಿಕ ಪದಗಳಿಗೆ ಇರುವ ಪ್ರಾಥಮಿಕ ಅರ್ಥವನ್ನು ಸಹ ಇಲ್ಲಿ ನೀಡಲಾಗಿದೆ.

ನಿಜವಾಗಿಯೂ ನೋಡುವುದಾದರೆ, ಈ ಪುಸ್ತಕದ ಕೊನೆಯ ಭಾಗದಲ್ಲಿರುವ ಕನ್ನಡ ಕಾವ್ಯ ಪರಂಪರೆಯನ್ನು ಧಾರ್ಮಿಕ ಸಿದ್ಧಮಾದರಿ ಚೌಕಟ್ಟು ಮತ್ತು ಸೌಹಾರ್ದದ ನೆಲೆಯಿಂದ ಮಾಡಿರುವ ವಿಶ್ಲೇಷಣೆ ಬಹಳ ಮುಖ್ಯವಾದ ಭಾಗ. ಆದರೆ ಈ ವಿಶ್ಲೇಷಣೆಗೆ ಚಿಕ್ಕಜಾಗವನ್ನು ಮೀಸಲಾಗಿಟ್ಟಿರುವುದು ದೊಡ್ಡ ಕೊರತೆಯಾಗಿದೆ. ಮುಖ್ಯವಾಗಿ, ಕುವೆಂಪು ಮತ್ತು ಅಡಿಗರ ಕಾವ್ಯವನ್ನು ತೀವ್ರ ಪರೀಕ್ಷೆಗೆ ಒಡ್ಡಿರುವ ಲೇಖಕರು ಮಹಾ ಮಾನವತಾವಾದಿಯಾದ ಕುವೆಂಪು ಅವರ ಕಾವ್ಯ ಕೂಡ 'ಮುಸ್ಲಿಂ ಸಮುದಾಯವನ್ನು ಬಹಳ ಸೀಮಿತ ಅರ್ಥದಲ್ಲಿ ಸ್ವೀಕರಿಸಿದೆ' ಎಂದು ಅಭಿಪ್ರಾಯ ಪಡುತ್ತಾರೆ. ಈ ಬಗೆಯ ಸೀಮಿತ ಮತೀಯ ರಾಷ್ಟ್ರವಾದೀ ನೆಲೆಗೆ ಕುವೆಂಪು ಅವರ ದೃಷ್ಟಿಕೋನದ ಜೊತೆಗೆ ಆ ಕಾಲಘಟ್ಟವನ್ನು ಸಹ ವಿಶ್ಲೇಷಿಸಬೇಕೆಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. (ಪು. ೧೫೨) ಮುಸ್ಲಿಂಮರ ರಾಕ್ಷಸೀಕರಣ ಕುವೆಂಪು ಅವರ 'ಹಂಪಿಯ ಭೀಮ' ರೀತಿಯ ಕಾವ್ಯದಲ್ಲೂ ಪ್ರಕಟವಾಗಿದೆ ಎಂದು ವಾದಿಸಿ, ಮಹಾಕಾವ್ಯಗಳ ಕುವೆಂಪು ಬೇರೆ ಮತ್ತು ಮತೀಯವಾದೀ ಚರಿತ್ರೆಯ ಭಾಗವಾಗಿ ಬಂದಿರುವ ಹುಸಿ ರೋಷವನ್ನು ವ್ಯಕ್ತಪಡಿಸುವ ಕುವೆಂಪು ನೆಲೆ ಬೇರೆ ಎಂದು ವಿಶ್ಲೇಷಿಸುತ್ತಾರೆ.ಕವಿಯೊಬ್ಬನ ರೂಪಕ ಶಕ್ತಿಗೂ ಹಾಗೂ ಆತನ ರಾಜಕೀಯ ನಿಲುವುಗಳಿಗೂ ಇರುವ ವೈರುಧ್ಯವನ್ನು ಇಲ್ಲಿ ಗುರುತಿಸಲಾಗಿದೆ.

ಅಂತೆಯೇ ಗೋಪಾಲಕೃಷ್ಣ ಅಡಿಗರ ಬಲಪಂಥೀಯ ನಿಲುವನ್ನು ಪ್ರಶ್ನಿಸಿ, ಅಡಿಗರ ಕವಿತೆಗಿರುವ ಈ ಆಯಾಮಕ್ಕೆ ಕನ್ನಡ ಸಾಂಸ್ಕೃತಿಕ ಲೋಕ ಏಕೆ 'ಮೌನ' ಪ್ರತಿಕ್ರಿಯೆ ನೀಡಿದೆ ಎಂದು ಪ್ರಶ್ನಿಸಿದ್ದಾರೆ. ಅಡಿಗರ ಬಲಪಂಥೀಯತೆಯ ಒಲವಿಗೆ ಕಾರಣಗಳನ್ನು ಹುಡುಕುತ್ತಾ 'ಪ್ರತಿ ತಿಂಗಳೂ ಅಡಿಗರಿಗೆ ಕೇಶವ ಕೃಪಾದಿಂದ ಸಂದಾಯವಾದ ಆರ್ಥಿಕ ಸದಾಯವೂ' ಇರಬಹುದೆಂಬ ಲಂಕೇಶರ ವಾದವನ್ನು ಮುಂದಿಡುವುದು ಕುತೂಹಲಕಾರಿಯಾಗಿದೆ. ಆದರೆ ಅಡಿಗರಂತಹ ಒಬ್ಬ ಕವಿ 'ಆರ್ಥಿಕ ಸಹಾಯ'ಕ್ಕಾಗಿ ಕಾವ್ಯದಲ್ಲಿ ಕೃತಜ್ಞತೆಯನ್ನು ಸಲ್ಲಿಸುವ ಒತ್ತಡಕ್ಕೆ ಒಳಗಾಗುತ್ತಾರೆಯೆ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಅಡಿಗರ ಸೈನಿಕ ಭಾಷೆ, ಸಿದ್ಧಾಂತದ ಸರಳೀಕರಣ ಮುಂತಾದವುಗಳನ್ನು ಪ್ರಸ್ತಾಪಿಸುತ್ತಾ, ಇಡೀ ಕನ್ನಡ ಕಾವ್ಯ ಪರಂಪರೆಯನ್ನು ಪುನರ್ ವ್ಯಾಖ್ಯಾನಕ್ಕೆ ಒತ್ತಾಯಿಸುವ ಲೇಖಕರ ನಿಲುವನ್ನು ನಾವು ಇಲ್ಲಿ ಗಮನಿಸಬಹುದು. ಏನೇ ಇರಲಿ, ಅಡಿಗರ ಕಾವ್ಯಕ್ಕಾಗಲಿ ಅಥವಾ ಕುವೆಂಪು ಕಾವ್ಯಕ್ಕಾಗಲಿ ಇನ್ನೂ ಹಲವು ಬಗೆಯ ವಿಶಾಲ ಹರವು ಇರುವದನ್ನು ನಾವು ಮರೆಯಕೂಡದು.

ಒಟ್ಟಾರೆಯಾಗಿ, ಪುಸ್ತಕದ ಕೊನೆಯ ಭಾಗ ಇಡೀ ಪುಸ್ತಕದ ಮಹತ್ವದ ಮತ್ತು ಇನ್ನೂ ಹೆಚ್ಚಿನ ವಿಶ್ಲೇಷಣೆಯನ್ನು ಬೇಡುವ ಭಾಗವಾಗಿದೆ.

-ಟಿ. ಅವಿನಾಶ್


೧೬ನೇ ಪುಟದಿಂದ)

ಮಕ್ಕಳ ದೌರ್ಭಾಗ್ಯದ ಬಗ್ಗೆ ಚಿಂತಿತನಾದೆ. ಆದರೆ ಇದೆಲ್ಲದಕ್ಕಿಂತ ಹೆಚ್ಚಾಗಿ ನನಗೆ ಭಯಾನಕವಾಗಿ ಕಂಡದ್ದು ನಾಲ್ಕೈದು ಜನರ ಈ ಗುಂಪಿನ ಈ ಅವಾಂತರಗಳಿಗೆ ಯಾವ ಪ್ರತಿಕ್ರಿಯೆಯನ್ನೂ ತೋರದೆ ಕೂತಿದ್ದ ಇತರರ ಸ್ಮಶಾನ ಮೌನ! ಯಾರಿಗೆ ಹೇಳುವುದು ಇದನ್ನೆಲ್ಲ?

ನಂತರ ಗೊತ್ತಾದ ಇನ್ನೊಂದು ಸಂಗತಿ ಎಂದರೆ, ಮಾರನೆಯ ದಿನ ಆಗಮಿಸಿದ ಸಂಪನ್ಮೂಲ ವ್ಯಕ್ತಿಯೊಬ್ಬರು (ಇವರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರು) 'ಹೌದು ಕುವೆಂಪು ಅವರಲ್ಲಿ ಆ ಸಮಸ್ಯೆ ಇದೆ' ಎಂದು ಈ ಗುಂಪನ್ನು ಮತ್ತಷ್ಟು ಉತ್ತೇಜಿಸಿ ಹೋದರೆಂಬುದು.

-ಡಿಎಸ್ಸೆನ್

ತಿಂಗಳ ಸಾಲುಗಳು...



ನಮಗೆ ದೇವರು ಬೇಕು, ದೇವರು ಎನ್ನುತ್ತಾ ಆ ಭಾವನೆಯೊಂದಿಗೆ ನಾವು ಬೆರೆಸುವ ಅಂಥ ವಿಶ್ವಾಸ ಬೇಡ. ಈ ಬೇಡದ ಭಾಗವನ್ನು ಸುಲಿದು ಎಸೆದೆವಾದರೆ ಹತ್ತು ಮತಗಳು ದೇವರು ದೇವರು ಎನ್ನುವ ವಸ್ತು ಒಂದೇ ಎನ್ನುದು ವ್ಯಕ್ತವಾಗುತ್ತದೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204(Karnataka)